ಅಧ್ಯಕ್ಷರು: ನಾನು ಸೂಚನೆಯನ್ನು ಕೊಟ್ಟಿದ್ದೇನೆ. ತಾವು ಮತ್ತೆ ಮತ್ತೆ ನೀವು ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ನಮ್ಮನ್ನು ಹೊರಗೆ ಹಾಕುತ್ತೀರಿ, ಮತ್ತೆ ಏನು ಮಾಡುತ್ತೀರಿ?

ಅಧ್ಯಕ್ಷರು: ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ನಿಯಮ 69ರ ಕೆಳಗೆ notice ಕೊಡಿ, ಇದು ನಿಯಮ 60ರ ಅಡಿಯಲ್ಲಿ ಬರುವುದಿಲ್ಲವೆಂದು ಹೇಳಿದರೂ ನೀವು ಮತ್ತೆ ಕತೆಯನ್ನು ಹೇಳುತ್ತಿದ್ದೀರಿ, ಇದು ಸರಿಯಲ್ಲ.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ನಮ್ಮನ್ನು ಹೊರಗೆ ಹಾಕಬಹುದು, ಇದಕ್ಕಿಂತ ಹೆಚ್ಚಿಗೆ ನೀವು ಏನು ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಬಸವರಾಜ ರಾಯರೆಡ್ಡಿಯವರೆ, ಮಾತನಾಡಿ.

4. ನಿಯಮ 69ರ ಮೇಲೆ ಮುಂದುವರೆದ ಚರ್ಚೆ

ವಿಷಯ: ವಿಶೇಷ ಆರ್ಥಿಕ ವಲಯದ ಬಗ್ಗೆ (Special Economic Zone)

ಶ್ರೀ ಬಸವರಾಜ ರಾಯರೆಡ್ಡಿ:(ಯಲಬುರ್ಗಾ): ಮಾನ್ಯ ಅಧ್ಯಕ್ಷರೆ, ನಿಯಮ 69 ಮೇರೆಗೆ ವಿಶೇಷ ಆರ್ಥಿಕ ವಲಯದ ವಿಚಾರದಲ್ಲಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ದೇಶದಲ್ಲಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪನೆ ಮಾಡುವಂಥಾದ್ದು ಬಹಳ ಅವಶ್ಯಕವಿದೆ.

(ಈ ಹಂತದಲ್ಲಿ ಮಾನ್ಯ ಬಿ.ಆರ್. ಪಾಟೀಲ್ ಮತ್ತು ಮಾನ್ಯ ವೈಜನಾಥ್ ಪಾಟೀಲ್‌ರವರು ಸದನದ ಬಾವಿಗೆ ಬಂದು ಧರಣಿಗೆ ನಿಂತರು)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ.ಆರ್. ಪಾಟೀಲ್ ಮತ್ತು ಮಾನ್ಯ ವೈಜನಾಥ್ ಪಾಟೀಲ್‌ರವರು ಹಿರಿಯ ಸದಸ್ಯರಾಗಿದ್ದಾರೆ. ಅವರು ಏನು ಮನೆಗೆ ಕೇಳುತ್ತಾ ಇಲ್ಲ, ಕ್ಷೇತ್ರಕ್ಕೆ ಕೇಳುತ್ತಾ ಇಲ್ಲ. ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ದುಡ್ಡು ಬಿಡುಗಡೆ ಮಾಡುತ್ತಾ ಇಲ್ಲವೆಂದು ನಾವೇ ಹೇಳಿದ್ದೇವೆ. ಮಾನ್ಯ ಎಂ.ಪಿ.ಪ್ರಕಾಶ್‌ರವರೆ ಅನ್ಯಾಯವಾಗಿದೆಯೆಂದು ಹೇಳಿದ್ದಾರೆ. ಅದಕ್ಕೆ ಈ ಬಜೆಟ್‌ನಲ್ಲಿ They have not provided anything. ತಾವು ಏನೂ ಕೊಟ್ಟಿಲ್ಲ, ಅದಕ್ಕೆ ನಿಲುವಳಿ

ಸೂಚನೆಯನ್ನು ತಾವೇ ನಿಯಮ 69ಕ್ಕೆ convert ಮಾಡಿ, ಅದು discussion ಆಗಲಿ ಎಂದು ಹೇಳಿದರೆ ಮುಗಿಯಿತು.

ಅಧ್ಯಕ್ಷರು: ಇದು ನಿಯಮ 60ರ ಅಡಿಯಲ್ಲಿ ಬರುವುದಿಲ್ಲವೆಂದು ನಾನು ಆಗಲೇ ತಳ್ಳಿ ಹಾಕಿದ್ದೇನೆ. ಈಗ ನೀವು ನಿಯಮ 69ರ ಅಡಿಯಲ್ಲಿ ಒಂದು notice ಅನ್ನು ಕೊಡಿ, ನಾನು ಅವಕಾಶವನ್ನು ಕೊಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ಆ ಭಾಗದ ಜನರಿಗೆ ಅನ್ಯಾಯವಾಗಿದೆಯೆಂದು ಹೇಳುವುದಕ್ಕೆ ಬರುವುದಿಲ್ಲ. ಡಾ:ನಂಜುಂಡಪ್ಪನವರ ವರದಿಯ ಬಗ್ಗೆ ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ನಾನು ನಿಯಮ 69ರ ಅಡಿಯಲ್ಲಿ notice ಕೊಡಿಯೆಂದು ಹೇಳಿದರೂ ಸಹ, ಈಗ ನೀವು ಹಾಗೆ ಮಾಡಿ ಹೀಗೆ ಮಾಡಿಯೆಂದು ಹೇಳಿದರೆ ಹೇಗೆ? ಇದು 60ರ ಕೆಳಗೆ ಆಗುವುದಿಲ್ಲವೆಂದಾಗ, ನೀವು ನಿಯಮ 69ರ ಅಡಿಯಲ್ಲಿ ನೀವು notice ಅನ್ನು ಕೊಡಬಹುದಲ್ಲಾ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಬಂದಾಗ, ತಾವೇ ಅದನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಹೇಳುತ್ತಿದ್ದೀರಿ.

ಅಧ್ಯಕ್ಷರು: ಅದು ಯಾವಾಗ ಎಂದರೆ, ವಿಷಯ ಮಹತ್ವವಿದೆಯೆಂದಾಗ, ಅದರ ಬಗ್ಗೆ ಎಲ್ಲರೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡೋಣವೆಂದು ನಿಯಮ 69ರ ಅಡಿಯಲ್ಲಿ ಅವಕಾಶವನ್ನು ಕೊಡುತ್ತಿದ್ದೇನೆ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಇದು ಕೂಡ ಹಾಗೆ ಇದೆ.

ಅಧ್ಯಕ್ಷರು: ಇದು ಏನಾಗಿದೆಯೆಂದರೆ, ಈ ವಿಷಯ ಅನೇಕ ಬಾರಿ ಚರ್ಚೆಯಾಗಿದೆ. ಇದು ನಿಯಮ 60ರ ಕೆಳಗೆ ಬರುವುದಿಲ್ಲ, ಇದನ್ನು ತಳ್ಳಿ ಹಾಕಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಹೈದ್ರಬಾದ್-ಕರ್ನಾಟಕ, ಉತ್ತರ ಕರ್ನಾಟಕ, ಅನೇಕ ಭಾಗಗಳ ಬಗೆ ಇವತ್ತಿನವರೆಗೂ ಏನು ಆಗಿದೆ?

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ನನ್ನ ಒಂದು ಸಲಹೆ ಏನೆಂದರೆ S.E.Z ಬಗ್ಗೆ ಮುಖ್ಯಮಂತ್ರಿಯವರ ಉತ್ತರವಾದ ಮೇಲೆ you have to take up this. ಇವರು ಏನು ಕೊಟ್ಟಿದ್ದಾರೆ. ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ಆಯಿತು, ನೋಟೀಸ್ ಕೊಡಿ. ನಾನು ತೆಗದುಕೊಳ್ಳುತ್ತೇನೆ. ನಾನು ಒಪ್ಪಿಕೊಂಡಿದ್ದೆನಲ್ಲಾ, I am ready.

ಶ್ರೀ ಎನ್. ಧರ್ಮಸಿಂಗ್: ಆಯಿತು.

ಶ್ರೀ ಜೆ.ಸಿ.ಮಾಧುಸ್ವಾಮಿ: ಇವರು ತೆಗೆದುಕೊಳ್ಳುವುದಿಲ್ಲ. ಅದು ಮೂರು ದಿವಸ ಮುಂದಕ್ಕೆ ಹೋಗುತ್ತದೆ.

ಶ್ರೀ ಎನ್. ಧರ್ಮಸಿಂಗ್:ಅವರು ತೆಗೆದುಕೊಳ್ಳಲಿಲ್ಲವೆಂದರೆ, ಪ್ರತಿಭಟನೆ ಮಾಡೋಣ. ಅವರು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರು, ಮಾತನ್ನು ಹೇಗೆ ಮೀರುತ್ತಾರೆ? ಅವರು ಕೊಡುತ್ತೇನೆಂದು ಹೇಳಿದ ಮಾತಿನ ಮೇಲೆ ಭರವಸೆ ಇದೆ.

ಶ್ರೀ ವಾಟಾಳ್ ನಾಗರಾಜ್: ಈಗಲೇ ಅವಕಾಶ ಕೊಡಿ.

(ಶ್ರೀ ಬಿ.ಆರ್.ಪಾಟೀಲ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು: ತಾವು notice ಕೊಡಿ. ಇದಕ್ಕೆ ನಿಯಮಗಳು ಇವೆ. ತಾವು ತಮ್ಮ ಸ್ಥಾನಕ್ಕೆ ಹೋಗಿ.

(ಶ್ರೀ ಬಿ.ಆರ್.ಪಾಟೀಲ್‌ರವರು ಸದನದ ಬಾವಿಯಲ್ಲಿ ನಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ತಾವು ಮತ್ತೆ ಮತ್ತೆ ಈ ರೀತಿ ಹೇಳುತ್ತಾ ಇದ್ದರೆ, waste of time ಆಗುತ್ತದೆ. ದಯಮಾಡಿ ತಾವು ನಯಮ 69ರ ಕೆಳಗೆ ನೀವು notice ಕೊಡಿ, ನಾನು ತೆಗೆದುಕೊಳ್ಳುತ್ತೇನೆ. ತಾವು ದಯಮಾಡಿ ನಿಮ್ಮ ಸ್ಥಳಕ್ಕೆ ಹೋಗಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಡಾ:ನಂಜುಂಡಪ್ಪನವರ ವರದಿ ಕಾರ್ಯಗತವಾಗಿಲ್ಲ. ಆ ಭಾಗದ ಜನರಿಗೆ ಬಹಳ ನೋವಾಗಿದೆ. ಡಾ:ನಂಜುಂಡಪ್ಪನವರ ವರದಿಗೆ ನೇಮಕ ಮಾಡಿದ ಉದ್ದೇಶವೇನು? ಅದು ಸಫಲವಾಗಿಲ್ಲ.

ಅಧ್ಯಕ್ಷರು: ತಾವು ನಿಯಮ 60ರ ಅಡಿಯಲ್ಲಿ ಕೊಟ್ಟಿರುವಂಥಾದ್ದನ್ನು ತಳ್ಳಿ ಹಾಕಿದ್ದೇನೆ. ಅದು ಅನೇಕ ಬಾರಿ ಇಲ್ಲಿ ಚರ್ಚೆಯಾಗಿದೆ.

ಶ್ರೀ ಎನ್. ಧರ್ಮಸಿಂಗ್: ನಾನು ಹೇಳುವುದೇನೆಂದರೆ, ತಾವು ನಿಯಮ 69ರ ಮೇಲೆ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೇನೆಂದು ಹೇಳಿದರೆ ಮುಗಿಯುತ್ತದೆ. ಇಲ್ಲಿ ಇವರು ಬರೆದು ಕೊಟ್ಟಿರುವುದು ಏನಾಗುತ್ತದೆ? ತಾವೇ ಹೇಳಿ.

ಶ್ರೀ ವಾಟಾಳ್ ನಾಗರಾಜ್: ಉತ್ತರ ಕರ್ನಾಟಕವನ್ನು ಕಡೆಗಾಣಿಸಿದ್ದಾರೆ, ಹೈದ್ರಾಬಾದ್ - ಕರ್ನಾಟಕವನ್ನು ಕಡೆಗಾಣಿಸಿದ್ದಾರೆ, ಇದು ಇರುವ ಪರಿಸ್ಥಿತಿ.

ಅಧ್ಯಕ್ಷರು: ನಾನು ಅದನ್ನು ತಳ್ಳಿಹಾಕಿದ್ದೇನೆ.

(ಶ್ರೀ ಬಿ.ಆರ್.ಪಾಟೀಲ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು: ನೀವು notice ಕೊಡಿಯೆಂದು ಹೇಳಿದ್ದೇನೆ. ನೀವು ಅದನ್ನೇ convert ಮಾಡಿಯೆಂದು ಏಕೆ ಕೇಳುತ್ತೀರಿ? ನೀವು notice ಕೊಡಿ. ನಾನು ಕೆಲವು ನಿಯಮಗಳ ಪ್ರಕಾರ ಮಾಡಬೇಕಾಗುತ್ತದೆ. ಆ ಕಾರಣದಿಂದ ಇದು ನಿಯಮ 69ರ ಅಡಿಯಲ್ಲಿ ಚರ್ಚೆಯಾಗಬೇಕಾಗಿರುವಂಥಾ ವಿಚಾರ. ಆ ಕಾರಣದಿಂದ ನೀವು ನಿಯಮ 69ರ ಅಡಿಯಲ್ಲಿ notice ಕೊಡಿಯೆಂದು ಹೇಳಿದ್ದೇನೆ. ಅದನ್ನು, if you stand on prestige, if you insist, I cannot help.

(ಶ್ರೀ ಬಿ.ಆರ್.ಪಾಟೀಲ್‌ರವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ, ಕೆಲವು ನಿಯಮಗಳನ್ನು ಮಾತ್ರ ಮಾತನಾಡಬೇಕಾಗುತ್ತದೆ. ನಾನು ಆ ರೀತಿ ನೋಡಿದರೆ ಚರ್ಚೆಗೆ ಅವಕಾಶವನ್ನು ಕೊಡಬಾರದು.ಏನು ಹೇಳುತ್ತಾ ಇದ್ದೀರಿ. ನೀವು ಬಜೆಟ್ ಮೇಲೆ ಮಾತನಾಡಬೇಕಾಗಿತ್ತು. ನೀವು demands ಮೇಲೆ ಮಾತನಾಡಬೇಕಾಗಿತ್ತು. ಇದು ಅನೇಕ ಸಾರಿ ಸದನದಲ್ಲಿ ಚರ್ಚೆಯಾಗಿದೆ. ನೀವು ಸುಮ್ಮನೆ ಹೇಳುತ್ತಿದ್ದೀರಿ, ಇದು ಏನಾಗಿದೆಯೆಂದರೆ, ನಿಮಗೆ ಇಷ್ಟ ಬಂದ ಹಾಗೆ House ನಡೆಸುವುದಕ್ಕೆ ಆಗುವುದಿಲ್ಲ, ನೀವು ನಿಮ್ಮ ಸ್ಥಳಕ್ಕೆ ನಡೆಯಿರಿ.

(ಈ ಹಂತದಲ್ಲಿ ಶ್ರೀ ಬಿ.ಆರ್.ಪಾಟೀಲ್‌ರವರು ಹಾಗೂ ಶ್ರೀ ವೈಜನಾಥ್ ಪಾಟೀಲ್‌ರವರು ತಮ್ಮ ಸ್ಥಳಕ್ಕೆ ತೆರಳಿದರು)

ಅಧ್ಯಕ್ಷರು: ತಾವು ದಾಖಲೆಗಳನ್ನು ಕೊಡಿ, ನಾನು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದರೂ, ನೀವು ಈ ರೀತಿ ಮಾಡಿದರೆ ಹೇಗೆ?

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಈ ಆರೋಪ ಸರಿಯಲ್ಲ. ಏಕೆಂದರೆ ಬೇಡಿಕೆಗಳ ಮೇಲೆ ಚರ್ಚೆಯಾಗುವ ಸಮಯದಲ್ಲಿ ಹಣಕಾಸಿನ ಸಚಿವರು ಡಾ:ನಂಜುಂಡಪ್ಪನವರ ವರದಿ ಎಂದು ಹೇಳಿ ಹಣವನ್ನು ಕೊಡಲಿಲ್ಲ.

ಅಧ್ಯಕ್ಷರು: ಇಲ್ಲಿ ಇದು ಅನೇಕ ರೂಪದಲ್ಲಿ ಚರ್ಚೆ ನಡೆದಿದೆ. ಇದು ನಿಯಮ 60 ಅಡಿಯಲ್ಲಿ ಬರುವುದಿಲ್ಲ.

ಶ್ರೀ ಎನ್. ಧರ್ಮಸಿಂಗ್: ಬಜೆಟ್ ಶಿಕಾರಿಪುರಕ್ಕೆ, ಹಾಸನಕ್ಕೆ, ಕೊಡುವುದಕ್ಕೆ ಅಲ್ಲ

ಅಧ್ಯಕ್ಷರು: ತಾವು ಏನು ಬೇಕೊ ಮಾತನಾಡಿ, ನಾನು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೆನಲ್ಲಾ, ನೀವೆ suggest ಮಾಡಿದ ಹಾಗೆ ಮಧ್ಯಾಹ್ನ notice ಕೊಡಿಸಿ, ನೀವೆ ಏಕೆ insists ಮಾಡುತ್ತೀರಿ. ಮಾನ್ಯ ಬಸವರಾಜ ರಾಯರೆಡ್ಡಿಯವರೆ, ಮಾತನಾಡಿ ತಮಗೆ 15 ನಿಮಿಷಗಳು ಕಾಲಾವಕಾಶವನ್ನು ಕೊಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ: ಆಯಿತು.

ಶ್ರೀ ಬಸವರಾಜ ರಾಯರೆಡ್ಡಿ(ಯಲಬುರ್ಗ): ಮಾನ್ಯ ಅಧ್ಯಕ್ಷರೇ, ವಿಶೇಷ ಆರ್ಥಿಕ ವಲಯದ ಬಗ್ಗೆ ನಿಯಮ 69ರ ಕೆಳಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲಿಗೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇವತ್ತು ನಮ್ಮ ದೇಶದ ಸರ್ವಾಂಗೀಣ ಪ್ರಗತಿಯಾಗಬೇಕು. ದೇಶದ ಪ್ರಗತಿಯಾಗಬೇಕೆದ್ದರೆ, ಆರ್ಥಿಕ ಪ್ರಗತಿಯಾಗಬೇಕಿದ್ದರೆ, ಈ ರೀತಿಯ ವಿಶೇಷ ಆರ್ಥಿಕ ವಲಯದ ಸ್ಥಾಪನೆ ಅತೀ ಅಗತ್ಯವಾಗಿದೆ. ಆದರೆ ಅದನ್ನು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ನಾವು ಕೆಲವು ನೀತಿ ನಿಯಮಾವಳಿಗಳನ್ನು ಸ್ಪಷ್ಟವಾಗಿ ರಚನೆ ಮಾಡಬೇಕು. ಈ ಒಂದು S.E.Z concept ನಿಂದ ದೇಶದಲ್ಲಿ ಅರ್ಥಿಕ ಪ್ರಗತಿಯಾಗುತ್ತದೆ, ನಿರುದ್ಯೋಗ ನಿವಾರಣೆಯಾಗುತ್ತದೆ, ವಿದೇಶಿ ವಿನಿಮಯದಲ್ಲಿ ಗಳಿಕೆಯಾಗಿ ದೇಶದಲ್ಲಿ ಒಟ್ಟಾರೆ ಪ್ರಗತಿಯಾಗುತ್ತದೆ ಎನ್ನುವುದನ್ನು ನಾವು ಇತ್ತೀಚಿನ ದಿನ ಮಾನಗಳಲ್ಲಿ ಕಂಡುಕೊಂಡಿದ್ದೇವೆ. ಹೀಗಾಗಿ ನಾವು ಇದನ್ನು ಸ್ವಾಗತ ಮಾಡುತ್ತೇವೆ. ಆದರೆ ಇದಕ್ಕೆ ಒಂದು ನೀತಿ ನಿಯಮಾವಳಿಗಳನ್ನು ಸರ್ಕಾರಗಳು ಸ್ಪಷ್ಟವಾಗಿ ಮಾಡಬೇಕು. ಇಲ್ಲದಿದ್ದರೆ

imbalance ಆಗುತ್ತದೆ. ನಮ್ಮ ದೇಶದ ಒಟ್ಟು ಜನಸಂಖ್ಯೆಯ ಶೇ. 28ರಷ್ಟು ಜನ ಬಡತನದ ರೇಖೆಗಿಂತ ಕೆಳಗಿದ್ದಾರೆ, ಶೇ. 11% ರಷ್ಟು ಜನ ನಿರುದ್ಯೋಗಿ ಯುವಕರಿದ್ದಾರೆ. S.E.Z ಸ್ಥಾಪನೆಯಿಂದ ನಿರುದ್ಯೋಗ ನಿವಾರಣೆ, ಬಡತನದ ನಿವಾರಣೆಗೆ ಸಹಾಯವಾಗುತ್ತದೆ. ಅದಕ್ಕಾಗಿಯೇ ನಮ್ಮ ದೇಶದಲ್ಲಿ S.E.Z ಬಂದಿದೆ. ಈ ದೇಶದಲ್ಲಿ ಕೈಗಾರಿಕೆ ಮತ್ತು ಕೃಷಿ ಸಮಸಮವಾಗಿ ಹೋಗಬೆಕು. ನಾವು ಕೃಷಿಯನ್ನು ನರ್ಲಕ್ಷ್ಯ ಮಾಡಿ ಕೇವಲ ಕೈಗಾರಿಕೆಗಳಿಗೆ ಮಾತ್ರ ಮಣೆ ಹಾಕಿದರೆ ಬಹಳ ಕಷ್ಟವಾಗುತ್ತದೆ. ಕೃಷಿಯನ್ನು ಕೂಡ ಕೈಗಾರಿಕೆಗಳ ಜೊತೆಗೆ, ಸಮಾನಂತರವಾಗಿ ತೆಗೆದುಕೊಂಡು ಹೋಗಬೇಕು. It should be parallel economy. ಕೈಗಾರಿಕೆ ಜೊತೆ ಕೃಷಿ ನೀತಿ ಕೂಡ ಆಗಬೆಕು. ಇದು imbalance ಆಗಬಾರದು. imbalance ಆದರೆ ಏನಾಗುತ್ತದೆಂದರೆ, ದೇಶದ ಒಟ್ಟಾರೆ GDP ಗೆ ಹೊಡೆತ ಬೀಳುತ್ತದೆ, ಹಣದುಬ್ಬರವಾಗುತ್ತದೆ. ಆ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಈಗ ತರಲು ಹೊರಟಿರುವ ಹೊಸ S.E.Z ನ ಬಗ್ಗೆ ಸ್ಪಷ್ಟವಾದಂಥ ನೀತಿ ನಿಯಮಾವಳಿಗಳನ್ನು ರೂಪಿಸಬೇಕು. ಕೃಷಿಕರಿಗೆ ಇದರಿಂದ ಹೊಡೆತ ಬೀಳಬಾರದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈಗಾಗಲೇ ನಮ್ಮ ದೇಶದ ಜನಸಂಖ್ಯೆ 110 ಕೋಟಿ ಇದೆ. ನಮ್ಮ ರಾಜ್ಯ ಜನಸಂಖ್ಯೆ ಸುಮಾರು 6 ಕೋಟಿಯಾಗಿದೆ. ಪ್ರತಿ ವರ್ಷ ನಮ್ಮ ದೇಶದ ಜನಸಂಖ್ಯೆ ಬೆಳವಣಿಗೆಯ ದರ ಶೇ.1.9ರಷ್ಟಿದೆ. ಅಂದರೆ, ಪ್ರತಿವರ್ಷ ಜನಸಂಖ್ಯೆಯ ಪ್ರಮಾಣ ಸುಮಾರು 2% ಜಾಸ್ತಿಯಾಗುತ್ತಾ ಹೋಗುತ್ತದೆ. ಈಗ ನಮ್ಮ ದೇಶದಲ್ಲಿ ಸುಮಾರು 206 ಮಿಲಿಯನ್ ಟನ್ ಆಹಾರ ಉತ್ಪಾದನೆಯನ್ನು ಮಾಡುತ್ತಿದ್ದೇವೆ. ಮುಂದಿನ 20 ವರ್ಷಗಳಲ್ಲಿ ನಮ್ಮ ದೇಶದ ಜನಸಂಖ್ಯೆ 150 ಕೋಟಿಗೆ ಹೋಗುತ್ತದೆ.. ನಮ್ಮ ರಾಜ್ಯದ ಜನಸಂಖ್ಯೆ 8 ಕೋಟಿಗಿಂತಲೂ ಹೆಚ್ಚಾಗುತ್ತದೆ. ಹೀಗಾಗಿ ನಾವು ಕೃಷಿ ಭೂಮಿಯನ್ನು, ಒಳ್ಳೆಯ ಫಲವತ್ತಾದ ಭೂಮಿಯನ್ನು ಪರಿವರ್ತನೆ ಮಾಡುತ್ತಾ ಹೊರಟರೆ, ಮುಂದಿನ ದಿನಮಾನಗಳಲ್ಲಿ ಆಹಾರ ಉತ್ಪಾದನೆ ಕುಂಟಿತವಾಗುತ್ತದೆ. ಅದಕ್ಕಾಗಿಯೇ ನಾನು ಹೇಳಿದ್ದು, ಈ S.E.Z ಅನ್ನು ಸ್ಥಾಪನೆ ಮಾಡುವಂಥ ಸಂದರ್ಭದಲ್ಲಿ ಕೆಲವು ಸ್ಪಷ್ಟವಾದಂಥ ನೀತಿ ನಿಯಮಾವಳಿಗಳನ್ನು ರಚನೆ ಮಾಡಬೇಕೆಂದು. ಮುಂದಿನ 20 ವರ್ಷಗಳಲ್ಲಿ ನಮ್ಮ ಆಹಾರ ಉತ್ಪಾದನೆಯನ್ನು 380 ಮಿಲಿಯನ್ ಟನ್‌ಗೆ ಹೆಚ್ಚು ಮಾಡಿಕೊಳ್ಳಬೇಕಾಗಿದೆ. ಕೃಷಿ ಭೂಮಿ ಕಡಿಮೆಯಾದರೆ ಆಹಾರ ಉತ್ಪಾದನೆ ಹೆಚ್ಚಾಗುವುದಿಲ್ಲ. ಆ ಹಿನ್ನಲೆಯಲ್ಲಿ ನಾವು ಬಹಳ ಸೂಕ್ಷ್ಮವಾಗಿ ಈ ವಿಚಾರವನ್ನು ತೆಗೆದುಕೊಳ್ಳಬೇಕಾಗಿದೆ. ನಮ್ಮ ರಾಜ್ಯದಲ್ಲಿ

ಸನ್ಮಾನ್ಯ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರ ನೇತೃತ್ವದಲ್ಲಿ ಸಮ್ಮಿಶ್ರ ಸರ್ಕಾರ ಬಂದಿದ್ದು, ಇವರು ನಾವು ರೈತರ ಸರ್ಕಾರ, ರೈತರ ಪರವಾಗಿದ್ದೇವೆ, ರೈತನ ಮಕ್ಕಳು ಎಂದು ಘೋಷಣೆ ಮಾಡುತ್ತಲೇ ಬಂದಿದ್ದಾರೆ. ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ, ರೈತರ ಹೆಸರಿನಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದು 18–19 ತಿಂಗಳಾಯಿತು. ಈ 19 ತಿಂಗಳಲ್ಲಿ ಬೆಂಗಳೂರು ಸುತ್ತಮುತ್ತ ಎಷ್ಟು ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗಾಗಿ ಸ್ವಾಧೀನ ಪಡಿಸಿಕೊಂಡಿದೆ ಎನ್ನುವ ಬಗ್ಗೆ ಒಂದು ಶ್ವೇತ ಪತ್ರವನ್ನು ತರಬೇಕು. ಈ ಸರ್ಕಾರದ ಉದ್ದೇಶ ಏನು ಎನ್ನುವುದು ಸ್ಪಷ್ಟವಾಗಬೇಕು. ಏಕೆಂದರೆ, ಇವರು ಕೃಷಿಕರ ಹೆಸರಿನಲ್ಲಿ ಆಡಳಿತ ಮಾಡಿ, ಇವತ್ತು ಕೃಷಿಕರನ್ನು ಭಿಕ್ಷುಕರನ್ನಾಗಿ ಮಾಡುತ್ತಿದ್ದಾರೆ. ಇದೇ ರೀತಿಯ ನೀತಿಯನ್ನು ಮುಂದುವರೆಸಿಕೊಂಡು ಹೋದರೆ ಇನ್ನೊಂದು 20 ತಿಂಗಳಿನಲ್ಲಿ ಇವರು ಕೃಷಿಕರನ್ನು ಭಿಕ್ಷುಕರನ್ನಾಗಿ ಮಾಡುತ್ತಾರೆ. ಅದಕ್ಕಾಗಿ, ಈ ನೀತಿಯಲ್ಲಿ ಬದಲಾವಣೆಯಾಗಬೇಕು. ಅದಕ್ಕಾಗಿ ಹೇಳುತ್ತಿದ್ದೇನೆ, ತಾವು ವಶಪಡಿಸಿಕೊಂಡಿರುವ ಕೃಷಿ ಭೂಮಿಯ ಬಗ್ಗೆ ಸ್ಪಷ್ಟವಾಗಿ ಒಂದು ಶ್ವೇತ ಪತ್ರವನ್ನು ತರಬೇಕು. ಏಕೆ ನೀವು ಬೆಂಗಳೂರು ಸುತ್ತಮುತ್ತ ಮಾತ್ರ S.E.Z ಮಾಡುತ್ತಿದ್ದೀರಿ? ನಿಮಗೆ ಬೇರೆ ಪ್ರದೇಶಗಳು ಸಿಗುತ್ತಿಲ್ಲವೇ? ನಮ್ಮ ರಾಜ್ಯದಲ್ಲಿ ಸಾಕಷ್ಟು ಬಂಜರು ಭೂಮಿ ಪ್ರದೇಶವಿದೆ. Infrastructure create ಮಾಡಲಿಕ್ಕೆ ಅವಕಾಶವಿದೆ. ಪ್ರಾದೇಶಿಕ ಅಸಮತೋಲನೆ ಸಾಕಷ್ಟು ಇದೆ. ಹೀಗಾಗಿ ಕೇಳುತ್ತಿದ್ದೇನೆ, ಬೇರೆ ಕಡೆಗಳಲ್ಲಿ S.E.Z ಅನ್ನು ಏಕೆ ಸ್ಥಾಪನೆ ಮಾಡುತ್ತಿಲ್ಲ, ಬೆಂಗಳೂರು ಸುತ್ತಮುತ್ತಲಲ್ಲಿ ಮಾತ್ರ ಏಕೆ ಮಾಡುತ್ತಿದ್ದೀರಿ? ಕೇಂದ್ರ ಸರ್ಕಾರದ Special Economic Zone ನೀತಿಯನ್ನು ಈ ಸರ್ಕಾರ ದುರುಪಯೋಗಪಡಿಸಿಕೊಳ್ಳುತ್ತಿದ್ದು, ಅಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚು ಮಹತ್ವವನ್ನು ಕೊಡುತ್ತಿಲ್ಲ. ಉದ್ಯೋಗವನ್ನು ಹೆಚ್ಚಳ ಮಾಡಲಿಕ್ಕೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಿಲ್ಲ. ಕೇವಲ real estate business ಮಾಡುವವರಿಗೆ, buildersಗೆ ಕೃಷಿ ಭೂಮಿಯನ್ನು ಕೊಡಲಿಕ್ಕೆ ಹೊರಟಿದ್ದೀರಿ. ಇದು ತಪ್ಪು. ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದೆ, ಬಡತನ ನಿವಾರಣೆ, ನಿರುದ್ಯೋಗ ನಿವಾರಣೆಯಾಗಬೇಕಾದರೆ ಉದ್ಯೋಗಗಳು ಸೃಷ್ಟಿಯಾಗಬೇಕು. ನಂದಗುಡಿ ಮತ್ತು ಬೆಂಗಳೂರು ಸುತ್ತಮುತ್ತ ಬೇರೆ ಬೇರೆ ಕಡೆಗಳಲ್ಲಿ ಒಂದು ಲಕ್ಷ ಎಕರೆಗಿಂತ ಹೆಚ್ಚು ಭೂಮಿಯನ್ನು ತೆಗೆದುಕೊಳ್ಳಲು propose ಮಾಡಿದ್ದೀರಿ, ಇದರಲ್ಲಿ ಕೇವಲ 3 ಸಾವಿರ ಎಕರೆಯನ್ನು ಮಾತ್ರ ಕೈಗಾರಿಕೆಗಳಿಗೆಂದು ಕೊಡುತ್ತಿದ್ದೀರಿ. ನಂದಗುಡಿಯಲ್ಲಿ 12 ಸಾವಿರ ಎಕರೆ ಜಮೀನನ್ನು

ತೆಗೆದುಕೊಳ್ಳುತ್ತಿದ್ದೀರಲ್ಲ, ಅವರಿಗೆ 12 ಸಾವಿರ ಎಕರೆ ಜಮೀನು ಏಕೆ ಬೇಕು ಎಂದು ನನಗೆ ಆಶ್ಚರ್ಯವಾಗುತ್ತದೆ. ಯಾವ ಕೈಗಾರಿಕೆಗಾಗಿ ಅವರಿಗೆ ಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ. ಅದನ್ನು ಸರ್ಕಾರ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. real estate business ಮಾಡುವಂಥ ಜನರಿಗೆ ಮಣೆ ಹಾಕಿ ಸರ್ಕಾರವೇ ಅವರಿಗೆ ಪ್ರೋತ್ಸಾಹವನ್ನು ಕೊಡಬಾರದು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. S.E.Z ಸ್ಥಾಪನೆಯಿಂದ ನಮ್ಮ ದೇಶದಲ್ಲಿ ಆರ್ಥಿಕ ಬದಲಾವಣೆ ಸಾಕಷ್ಟು ಆಗಿದೆ. ಇದರ ರೂವಾರಿಗಳು ಈಗಿನ ಪ್ರಧಾನ ಮಂತ್ರಿಗಳಾದಂಥ ಡಾ:ಮನಮೋಹನ ಸಿಂಗ್‌ರವರು. ಇದರ ಕೀರ್ತಿ ಅವರಿಗೆ ಸಲ್ಲಬೇಕು. ನಮ್ಮ ದೇಶದಲ್ಲಿ ಇಷ್ಟೊಂದು ಆರ್ಥಿಕ ಚಟುವಟಿಕೆಗಳಾಗಬೇಕಿದ್ದರೆ, GDP ಯಲ್ಲಿ ಬದಲಾವಣೆಯಾಗಬೇಕಿದ್ದರೆ, ಪ್ರಗತಿಪರವಾದಂಥ ಆರ್ಥಿಕ ನೀತಿ ಇರಬೇಕು. ಅದನ್ನು ತಂದಂಥವರು ಡಾ: ಮನಮೋಹನ ಸಿಂಗ್‌ರವರು ಮತ್ತು ಕೇಂದ್ರದಲ್ಲಿರುವಂಥ ಆಗಿನ ಕಾಂಗ್ರೆಸ್ ಸರ್ಕಾರ. ಈಗಾಗಲೇ ನಮ್ಮ ದೇಶದಲ್ಲಿ ಎಷ್ಟು ಬದಲಾವಣೆಯಾಗಿದೆ ನೋಡಿ. In 1990 growth of the GDP was 20%. In 2006-07 it is raised to 35%. ಅದೇ ರೀತಿ ವಿದೇಶಿ ವಿನಿಮಯ, Foreign Exchange Reserve 1990 ರಲ್ಲಿ ಕೇವಲ 5 ಬಿಲಿಯನ್ ಡಾಲರ್ ಮಾತ್ರ ಇತ್ತು. ಇವತ್ತು ಅದು ಸುಮಾರು 165 ಬಿಲಿಯನ್ ಡಾಲರ್ ಆಗಿದೆ. ಅದೇ ರೀತಿ, ಹೆಚ್ಚು Foreign Direct Investment(F.D.I)ಅಂದರೆ ವಿದೇಶೀ ನೇರ ಬಂಡವಾಳವನ್ನು ನಮ್ಮ ದೇಶ ಇತ್ತೀಚಿನ ದಿನಮಾನಗಳಲ್ಲಿ ಆಕರ್ಷಣೆ ಮಾಡುತ್ತಿದೆ. ಕಳೆದ ವರ್ಷ ಅಂದರೆ 2006–07ನೇ ಸಾಲಿನಲ್ಲಿ 12.5 ಬಿಲಿಯನ್ ಡಾಲರ್ F.D.I ಅನ್ನು ನಾವು ಆಕರ್ಷಣೆ ಮಾಡಿಕೊಂಡಿದ್ದೇವೆ, ಹೆಚ್ಚು Investment ಆಗಿದೆ. ಅದರಲ್ಲಿ ಕರ್ನಾಟಕಕ್ಕೆ ಕೂಡ 50% ಬಂದಿದೆ. ಏಕೆಂದರೆ ಎಲ್ಲರೂ ಕೂಡ ಕರ್ನಾಟಕ್ಕೆ ಬರುತ್ತಿದ್ದಾರೆ. ಇದರಿಂದಾಗಿ ಇವತ್ತು ಭಾರತ ಸ್ಪಷ್ಟವಾಗಿ ಬಲಿಷ್ಟ ದೇಶವಾಗುತ್ತಿದೆ. ಜಾಗತೀಕರಣ, ಉದಾರೀಕರಣ ನೀತಿಯಿಂದ ನಮ್ಮ ದೇಶ ಬಲಿಷ್ಟವಾಗುತ್ತಿದೆ. ಈ ಜಾಗತೀಕರಣ ನೀತಿಯಿಂದ ಇವತ್ತು ಕೇವಲ ಭಾರತವಷ್ಟೇ ಅಲ್ಲ, ಬಡರಾಷ್ಟ್ರಗಳು ಎಂದೆನಿಸಿಕೊಂಡಿದ್ದ, ಅಭಿವೃದ್ಧಿ ಶೀಲ ರಾಷ್ಟ್ರಗಳಾದ ಬ್ರೆಜಿಲ್, ಚೈನಾ ಮತ್ತು ಭಾರತ ಇವುಗಳೆಲ್ಲವೂ ಮುಂದು ಬರುತ್ತಿವೆ. ಈಗಾಗಲೇ ನಾನು ಹೇಳಿದಂತೆ, ಈ ರೀತಿ ಭಾರತ ಮುಂದು ಬರಬೇಕಾಗಿದ್ದರೆ ಅದಕ್ಕೆ ಕಾರಣ ಡಾ: ಮನಮೋಹನ ಸಿಂಗ್‌ರವರು ತಂದ ಆರ್ಥಿಕ ನೀತಿ.

ಶ್ರೀ ಧರಂಸಿಂಗ್: ಭಾರತ, ಬ್ರೆಜಿಲ್‌ಗಳೆಲ್ಲಾ ಈಗ ಏಕೆ? ನಂದಗುಡಿಯಲ್ಲಿ ಏನಾಗಿದೆ ಎಂದು ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ನಂದಗುಡಿಯ ವಿಷಯಕ್ಕೆ ಬರುತ್ತೇನೆ.

ಅಧ್ಯಕ್ಷರು: ಅವರು National level politician. ಆದ್ದರಿಂದ ಅವರು ಅಲ್ಲಿಗೇ ಹೋಗಿ ಬಿಡುತ್ತಾರೆ, ಇಲ್ಲಿಗೆ ಬರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಹೇಳುತ್ತಿರುವ ಉದ್ದೇಶವೇನೆಂದರೆ, agricultural production ಕಡಿಮೆಯಾಗಿಕೊಂಡು ಹೋದರೆ national economyಗೂ ತೊಂದರೆಯಾಗುತ್ತದೆ. ಏಕೆಂದರೆ, ಭಾರತ ದೇಶ ಕೃಷಿ ಪ್ರಧಾನವಾದ ದೇಶ. ಅದೇ ರೀತಿಯಾಗಿ ಬ್ರೆಜಿಲ್ ಮತ್ತು ಚೈನಾ ದೇಶಗಳೂ ಕೂಡ, ಇಲ್ಲಿ ಹೆಚ್ಚಿನ population ಇದೆ.

ಅಧ್ಯಕ್ಷರು: ಅವರು Foreign Exchange Reserve ಹೇಗೆ 165 ಬಿಲಿಯನ್ ಡಾಲರ್‌ಗಳಿಗೆ ಏರಿದೆ ಎಂದು ಹೇಳುತ್ತಿದ್ದಾರೆ. ಅಂದರೆ, globalization ಆದ್ದರಿಂದ, ಕೈಗಾರಿಕೆಗಳ ಸ್ಥಾಪನೆಯಿಂದ Foreign Direct Investment ಹೆಚ್ಚು ಬಂದಿದೆ ಎಂದು ಹೇಳುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶ ಏನೆಂದರೆ, ನಾವು ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಮಾಡದೇ ಇದ್ದರೆ ಹೆಚ್ಚೆಚ್ಚು Foreign Direct Investment ಮಾಡದಿದ್ದರೆ ನಾವು ಅಭಿವೃದ್ಧಿಯಾಗುವುದಿಲ್ಲ ವೆನ್ನತಕ್ಕಂಥದನ್ನು ಪರೋಕ್ಷವಾಗಿ ಹೇಳುತ್ತಿದ್ದಾರೆ. ಅದಕ್ಕೊಂದು ನೀತಿ ಬೇಕು. ಏನು ನೀತಿ ಬೇಕು ಎನ್ನುವುದನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: SEZ ಗೆ ನಾವು ವಿರೋಧವಿಲ್ಲವೆನ್ನುವುದನ್ನು ಸ್ಪಷ್ಟಮಾಡಿದ್ದೇವೆ. Special Economic Zone programme ಗೆ ನಾವು ವಿರೋಧಿಗಳಲ್ಲ. ಆದರೆ, ಕೃಷಿ ಪ್ರಧಾನ ದೇಶವಾಗಿರುವುದರಿಂದ ಫಲವತ್ತಾದ ಜಮೀನುಗಳನ್ನು industries ಗೆ ಕೊಟ್ಟು ನಮ್ಮ agricultural production ಕುಂಠಿತಗೊಳಿಸಬಾರದೆಂದು ಈ ರೂಪದಲ್ಲಿ ಹೇಳುತ್ತಿದ್ದೇವೆ.

ಅಧ್ಯಕ್ಷರು: ನನ್ನ ಒಂದು ಮಾತು ಹೇಳುತ್ತೇನೆ. ಈಗ ಏನಾಗಿದೆ, ಕೈಗಾರಿಕೀಕರಣ ಆಗಬೇಕು, ಅದೂ ಆಗಬೇಕು ಎಂದು ಹೇಳುತ್ತಿದ್ದಾರೆ. ಈಗ ಯಾವುದೇ ನಗರ, ಅದು ಬೆಂಗಳೂರಿನಂಥ ದೊಡ್ಡ ದೊಡ್ಡ ನಗರಗಳಾಗಿದ್ದರೆ 30 ಕಿ.ಮೀ. ಒಳಗಡೆ ಮಾಡಬೇಡಿ, ಅಥವಾ ಮೈಸೂರಿನಂಥ ನಗರಗಳಲ್ಲಿ 20

ಕಿ.ಮೀ. ಒಳಗೆ ಮಾಡಬೇಡಿ ಎಂದು ಆ ರೀತಿ ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರವೇ ಒಂದು ಸ್ಪಷ್ಟವಾದ ನೀತಿಯನ್ನು ರೂಪಿಸಿದರೆ ಈ ತರಹದ ಗಲಾಟೆಗಳೇ ಇರುವುದಿಲ್ಲವಲ್ಲಾ. ಆಗ ನಂದಗುಡಿ ಗಲಾಟೆಯೂ ಇರುವುದಿಲ್ಲ, ನಂದಿಗ್ರಾಮದ ಗಲಾಟೆಯೂ ಇರುವುದಿಲ್ಲ.

ಶ್ರೀ ಧರಂಸಿಂಗ್: ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೆ ಸ್ಪಷ್ಟವಾದ ತಾಕೀತು ಕೊಟ್ಟಿದ್ದಾರೆ. ರೈತರ ಜೊತೆಯಲ್ಲಿ ಸಮಾಲೋಚನೆ ಮಾಡಬೇಕು, ಫಲವತ್ತಾದ ಜಮೀನುಗಳನ್ನು ವಶಪಡಿಸಿಕೊಳ್ಳಬಾರದೆಂದು Supreme Court ಸಹ ಹೇಳಿದೆ. ಇದೆಲ್ಲ ಹೇಳಿದರೂ ಕೂಡ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡು ನಂದಗುಡಿಯಲ್ಲಿ ಯಾರ್‍ಯಾರೋ ಬೇಕಾದವರಿಗೆ ಮಾಡತಕ್ಕಂಥ ರೀತಿಯಲ್ಲಿ ಹೊರಟಿದ್ದಾರಲ್ಲಾ, ಅದಕ್ಕೆ ಆಕ್ಷೇಪಣೆ ವ್ಯಕ್ತಪಡಿಸುತ್ತಿದ್ದಾರೆಯೇ ವಿನಃ ಬೇರೆ ಯಾವುದಕ್ಕೂ ಅಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಕೇಂದ್ರದಲ್ಲಿ S.E.Z ಗೆ ಒಂದು Act ಅನ್ನು 2005ರಲ್ಲಿ ತಂದಿದ್ದಾರೆ. ಆಮೇಲೆ ಕೆಲವು modifications ಮಾಡಿದ್ದಾರೆ. ಇತ್ತೀಚೆಗೆ ಸಹ ಕೆಲವು modifications ಅನ್ನು ತಂದಿದ್ದಾರೆ. ಕೇಂದ್ರ ಸರ್ಕಾರ ನಿರ್ದಿಷ್ಟವಾಗಿ ಇದೇ ನೀತಿಯನ್ನು ಪಾಲಿಸಬೇಕೆಂದು ಎಲ್ಲಿಯೂ ಕೂಡ ಹೇಳಲಿಲ್ಲ. ಯಾವುದೋ ಒಂದು letter ನಲ್ಲಿ ಒಂದು line ಬರೆದಿದ್ದಾರೆ. ಕೇವಲ ಒಂದು ನೀತಿ ಸರ್ಕಾರದಿಂದ ಇಲ್ಲಿಯ ತನಕ ಬಂದಿಲ್ಲ. ಕೇಂದ್ರ ಸರ್ಕಾರ ಹೇಳಿದ್ದನ್ನು ನಾವು ಎಲ್ಲೂ ಕೂಡ ಉಲ್ಲಂಘನೆ ಮಾಡಲಿಲ್ಲ. ನಮ್ಮ ಮನಸೋ ಇಚ್ಛೆ ನಾವು S.E.Z ಗಳಿಗೆ ಇಂಥದೇ ಜಾಗವನ್ನು ನೀವು ತೆಗೆದುಕೊಳ್ಳಬೇಕೆಂದು ಕೈಗಾರಿಕೋದ್ಯಮಿಗಳಿಗೆ ಎಲ್ಲಿಯೂ ಕೂಡ ಹೇಳಲಿಲ್ಲ. ಹಿಂದೆ ಕೂಡ ಕೊಟ್ಟಿದ್ದಾರೆ. (ಗೊಂದಲ) ಮಾನ್ಯ ಧರ್ಮಸಿಂಗ್ ಸಾಹೇಬರು ಮಂತ್ರಿಯಾಗಿದ್ದರು, ಮುಖ್ಯಮಂತ್ರಿಯಾಗಿದ್ದರು. ಅವರ ಕಾಲದಲ್ಲಿಯೇ ಬೆಂಗಳೂರು ಸುತ್ತ ಮುತ್ತ ಬಹಳಷ್ಟು S.E.Z ಗಳಿಗೆ ಅವರೇ ಕೊಟ್ಟಿದ್ದಾರೆ. ಇದೇನು ಹೊಸದಾಗಿ ನಾವೇ ಬಂದು ಬೆಂಗಳೂರು ಸುತ್ತಮುತ್ತ ಎಲ್ಲಾ ನಾವೇ ಮಾಡುತ್ತಿದ್ದೇವೆ, ನಮ್ಮ ಮನಸೋ ಇಚ್ಛೆ ಮಾಡುತ್ತಿದ್ದೇವೆಂದು ಏನೂ ಇಲ್ಲ. ಕೇಂದ್ರ ಸರ್ಕಾರದಲ್ಲಿ ಸ್ಪಷ್ಟವಾದ, ಸರಿಯಾದ ನೀತಿ ಇಲ್ಲ.

ಅಧ್ಯಕ್ಷರು: ಈಗ ಸ್ಪಷ್ಟೀಕರಣವನ್ನು ನಿಮ್ಮ ನಾಯಕರು ಹೇಳಬೇಕು. ಒಂದು ಸ್ಪಷ್ಟವಾದ ನೀತಿಯನ್ನು ಕೇಂದ್ರ ಸರ್ಕಾರ ಏಕೆ ರೂಪಿಸಬಾರದು?

ಏಕೆಂದರೆ, ನಂದಿಗ್ರಾಮದಲ್ಲಿ ಏನು ಘಟನೆ ಆಯಿತು, ಆದಾ ಮೇಲೆ ಎಲ್ಲಾಕಡೆ ಈ ತರಹ ಇದೆ. ಆದರೆ, ಕೈಗಾರಿಕೀಕರಣವೂ ವೇಗವಾಗಿ ಆಗಬೇಕಾಗಿದೆ. ಆದ್ದರಿಂದ, ಏನು ಎಂಬುದಕ್ಕೆ ನಿಮ್ಮ suggestions ಅನ್ನು ಹೇಳಿ. ನಮ್ಮ ಸೂಚನೆಗಳು, ಸಲಹೆಗಳನ್ನು ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ಸನ್ಮಾನ್ಯ ಅಧ್ಯಕ್ಷರೆ, ಕೃಷಿ ಮತ್ತು ಕೈಗಾರಿಕೆ ಸಮನಾಂತರವಾಗಿ ಬೆಳೆಯಬೇಕೆನ್ನುವುದನ್ನು ನಾನು ನನ್ನ ಭಾಷಣದ ಪ್ರಾರಂಭದಲ್ಲಿಯೇ ಸ್ಪಷ್ಟವಾಗಿ ಹೇಳಿದ್ದೇನೆ ಮತ್ತು ನನ್ನ ಭಾಷಣದ ಮೊದಲನೇ ವಾಕ್ಯವೇ ಅದಾಗಿತ್ತು. ಇದು imbalance ಆಗಬಾರದು. ಕೃಷಿ ಮತ್ತು ಕೈಗಾರಿಕೆ ಆರ್ಥಿಕ ನೀತಿ ಸಮಾನಾಂತರವಾಗಿ ಹೋಗಬೇಕೆಂದು ನಾನು ಮೊದಲೇ ಹೇಳಿದ್ದೇನೆ. ಇದು imbalance ಆದರೆ ಬಹಳ ಕಷ್ಟವಾಗುತ್ತದೆಂದು ಹೇಳಿದ್ದೇನೆ. S.E.Z ನಲ್ಲಿ ಕೇಂದ್ರ ಸರ್ಕಾರ ಸ್ಪಷ್ಟವಾದ ನೀತಿಯನ್ನು ಮಾಡಲಿಕ್ಕೆ ಈಗಾಗಲೇ ಸನ್ಮಾನ್ಯ ಪ್ರಧಾನ ಮಂತ್ರಿಗಳಾದಂಥ ಮನಮೋಹನ ಸಿಂಗ್‌ರವರು-'ನಾವು ಕೃಷಿ ನೀತಿಯನ್ನು ಮುಂದಿಟ್ಟುಕೊಂಡು S.E.Z ಅನ್ನು ಮಾಡುತ್ತೇವೆ. ಇದಕ್ಕೆ policy ತರುತ್ತೇವೆ' ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾಳೆ ಪ್ರಧಾನ ಮಂತ್ರಿಗಳು ಬರುತ್ತಿದ್ದಾರೆ. ಇದರ ವಿಚಾರದಲ್ಲಿ ಚರ್ಚೆಯಾಗುತ್ತದೆ. ಅಲ್ಲಿಯವರೆಗೆ ರಾಜ್ಯಸರ್ಕಾರ ಇದನ್ನು ನಿಲ್ಲಿಸಲಿ. ಕಾಯಬೇಕಾಗುತ್ತದೆ. ಈ ನಂದಗುಡಿ ಮತ್ತು ಬೇರೆ ಬೇರೆ S.E.Z ಅನ್ನು ಈಗ ಏನು ಮಾಡಲಿಕ್ಕೆ ಹೊರಟಿದ್ದಾರೆ. ಕೇಂದ್ರ ಸರ್ಕಾರದ ನೀತಿಯನ್ನು ರಾಜ್ಯ ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ. They are misleading. Mislead ಮಾಡುತ್ತಿದ್ದಾರೆ. ನಾನು ಮಾತನಾಡುವಂಥ ಸಂದರ್ಭದಲ್ಲಿ ಈಗಾಗಲೇ ಹೇಳಿದ್ದೇನೆ. ಈ ಉದಾರೀಕರಣದ ವಿಚಾರವನ್ನು ನಾನು ಇಲ್ಲಿ ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, ದೇಶದ ಆರ್ಥಿಕ ನೀತಿ ಒಳ್ಳೆಯದಾಗಬೇಕಾಗಿದ್ದರೆ S.E.Z ಅವಶ್ಯ ಎನ್ನುವ ಮಾತನ್ನು ಹೇಳಿದ್ದೇನೆ. ರೈತರ ಕೃಷಿ ಭೂಮಿ ಹಾಳಾಗಬಾರದು. ಅದಕ್ಕೆ ಚೈನಾ, ಬ್ರೆಜಿಲ್‌ನಲ್ಲಿ ಏನು ಮಾಡಿದ್ದಾರೆನ್ನುವ ವಿಚಾರವನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬೇರೆ ದೇಶದ ವಿಚಾರವನ್ನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ ಚೈನಾ, ಬ್ರೆಜಿಲ್‌ನಲ್ಲಿ ಯಾವ ತರಹದ ನೀತಿಯನ್ನು ಅಳವಡಿಸಿಕೊಂಡಿದ್ದಾರೆ? ನಾನು ಈಗಾಗಲೇ ಹೇಳಿದಂತೆ ಈ S.E.Z ಅನ್ನು ಮೊಟ್ಟಮೊದಲ ಬಾರಿಗೆ ಅಳವಡಿಸಿಕೊಂಡವರು South Korea ದವರು. South Korea ದೇಶದವರು 1985ರಲ್ಲಿ ಅಳವಡಿಸಿಕೊಂಡರು. 50ರ ದಶಕದಲ್ಲಿ North Korea and South Korea Wars. ಆದವು. ಆ ಸಂದರ್ಭದಲ್ಲಿ ಆರ್ಥಿಕ ಪರಿಸ್ಥಿತಿ ಕೆಟ್ಟು ಹೋಯಿತು. ಹೀಗಾಗಿ South

Koreaದಲ್ಲಿ Special Economic Zone concept ಅನ್ನು ತೆಗೆದುಕೊಂಡು ಬಂದರು. ಮುಂದೆ 90ರ ದಶಕದಲ್ಲಿ ಚೈನಾ ದೇಶ ತೆಗೆದುಕೊಂಡು ಬಂತು. ಚೈನಾದಲ್ಲಿ ಆದಂಥ ಬದಲಾವಣೆಯನ್ನು ನಾವು ಗಮನಿಸಬೇಕು. ಅಲ್ಲಿ S.E.Z ಎಂದು real estate ಮಾಡಲಿಕ್ಕೆ ಬಿಟ್ಟಿಲ್ಲ.

ಅಧ್ಯಕ್ಷರು: real estate ಹೋಗಲಿ, ಅಲ್ಲಿ ಆಸ್ತಿ ಹಕ್ಕೇ ಇಲ್ಲವಲ್ಲ ಸ್ವಾಮಿ. ಅಲ್ಲಿ ಆಸ್ತಿ ಹಕ್ಕೇ ಇಲ್ಲ, ಹಾಗಾಗಿ ಇಂಥ ಪ್ರಶ್ನೆಗಳೇ ಉದ್ಭವವಾಗುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ನಿಮಗೆ ಯಾರು ಹೇಳಿದರು ಅಧ್ಯಕ್ಷರೆ?

ಅಧ್ಯಕ್ಷರು: ಹೌದೌದು. ಅಲ್ಲಿ ಆಸ್ತಿ ಹಕ್ಕು ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಚೈನಾದಲ್ಲಿ ಕಾನೂನು ಬದಲಾವಣೆಯಾಗಿದೆ.

ಅಧ್ಯಕ್ಷರು: ಏನೂ ಕಾನೂನು ಬದಲಾವಣೆಯಾಗಿಲ್ಲ ಸ್ವಾಮಿ ನಾನು ಚೈನಾಕ್ಕೆ ಹೋಗಿದ್ದವನು. ನಾನು ಹೇಳುವುದನ್ನು ಕೇಳಿ. ಅಲ್ಲಿ ಏನೆಂದರೆ 50 ವರ್ಷಕ್ಕೆ lease ಗೆ ಕೊಡುತ್ತಾರೆ, ಅಷ್ಟೆ.

ಶ್ರೀ ಬಸವರಾಜ ರಾಯರೆಡ್ಡಿ: ಅಲ್ಲಿ ಮತ್ತೆ amendment ಮಾಡಿದ್ದಾರೆ. ನಿಮಗೆ ಅಲ್ಲಿಯ rules ಅನ್ನೇ ಕೊಡುತ್ತೇನೆ.

ಅಧ್ಯಕ್ಷರು: ಆಯಿತು. ಕೊಡಿ.

ಶ್ರೀ ಬಸವರಾಜ ರಾಯರೆಡ್ಡಿ: ನಿಮಗೆ ಬೇಕಾದರೆ China Investment Rules ಅನ್ನೇ ಕೊಡುತ್ತೇನೆ. ಅದಿರಲಿ.

ಅಧ್ಯಕ್ಷರು: Investment ಅಲ್ಲ, property rules.

ಶ್ರೀ ಬಸವರಾಜ ರಾಯರೆಡ್ಡಿ: property you can own. ಅದನ್ನೇ ನಾನು ಹೇಳುತ್ತೇನೆ. ಇವತ್ತಿನ ದಿವಸ ನಾನೇನು ಈಗ ಹೇಳುತ್ತಿದ್ದೆ SEZ concept ನಿಂದ, ಭಾರತ ಏನು ಇವತ್ತು trillion club ಗೆ join ಆಗಿದೆಯಲ್ಲ, ನಮ್ಮ ವಿಶ್ವದಲ್ಲಿ 13 ರಾಷ್ಟ್ರಗಳು GDP growthನಲ್ಲಿ trillion ಗೆ, ಶತಕೋಟಿ ಡಾಲರ್‌ಗಳಿಗೆ ಹೋಗಿದೆ. ಅದು ಬಹಳ ಸಂತೋಷದ ವಿಚಾರ. ನಮ್ಮ ಡಾ:ಮನಮೋಹನ ಸಿಂಗ್‌ರವರ ನಾಯಕತ್ವದ ಕೇಂದ್ರ ಸರ್ಕಾರ ಈ ವರ್ಷ ನಮ್ಮ ದೇಶದ ಪ್ರಗತಿಯನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಿ ಇವತ್ತು 1.1 ಶತಕೋಟಿ ಡಾಲರ್‌ಗೆ ಮುಟ್ಟಿಸಿದ್ದಾರೆ. ಕೇವಲ 13 ರಾಷ್ಟ್ರಗಳು

ಮಾತ್ರ ಇವತ್ತು trillion club ಗೆ ಹೋಗಿದೆ. ಈ ಸಂದರ್ಭದಲ್ಲಿ ನಾನು China concept ಅನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. China ದಲ್ಲಿ ಕೇವಲ S.E.Z ಇಲ್ಲ. ಆ S.E.Z ನಲ್ಲಿ ಹಲವಾರು ಈ Special Investment Zone ನಲ್ಲಿ S.E.Z ಕೂಡ ಒಂದಿದೆ. ಆದಾದ ಮೇಲೆ Economic and Technical Development Zone, Agriculture Economic Zone, Special Development Zone, Export promotion Zone ಗಳು ಬಂದಿವೆ. ಈ ಕೈಗಾರಿಕಾ ನೀತಿಯನ್ನು ಇಟ್ಟುಕೊಂಡು ಇವತ್ತಿನ ದಿವಸ China ತನ್ನ ರಾಷ್ಟ್ರವನ್ನು ಬೆಳೆಸುತ್ತಿದೆ ಮತ್ತು ಬೇರೆ ಬೇರೆ ರಾಜ್ಯಗಳು ಅಲ್ಲಿ State Council ತನ್ನದೇ ಆದಂಥ policy ಮಾಡುತ್ತವೆ, ಇವೆಲ್ಲ policyಗಳನ್ನು ಚೈನಾದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಮಾಡಿದ್ದಾರೆ. ಅದೇ ತರಹ ನಮ್ಮ ರಾಜ್ಯದಲ್ಲೂ ರಾಜ್ಯ ಸರ್ಕಾರ ಈ concepts ಅನ್ನು ಇಟ್ಟುಕೊಳ್ಳಬೇಕು. ಕೇವಲ S.E.Z ಎಂದು real estate ಮಾಡಲಿಕ್ಕೆ ಬಿಡಬಾರದು. ಅದಕ್ಕೆ ನಾನು ಕೇಳುವುದೇನೆಂದರೆ, Agriculture Economic Zone(AEZ), ಅನ್ನು ತಾವು ಏಕೆ ತರಬಾರದು? Special Development Zone ಅನ್ನು ಏಕೆ ತರಬಾರದು? ಸರ್ವಾಂಗೀಣ ಅಭಿವೃದ್ಧಿ ಮಾಡುವಲ್ಲಿ ಒಂದು ವಲಯಕ್ಕೆ ಅದನ್ನು ಬಿಟ್ಟು ಬೆಂಗಳೂರು ಸುತ್ತಮುತ್ತ S.E.Z ಅನ್ನು ಮಾಡುತ್ತಿರುವುದು ತಪ್ಪು. ಇದಾದ ಮೇಲೆ, ನಾನು ಈಗಾಗಲೇ ಹೇಳಿದಂತೆ Economic and Technical Development Zone concept ಅನ್ನು ನೀವು ಮಾಡಲೇ ಇಲ್ಲ. ಹೀಗಾಗಿ ಇವತ್ತು ನಮ್ಮ concept ಸರಿಯಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಾವು ಹೇಳಿದರಲ್ಲಾ ಅಧ್ಯಕ್ಷರೆ, ಚೈನಾದಲ್ಲಿ Agriculture Economic Zoneನಲ್ಲಿ, organic food, ಈಗ ಇತ್ತೀಚಿನ ದಿನಮಾನಗಳಲ್ಲಿ ಈ organic food ಅನ್ನು ಬಹಳ ಜನ ಬಯಸುತ್ತಾರೆ. ರಸಾಯನಿಕ fertilizer ಅನ್ನು ಹಾಕುವುದರಿಂದ ಆರೋಗ್ಯಕ್ಕೆ ಅನಾನುಕೂಲವಾಗುತ್ತದೆ ಎನ್ನುವ ದೃಷ್ಟಿಕೋನದಿಂದ health concept ಬಂದಮೇಲೆ ಇತ್ತೀಚಿನ ದಿನಗಳಲ್ಲಿ organic food ಬಹಳಷ್ಟು popular ಆಗುತ್ತಿದೆ. ಈ organic food ಬಗ್ಗೆ ರಾಜ್ಯ ಸರ್ಕಾರದಲ್ಲಿ ಏನೂ ನೀತಿನಿಯಮಗಳಿಲ್ಲ. ಆ ಕೃಷಿಕರಿಗೆ ಸಹಾಯವನ್ನು ಸಹ ಮಾಡುತ್ತಿಲ್ಲ. ಅದರ ಬಗ್ಗೆ ಚಿಂತನೆ ಆಗಬೇಕು. ಆ organic food ಅನ್ನು ವಿಶ್ವದಲ್ಲಿಯೇ ರಫ್ತು ಮಾಡಲಿಕ್ಕೆ ಸಾಧ್ಯತೆ ಇದೆ. ಅದರ ಬಗ್ಗೆ ರಾಜ್ಯ ಸರ್ಕಾರದ ಮುಂದೆ ಯಾವುದೇ ಕಾರ್ಯಕ್ರಮವಿಲ್ಲ. ಆಹಾರ ಸಂಸ್ಕರಣೆ ಸಲುವಾಗಿ ಯಾವುದೇ ಸ್ಪಷ್ಟವಾದಂಥ ನೀತಿನಯಮಗಳಿಲ್ಲ ಮತ್ತು self industries ಯಾವುದೂ ಇಲ್ಲ. ಆದರೆ,

ಚೈನಾದಲ್ಲಿ ಹಲವಾರು ಪ್ರಾಂತ್ಯಗಳಲ್ಲಿ AEZ ಅನ್ನು ಮಾಡಿದ್ದಾರೆ. ಅದನ್ನು ನೀವು ಅಳವಡಿಸಿಕೊಂಡಿದ್ದರೆ ನಿಮ್ಮನ್ನು ನಾವು ಸ್ವಾಗತ ಮಾಡಬಹುದಾಗಿತ್ತು. ಉದಾಹರಣೆಗೆ ಬೆಂಗಳೂರಿನಲ್ಲಿ ಸಾಕಷ್ಟು ಸಿದ್ಧ ಉಡುಪುಗಳನ್ನು ತಯಾರು ಮಾಡುವ garments factories ಇವೆ. ಅವರಿಗೆ ಬೇರೆ ಬೇರೆ ಪ್ರದೇಶಗಳಲ್ಲಿ Special Development Zone ಮಾಡಿ, ಅವರದೇ ಆದ residential area ಮತ್ತು locality ಮಾಡಲಿಕ್ಕೆ ಸಾಧ್ಯವಿದೆ. ಬೆಂಗಳೂರಿನಲ್ಲಿ ಏಕಿರಬೇಕು? ಬೇರೆ area ಕ್ಕೆ shift ಮಾಡುವುದಕ್ಕೆ ಅವರಿಗೆ ಸಾಧ್ಯವಿಲ್ಲವೇ? ಅದರ ಬಗ್ಗೆ ಈ ಸರ್ಕಾರ ಯಾವತ್ತೂ ಚಿಂತನೆ ಮಾಡಿಲ್ಲ. ಎಲ್ಲ ಬೆಂಗಳೂರು ನಗರದ ಪಕ್ಕದಲ್ಲೇ ಆಗಬೇಕು. ಇದು ಸರಿಯಲ್ಲ ಎನ್ನುವಂಥ ಮಾತನ್ನು ಬೇರೆ ದೇಶಗಳಲ್ಲಿ ನಡೆದಿರುವ ಆರ್ಥಿಕ ನೀತಿ ಮತ್ತು ಕೈಗಾರಿಕಾ ನೀತಿ ಬಗ್ಗೆ ಉದಾಹರಣೆ ಕೊಟ್ಟು ನಾನು ಇಲ್ಲಿ ಹೇಳಿದ್ದೇನೆ. ಕೇವಲ ಕೇಂದ್ರ ಸರ್ಕಾರದ್ದಲ್ಲ. ಕೇಂದ್ರ ಸರ್ಕಾರವೇನು ಮಾಡುತ್ತದೆ? ಇವರು ಕೊಟ್ಟಂಥ ಪ್ರಪೋಸಲ್‌ಗೆ ಅವರು ಒಪ್ಪಿಗೆ ಕೊಡುತ್ತಾರಷ್ಟೇ. ಪ್ರಪೋಸಲ್ ಕೊಡುವವರೂ, land acquisition ಮಾಡುವವರೂ ಇವರೇ, ಲ್ಯಾಂಡ್ ಗುರುತಿಸುವವರೂ ಇವರೇ, ಕೇಂದ್ರ ಸರ್ಕಾರ ಅಲ್ಲ. ಕೇಂದ್ರ ಸರ್ಕಾರ ಕೇವಲ ನೀತಿ ಬಗ್ಗೆ ಮಾತ್ರ ಹೇಳುತ್ತದೆ. SEZ approve ಮಾಡುವುದಷ್ಟೇ ಅವರ ಕೆಲಸ. land acquisition ಇವರ ಕೆಲಸ, ಯಾರು ಇಲ್ಲಿ ಕೈಗಾರಿಕೆ ಸ್ಥಾಪಿಸುತ್ತೇವೆಂದು ಹೇಳುತ್ತಾರೆ ಅದನ್ನು ಗುರುತಿಸುವ ಕೆಲಸ ರಾಜ್ಯ ಸರ್ಕಾರದ್ದು. land ಬಗ್ಗೆ ಕೇಂದ್ರ ಸರ್ಕಾರ ಹೇಳಲಿಲ್ಲ. ನಂದಗುಡಿಯಲ್ಲಿ ಲ್ಯಾಂಡ್‌ಮಾಡಿ ಎಂದು ಕೇಂದ್ರ ಸರ್ಕಾರ ಹೇಳಿಲ್ಲ. ನಂದಗುಡಿಯಲ್ಲಿ ನಾವು ಮಾಡುತ್ತಿದ್ದೇವೆ, ಅಧಕ್ಕೆ ಒಪ್ಪಿಗೆ ಕೊಡಿ ಎಂದು ಹೇಳಿದ್ದಕ್ಕೆ ಕೊಟ್ಟಿದ್ದಾರೆಯೇ ಹೊರತು ಕೇಂದ್ರ ಸರ್ಕಾರ ಪ್ರಪೋಸಲ್ ಇಟ್ಟಿಲ್ಲ. ಇವರು ಆ ವಿಚಾರವನ್ನು ತಿಳಿದುಕೊಳ್ಳಬೇಕೆಂದು ನಾನು ಹೇಳಲಿಕ್ಕೆ ಇಚ್ಚೆಪಡುತ್ತಿದ್ದೇನೆ. ಇವತ್ತು ನಂದಗುಡಿ ಇರಬಹುದು, ಬೆಂಗಳೂರು ಸುತ್ತಮುತ್ತ ಇರಬಹುದು, ಬೆಂಗಳೂರಿನಲ್ಲಿ ನಾವೇಕೆ SEZ ಬೇಡವೆಂದು ಹೇಳಿದೆವೆಂದರೆ, ಈಗಾಗಲೇ ತಮಗೆ ಗೊತ್ತಿದೆ, ಬೆಂಗಳೂರಿನ ಜನಸಂಖ್ಯೆ 2000–01ರ census ಪ್ರಕಾರ ಸುಮಾರು 60 ಲಕ್ಷ ಇತ್ತು. ಈಗಿನ ಜನಸಂಖ್ಯೆ ಎಷ್ಟಿದೆ ಎಂದು ತಮಗೆಲ್ಲ ಗೊತ್ತಿದೆ. Growth of Bangalore 10% ಇದೆ. ನಮ್ಮ ರಾಜ್ಯದಲ್ಲಿ ಜನಸಂಖ್ಯೆ ಪ್ರಮಾಣದ growth 1.8 ಇದೆ. ಏಷಿಯಾ ಖಂಡದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ ಯಾವುದಾದರೂ ಆಗಿದ್ದರೆ, ಅದು ಬೆಂಗಳೂರು. 10% growth every year. ಅಂದರೆ, ಸುಮಾರು 75 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇವತ್ತಿದೆ ಮತ್ತು ಇವತ್ತಿನ ಪ್ರಕಾರ ಪ್ರತಿ ದಿವಸ

ಸುಮಾರು 860 million liters ನೀರು ಬೇಕು. ಮುಂದಿನ ವರ್ಷಗಳಲ್ಲಿ ನೀರಿಗೆ ಇನ್ನೂ ಬಹಳ ಕಷ್ಟವಾಗುತ್ತದೆ. ಇನ್ನು 20 ವರ್ಷಗಳಲ್ಲಿ ನಿಮಗೆ 30 tmc ನೀರು ಬೇಕು. 30 tmc Water is required for Bangalore City alone. ಕುಡಿಯಲಿಕ್ಕೆ ನೀರಿಲ್ಲ. ನಮ್ಮ ಬೆಂಗಳೂರು ನಗರದಲ್ಲಿ 2007 March 31st ಗೆ registered vehicles 27 ಲಕ್ಷದ 60 ಸಾವಿರ ಇವೆ. ಬೆಂಗಳೂರು ನಗರದಲ್ಲಿ 1 ಲಕ್ಷದ 93 ಸಾವಿರ, ಪ್ರತಿ ದಿವಸ 1 ಲಕ್ಷದ 10 ಸಾವಿರ vehicles ಕೋಲಾರ, ತುಮಕೂರು, ಆಂಧ್ರಪ್ರದೇಶ, ತಮಿಳುನಾಡಿನಿಂದ ಬಂದು ವಾಪಸ್ ಹೋಗುತ್ತವೆ. ಅಂದರೆ, ಸುಮಾರು 32 ರಿಂದ 33 ಲಕ್ಷ ವಾಹನಗಳು ಬೆಂಗಳೂರು ಸಿಟಿಯಲ್ಲಿ ಸಂಚರಿಸುತ್ತವೆ. ಇದರಿಂದ air pollution and sound pollution ಸಿಕ್ಕಾಪಟ್ಟೆ ಆಗಿದೆ. ಅಧ್ಯಕ್ಷರೆ, ತಾವೂ ಟಿವಿಯಲ್ಲಿ ನೋಡಿರಬಹುದು. ಟಿವಿಯಲ್ಲಿ ಪ್ರತಿ ದಿವಸ air pollution ಬಗ್ಗೆ ತೋರಿಸುತ್ತಾರೆ. ಇವತ್ತು ಬೆಂಗಳೂರು ಕೂಡ highest air pollution ಗೆ ಹೋಗಿದೆ. Sulphur ಪ್ರಮಾಣ ಬಹಳ ಜಾಸ್ತಿಯಾಗಿದೆ. Ozone layer ಗೆ ಹೊಡೆತ ಬೀಳುವಂಥ ವಾತಾವರಣ ಇವತ್ತು ಬೆಂಗಳೂರಿನಲ್ಲಿ ನಿರ್ಮಾಣವಾಗಿದೆ. Sound pollution more than 90 decibels ಆಗಿದೆ. ಇನ್ನು ಸ್ವಲ್ಪ ದಿವಸಗಳಲ್ಲಿ ಕಿವಿ ಹರಿದು ಹೋಗುತ್ತದೆ, ಆ ತರಹದ ಶಬ್ದ ಮಾಲಿನ್ಯವಾಗಿದೆ. ಹೀಗಾಗಿ, ಈ ವಿಚಾರದಲ್ಲಿ ಈ ಸರ್ಕಾರ ವಿಚಾರವನ್ನು ಮಾಡಬೇಕು. ಈ ಸಮ್ಮಿಶ್ರ ಸರ್ಕಾರ ನಾನೀಗಾಗಲೇ ಹೇಳಿದಂತೆ, ರೈತರ ಪರವಾದಂಥ ಚಿಂತನೆಯನ್ನು ಮಾಡಬೇಕು. ರೈತರ ಪರವಾದ ಕೈಗಾರಿಕೆಗಳನ್ನು ತರಬೇಕು ಮತ್ತು ಪ್ರಾದೇಶಿಕ ಅಸಮತೋಲನವನ್ನು ಹೊಡೆದು ಹಾಕಬೇಕು. ಆ ಹಿನ್ನೆಲೆಯಲ್ಲಿ ಈಗಿರುವಂಥ SEZ ಅನ್ನು ತಾವೇನು ಮಾಡಿದ್ದೀರಲ್ಲ, ನಂದಗುಡಿಯಲ್ಲಿರಬಹುದು, ರಾಮನಗರದಲ್ಲಿರಬಹುದು, ಸೋಲೂರು ಇರಬಹುದು, ಸಾತನೂರು ಇರಬಹುದು, ಇವೆಲ್ಲವನ್ನೂ ಬೇರೆ ಕಡೆ shift ಮಾಡಿ. ಅವಶ್ಯಕತೆ ಇಲ್ಲ. ಬೆಂಗಳೂರು ಸುತ್ತಮುತ್ತ ಬಹಳ ಫಲವತ್ತಾದ ಭೂಮಿ ಇದೆ. ಕೃಷಿಗೆ ಯೋಗ್ಯವಿರುವ ಭೂಮಿ ಇದು. ಅದಕ್ಕಾಗಿ ಇದನ್ನು shift ಮಾಡಿ. ನಮ್ಮ area ದಲ್ಲಿ industry ಯೇ ಇಲ್ಲ. ಉದಾಹರಣೆಗೆ, ಗುಲಬರ್ಗಾ ಜಿಲ್ಲೆಗೆ industry ಯವರು ಬರುತ್ತಿಲ್ಲ.

ಅಧ್ಯಕ್ಷರು: ನಮ್ಮ ಕಡೆಯೂ ಯಾರೂ ಬರುವುದಿಲ್ಲ. ಅವರು ಎಲ್ಲ ಬೆಂಗಳೂರಿಗೇ ಬರುವುದು.

ಶ್ರೀ ಬಸವರಾಜ ರಾಯರೆಡ್ಡಿ: ಇದಕ್ಕೆ ಕಾರಣವೆಂದರೆ, infrastructure ಅನ್ನು ಮಾಡಿಕೊಡಲಿಕ್ಕೆ ಯಾರಿಗೂ ಮನಸ್ಸಿಲ್ಲದೇ ಇರುವುದರಿಂದ ಇವತ್ತು ಹಳ್ಳಿ

ಕಡೆ ಯಾವ industryಗಳೂ ಬರುತ್ತಿಲ್ಲ. ಇಲ್ಲಿ vested interest ಇದೆ. ಎಲ್ಲ ಬೆಂಗಳೂರು ಸುತ್ತ ಮುತ್ತ ಇರಬೇಕು, ಜಮೀನುಗಳ ರೇಟ್ ಜಾಸ್ತಿ ಆಗಬೇಕು, real estate ದಂಧೆಗೆ ಅನುಕೂಲವಾಗಬೇಕು.

ಹೀಗಾಗಿ ನಾವೂ ಕೂಡ ಕೈಗಾರಿಕೋದ್ಯಮಗಳಿಗೆ ಪ್ರೋತ್ಸಾಹ ಕೊಡುತ್ತಿದ್ದೇವೆ. ಅದಕ್ಕೆ ನಾವು ಈ ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳುತ್ತಿದ್ದೇವೆ. ನಂದಗುಡಿ ಮತ್ತು ಬೆಂಗಳೂರು ಸುತ್ತಮುತ್ತ ಈಗಾಗಲೇ 60 ಸಾವಿರ ಎಕರೆ ಜಮೀನನ್ನು ತಾವು notify ಮಾಡಲಿಕ್ಕೆ ಹೊರಟಿದ್ದೀರಿ. ಇದನ್ನು ಬೇರೆ ಕಡೆ shift ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗಾಗಲೇ ನಾನು ಹೇಳಿದ ಹಾಗೆ, ಇವತ್ತಿನ ದಿವಸ ತಾವು ಏನು 1,20,000 ಎಕರೆ ಜಮೀನನ್ನು ಗುರುತಿಸಿದ್ದೀರಿ, ಅದು SEZ ಇರಬಹುದು, ಬೇರೆ ಬೇರೆ ಕೈಗಾರಿಕಾ ಸಲುವಾಗಿ ಇರಬಹುದು. ಅದರಲ್ಲಿ ನೀವೇನೇನು ಕೊಡುತ್ತಿದ್ದೀರಿ ಎಂದರೆ ಉಪನಗರ ಸ್ಥಾಪನೆ ಮಾಡಲಿಕ್ಕೆ 61,00 ಎಕರೆ ಜಮೀನು ಮಾಡುತ್ತಿದ್ದೀರಿ. Satellite Town ಏಕೆ ಬೇಕು? ಬೇರೆ ಬೇರೆ ಪ್ರದೇಶಗಳಿಗೆ ತೆಗೆದುಕೊಂಡು ಹೋಗಿ ನಿರ್ಮಾಣ ಮಾಡಿ. ಬೆಂಗಳೂರಿನ ಸುತ್ತ ಮುತ್ತ ಉಪನಗರಗಳ ಅವಶ್ಯಕತೆಯಿಲ್ಲ. Ring road ge 15,000 ಎಕರೆ, ಮತ್ತು ಉದ್ದಿಮೆಗಳಿಗೆ 10,000 ಎಕರೆ, ನಂದಗುಡಿ ಒಂದಕ್ಕೆ ಒಬ್ಬ ವ್ಯಕ್ತಿಗೆ ಅನುಕೂಲ ಮಾಡುವುದಕ್ಕೆ ಸುಮಾರು 13,000 ಎಕರೆಗಿಂತ ಹೆಚ್ಚು ಜಮೀನನ್ನು ಕಾಯ್ದಿರಿಸಲಾಗಿದೆ. ಇದರಲ್ಲಿ ಏನು ನಡೆದಿದೆ ಎಂದು ನಮಗೆ ಸಂಶಯಕ್ಕೆ ಕಾರಣವಾಗಿದೆ. ಅದಕ್ಕಾಗಿ ಇದನ್ನು ಕೈಬಿಡಬೇಕು. ನಾವು ಸರ್ಕಾರವನ್ನು ಸ್ಪಷ್ಟವಾಗಿ ಒತ್ತಾಯ ಮಾಡುತ್ತೇವೆ. ಈ ಹಿನ್ನಲೆಯಲ್ಲಿ ನಾನು ತಮ್ಮ ಮುಖಾಂತರ ಕೇಳುವುದಿಷ್ಟೆ, ನಮ್ಮ ರಾಜ್ಯ ಒಂದು ಸಮತೋಲನವಾಗಿ ಬೆಳೆಯಬೇಕು, ಬೆಂಗಳೂರು ನಗರದಲ್ಲಿ ಇವತ್ತೇನು congestion ಆಗಿದೆ, ಬೆಂಗಳೂರು ಪ್ರದೇಶದಲ್ಲಿಯೇ ಜನರಿಗೇನು ತಾವು ಅನುಕೂಲ ಮಾಡಲಿಕ್ಕೆ, ಕೆಲವೇ ಕೈಗಾರಿಕೋದ್ಯಮಿಗಳಿಗೆ ಅನುಕೂಲ ಮಾಡಲಿಕ್ಕೆ ಹೊರಟಿದ್ದೀರಿ ಇದು ನಮ್ಮ ತಪ್ಪು ಆರ್ಥಿಕ ನೀತಿಯಿಂದ ಆಗುತ್ತಿದೆ. ನಾನು ಈಗಾಗಲೇ ಹೇಳಿದಂತೆ ನೀವು ಕೃಷಿಕರನ್ನು ಭಿಕ್ಷುಕರನ್ನಾಗಿ ಮಾಡಲು ಹೊರಟಿದ್ದೀರಿ. ಇದು ಕೇವಲ real estate ದಂಧೆ ಮಾಡುವ ಜನರಿಗೆ ಸಹಾಯವಾಗುತ್ತದೆ. ನೀವು ಅವರಿಗೆ ಪ್ರೋತ್ಸಾಹ ಕೊಡುತ್ತಿದ್ದೀರಿ. ನೀವೂ ಅವರ ಜೊತೆಗೆ ನಮ್ಮ ಕೈಜೋಡಿಸುತ್ತೀರಿ. ನಂದಗುಡಿ, ಬೇರೆ ಬೇರೆ ಬೆಂಗಳೂರು ಸುತ್ತಮುತ್ತಲಿರುವ ಪ್ರದೇಶಗಳನ್ನು SEZ ನಂದ ತೆಗೆದುಹಾಕಿ, ಈಗಾಗಲೇ ಹೇಳಿದಂತೆ ಬೇರೆ ಬೇರೆ ಪ್ರದೇಶಗಳಿಗೆ ಅಂದರೆ, ಬೆಳಗಾಂ, ಗುಲ್ಬರ್ಗಾ, ಮಂಡ್ಯ,

ಕರಾವಳಿ ಭಾಗಗಳಲ್ಲಿ SEZಗಳನ್ನು ಸ್ಥಾಪನೆ ಮಾಡಲು ಅಲ್ಲಿ ಎಲ್ಲಾ ತರಹದ ಮೂಲಭೂತ ಸೌಕರ್ಯಗಳನ್ನು ಮಾಡಿದರೆ ಅನುಕೂಲವಾಗುತ್ತದೆ. ಆ ಹಿನ್ನೆಯಲ್ಲಿ ನಾವು ಸರ್ಕಾರವನ್ನು ಒತ್ತಾಯಿಸುತ್ತಾ, ಇದನ್ನು ಕೈಬಿಡಬೇಕೆಂದು ಸ್ಪಷ್ಟವಾಗಿ ಹೇಳುತ್ತೇವೆ. ಇದರ ಬಗ್ಗೆ ನೀವು ಏಕೆ ಈ ರೀತಿ ಮಾಡುತ್ತಿದ್ದೀರಿ, ಇದರ ಹಿನ್ನೆಲೆ ಏನು ಎಂಬ ಬಗ್ಗೆ ಒಂದು ಶ್ವೇತಪತ್ರವನ್ನು ತರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್ (ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ರೈತ ತನ್ನ ಹೆಂಡತಿ ಮಕ್ಕಳಿಗೆ ಸರಿಯಾಗಿ ವಿದ್ಯಾಭ್ಯಾಸ ಕೊಡುವುದಕ್ಕಾಗುವುದಿಲ್ಲ. ಬಟ್ಟೆ ತರುವುದಕ್ಕಾಗುವುದಿಲ್ಲ. ಇವತ್ತು ಏನಾದರೂ ಸ್ವಲ್ಪ ಹಣ ಬಂದರೆ ಆ ದುಡ್ಡನ್ನು ತೆಗೆದುಕೊಂಡು ಹೋಗಿ ಜಮೀನು ತೆಗೆದುಕೊಳ್ಳಬಹುದು.

ಅಧ್ಯಕ್ಷರು: ಮಾನ್ಯ ಸದಸ್ಯರು ಹೇಳಿರುವುದು ಅದಲ್ಲ. ಅವರ ಪ್ರಶ್ನೆ ಏನದೆ ಎಂದರೆ, ಬೆಂಗಳೂರು ನಗರದ ಸುತ್ತಮುತ್ತ ಏಕೆ ಬರುತ್ತೀರಿ, ಇಲ್ಲಿ ಎಕರೆಗೆ 50 ಲಕ್ಷ, 1 ಕೋಟಿ ರೂ. ಬೆಲೆ ಇದೆ. real estate ನವರೂ, ನೀವೂ join ಆಗುತ್ತಿದ್ದೀರಿ, ಇದನ್ನೆಲ್ಲ ದೂರ ಮಾಡಿ, barren lands ನಲ್ಲಿ ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಡಿ.ಟಿ.ಜಯಕುಮಾರ್: ದೂರ ಹೋದರೆ ಉದ್ದಿಮೆದಾರರು ಬರುವುದಿಲ್ಲವಲ್ಲ ಸ್ವಾಮಿ. SEZನವರು ಬಿಟ್ಟು ಹೋಗುತ್ತಾರೆ. ದೂರ ಯಾರು ಬರುತ್ತಾರೆ? ಹುಬ್ಬಳ್ಳಿ-ಧಾರವಾಡದಲ್ಲಿ ನೀರು ಸಿಗುವುದಿಲ್ಲವೆಂದು ಅಲ್ಲಿಗೆ ಯಾರೂ ಬರುವುದಿಲ್ಲ. ಬೆಂಗಳೂರು ಸುತ್ತಮುತ್ತ ಏಕೆ ಬರುತ್ತಾರೆಂದರೆ, ಇದು attractive state, growth rate ಎಂದು ಬರುತ್ತಾರೆ. ಬೇರೆ ಕಡೆ ಎಲ್ಲಿಗೆ ಬರುತ್ತಾರೆ? ರೈತರು ಯಾರೂ ಕೂಡ ಇವತ್ತಿನವರೆಗೆ complaint ಮಾಡಲಿಲ್ಲ. ರೈತರಿಗೆ ಇವತ್ತು ಒಂದು ಕೋಟಿ ರೂಪಾಯಿ ಬಂದರೆ, ರಾಮನಗರದ ಹತ್ತಿರವೋ, ಮೇಕೆದಾಟು ಹತ್ತಿರ ಜಮೀನು ತೆಗೆದುಕೊಳ್ಳುತ್ತಾರೆ. ಅಲ್ಲಿ ಜಮೀನು ಉಳಿಸಿಕೊಳ್ಳುತ್ತಾರೆ. ಇದಕ್ಕಿಂತ ಹೆಚ್ಚಾಗಿ 30:70 ಎಂದು ನಾವು ಮಾಡುತ್ತಿದ್ದೇವೆ. Housing Board, BDA, MUDA ಎಲ್ಲರೂ 30% ರೈತರಿಗೆ, 70% ಸರ್ಕಾರಕ್ಕೆ ಈ ರೀತಿ ಮಾಡುವುದರಿಂದ ಯಾವ ರೈತರಿಗೂ ಕೂಡ ಅನ್ಯಾಯವಾಗುತ್ತಿಲ್ಲ. ಅದರಿಂದ ಲಾಭವಾಗುತ್ತಿದೆಯೇ ಹೊರತು ರೈತನಿಗೆ ಅನ್ಯಾಯವಾಗುತ್ತಿಲ್ಲ. ಒಬ್ಬ ಡಿ ದರ್ಜೆ ಗುಮಾಸ್ತ ಅವನ ಜೀವನ ನಡೆಸುವ ಮಟ್ಟಕ್ಕೂ ಕೂಡ ಇವತ್ತು ರೈತರಿಂದ ಆಗುತ್ತಿಲ್ಲ. ಬೆಳೆಗಳಿಗೆ ಬೆಲೆ ಇಲ್ಲ. ಮಾರ್ಕೆಟ್ ಕೊಡಬೇಕು. ಬೆಲೆ

ಕೊಡಬೇಕು. ಆಗ ಮಾತ್ರ ರೈತರು ಉದ್ಧಾರವಾಗುತ್ತಾರೆಯೇ ಹೊರತು SEZ ಮಾಡುವುದರಿಂದ ರೈತರು ಹಾಳಾಗುತ್ತಾರೆ ಎಂಬುದರಲ್ಲಿ ಅರ್ಥವಿಲ್ಲ.

ಅಧ್ಯಕ್ಷರು: ವಾಟಾಳ್ ನಾಗರಾಜ್ ರವರೆ ದಯಮಾಡಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ತಾವು ಹಸನ್ಮುಖರಾಗಿರಬೇಕಷ್ಟೆ. ಇನ್ನೇನಲ್ಲ.

ಅಧ್ಯಕ್ಷರು: ಮಾತನಾಡಿ. ಏಕೆಂದರೆ, ಈ ಸಾರಿ limit ಆಗಿದೆ. ಅವರಿಗೆ 15 ನಿಮಿಷ ಇತ್ತು. 5 ನಿಮಿಷ ಜಾಸ್ತಿ ಸಮಯ ತೆಗೆದುಕೊಂಡಿದ್ದಾರೆ. ನೀವೂ ಅಷ್ಟರೊಳಗೆ ಮಾತನಾಡಿ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್(ಚಾಮರಾಜ ನಗರ): ಮಾನ್ಯ ಅಧ್ಯಕ್ಷರೆ, ನಂದಗುಡಿ ವಿಶೇಷ ಆರ್ಥಿಕ ವಲಯವನ್ನು ರದ್ದು ಮಾಡಬೇಕು ಅದು ಬೇಡ ಎಂದು ಎಲ್ಲರ ಅಭಿಪ್ರಾಯ ಮತ್ತು ಅಭಿಮತವಿದೆ. ಕೈಗಾರಿಕೆಯ ಸಚಿವರನ್ನು ನಾನು ಅದೇ ರೀತಿ ಒತ್ತಾಯ ಮಾಡುತ್ತೇನೆ. ಅವರು ಇದರ ಬಗ್ಗೆ ಕಾಳಜಿ, ರಾಜ್ಯದ ಬಗ್ಗೆ, ರೈತರ ಬಗ್ಗೆ, ಕಾಳಜಿ ಇದೆ ಎಂದು ನಾವು ಅಂದುಕೊಂಡಿದ್ದೇವೆ. ಆದುದರಿಂದ ಅವರು ರೈತರ ವಿರೋಧಿಯಾಗಲಾರರು ಎಂದು ನಾನು ಮನಸ್ಸಿನಲ್ಲಿ ಅಂದುಕೊಂಡಿದ್ದೇನೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ, ವಿಶೇಷ ಆರ್ಥಿಕ ವಲಯ ಇದರ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ ಮತ್ತು ಸಾಕಷ್ಟು ವಿರೋಧಗಳು ತೀರ್ವವಾಗಿ ಬಂದಿವೆ. ಬಹಳ ಪ್ರಮುಖವಾಗಿ ಅಲ್ಲಿನ ರೈತರು ನಮ್ಮನ್ನು ಒಕ್ಕಲೆಬ್ಬಿಸಬೇಡಿ ನಮ್ಮ ಜಮೀನನ್ನು ಪಡೆಯಬೇಡಿ, ನಮ್ಮ ಜಮೀನನ್ನು ತಾವು ಪಡೆದರೆ ನಾವು ಇಲ್ಲಿ ಪ್ರಾಣ ಬಿಡಬೇಕಾಗುತ್ತದೆನ್ನುವ ಷರತ್ತು ಹಾಕಿದ್ದಾರೆ. ಅನೇಕರು ಪ್ರಾಣ ಬಿಡುತ್ತಾರೆ. ಮುಂದೆ ದೊಡ್ಡ ದುರಂತ ಕಾದಿದೆ. ಮಾನ್ಯ ನಾಯ್ಡುರವರ ಗಮನಕ್ಕೆ ನಾನು ತರುತ್ತೇನೆ. ಅಲ್ಲಿ ರೈತರು ತಮ್ಮ ಪ್ರಾಣ ಹೋದರೂ ತಮ್ಮ ರೈತರ ಜಮೀನನ್ನು ಬಿಟ್ಟು ಕೊಡುವುದಿಲ್ಲ, ಫಲವತ್ತಾದ ಜಮೀನನ್ನು ಬಿಟ್ಟುಕೊಡುವುದಿಲ್ಲ ಎನ್ನುವ ಮಾತುಗಳನ್ನು ಸ್ಪಷ್ಟವಾಗಿ ನೇರವಾಗಿ ಹೇಳಿದ್ದಾರೆ. ನಾನು ಮಾನ್ಯ ನಾಯ್ಡುರವರಿಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಾವು ಇದನ್ನು ಪುನರ್ ಪರಿಶೀಲನೆ ಮಾಡಿ. ಬೆಂಗಳೂರನ್ನೇ ಕೇಂದ್ರವನ್ನಾಗಿ ತಾವು ಇಟ್ಟುಕೊಂಡಿದ್ದೀರಿ. ನಾನು ಆಗಲೇ ಬಹಳ ಚಿಂತನೆ ಮಾಡಿದೆ. ನೀವು ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು, ಅನೇಕ ನಾಯ್ಡುರವರು ಬೆಂಗಳೂರು ಬೆಳವಣಿಗೆಗೆ ಬಹಳ ಸಹಾಯ ಮಾಡಿದ್ದಾರೆ. ರಂಗಯ್ಯ ನಾಯ್ಡುರವರು, ಮೇಯರ್ ಆಗಿದ್ದಂತಹ ವಿ.ಆರ್. ನಾಯ್ಡುರವರು,

ದೀನ ದಯಾಳು ನಾಯ್ಡುರವರು, ವೇಣುಗೋಪಾಲ ನಾಯ್ಡುರವರು, ಹೀಗೆ ಅನೇಕ ನಾಯ್ಡುಗಳವರು ಈ ಬೆಂಗಳೂರು ಬೆಳವಣಿಗೆಗೆ ಸಹಾಯ ಮಾಡಿದ್ದಾರೆ. ವೇಣುಗೋಪಾಲ ನಾಯ್ಡುರವರು ಕಾರ್ಯದರ್ಶಿಯಾಗಿದ್ದರು. ಅವರು ಅಪರಂಜಿಯಾಗಿದ್ದರು. ಈಗಿನ ಕಾಲದ ಕಾರ್ಯದರ್ಶಿಗಳು ಗುಲಗಂಜಿಗಳು ಇದ್ದ ಹಾಗೆ. ಆಗಿನ ಕಾಲದಲ್ಲಿ ವೇಣುಗೋಪಾಲ ನಾಯ್ಡುರವರನ್ನು ನಾನು ನೋಡಿದ್ದೆ, ಕೈಗಾರಿಕಾ ಸಚಿವರಾಗಿದ್ದಾಗ ಅವರು ಅಪರಂಜಿ, ಅಪರಂಜಿಗೂ ಗುಲಗಂಜಿಗೂ ಬಹಳ ವ್ಯತ್ಯಾಸವಿದೆ. ಅಂಥ ಕಾರ್ಯದರ್ಶಿಗಳನ್ನು ನಾನು ನೋಡಿದ್ದೇನೆ. ರಂಗಯ್ಯ ನಾಯ್ಡುರವರು ನಗರ ಸಭೆಯ ಸದಸ್ಯರು, ಯತಿರಾಜ ನಾಯ್ಡುರವರು ಒಳ್ಳೆಯ ವಕೀಲರು, ಈ ರಾಜ್ಯದಲ್ಲಿ ಅಡ್ವೋಕೇಟ್ ಜನರಲ್ ಆಗಿದ್ದಂಥವರು. ಹೀಗೆ ಅನೇಕ ನಾಯ್ಡುಗಳು ಅವರೇನು ಆಂದ್ರದಿಂದ ಬಂದರು ಎಂದಲ್ಲ, ಬೆಂಗಳೂರಿನ ಬೆಳವಣಿಗೆಗೆ ಬಹಳ ಸಹಕಾರಿಯಾಗಿದ್ದಾರೆ ಮತ್ತು ಬಹಳ ಕೆಲಸ ಮಾಡಿದ್ದಾರೆ. ನೀವು ಕೆಟ್ಟ ಹೆಸರು ತೆಗೆದುಕೊಳ್ಳುವುದು ಬೇಡ ಎಂದು ನಾನು ಹೇಳುತ್ತಿದ್ದೇನೆ. ಇದು ಬೇಕಾಗಿಲ್ಲ, ಯಾವುದೋ ಉದ್ದೇಶಕ್ಕಾಗಿ ಮಾಡುವುದು ಬೇಡ. ನನಗೆ ಅನ್ನಿಸುವುದು, ಈ ರೈತರ ಜಮೀನನ್ನು ವಶಪಡಿಸಿಕೊಳ್ಳುವುದು ಈ ಸರ್ಕಾರ ಬಂದ ಮೇಲೆ ಆಯಿತು ಎಂದು ಹೇಳುವುದಿಲ್ಲ. ಇದು ಸುಮಾರು ಹತ್ತು ವರ್ಷಗಳ ಹಿಂದಿನಿಂದಲೂ ನಡೆದಿದೆ. ಇದೇನು ಹೊಸದೇನೂ ಅಲ್ಲ. ಹತ್ತು ವರ್ಷದಿಂದ ಸರ್ಕಾರದಿಂದ ಜಮೀನು ಪಡೆಯುವುದೇ ದಂಧೆಯಾಗಿದೆ. ಅಧ್ಯಕ್ಷರೆ, ಇಲ್ಲಿ ಇವರು ಒಂದು ಕಡೆಯಿಂದ ನಮಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ರಮೇಶ್‌ಕುಮಾರ್‌ರವರೇ, ಸಿದ್ಧರಾಮಯ್ಯನವರೇ, ದಯಮಾಡಿ ತಮಗೆ ಕೈ ಮುಗಿಯುತ್ತೇನೆ ಎರಡು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಇವರು ಬಹಳ ತಲೆ ಕೆಡಿಸುತ್ತಾರೆ.

ಶ್ರೀ ಕೆ. ಆರ್. ರಮೇಶ್‌ಕುಮಾರ್: ಇವರಿಗೆ ಮಾಹಿತಿ ಕೊಟ್ಟು ಸಹಾಯ ಮಾಡಿದರೆ ನಾವು ಕೆಡಿಸುತ್ತೇವೆಂದು ಹೇಳುತ್ತಾರೆ, ಇವರನ್ನು ಯಾರಾದರೂ ಕೆಡಿಸುವುದಕ್ಕೆ ಸಾಧ್ಯವೇ? ಕೆಡುವುದು ಎಂದರೆ ಇವರು , ಕೆಟ್ಟಿರುವುದು ಎಂದರೆ ಇವರು, ಇವರನ್ನು ಕೆಡಿಸುವುದು ಈ ಜಗತ್ತಿನಲ್ಲಿ ಯಾರಿಗೂ ಸಾಧ್ಯವಿಲ್ಲ. ಏನಾದರೂ ಆದರೆ ಸುಧಾರಣೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್: ಇವರು ತೀರಾ ಪರಿಚಿಗೆಟ್ಟು ಹೋಗಿದ್ದಾರೆ. ಬರಿ ಕೆಟ್ಟಿಲ್ಲ, ಹಳ್ಳಿ ಕಡೆ ಗಾಧೆ ಇದೆ. ತೀರ ಪರಿಚಿಗೆಟ್ಟಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ಮೊದಲೇ ಇವರಿಗೆ ಹೇಳಿದೆ, ಬಾಯಿಗೆ ಬಂದ ಹಾಗೆ ಬೈಯಿಸಿಕೊಳ್ಳುತ್ತೀರಿ, ಆಚೆ ಹೋಗಿ ಟೀ ಕುಡಿದು ಬರೋಣ ಎಂದು ಹೇಳಿದೆ. ಇವರು ಕೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ನೋಡಿ ನೀವು ಬಾಯಿಗೆ ಬಂದ ಹಾಗೆ ಬಯ್ಯುತ್ತೇವೆ ಅಂತೆ. ನಮ್ಮ ಬಲಭಾಗದಲ್ಲಿ ಮಾಧುಸ್ವಾಮಿ, ಎಡಗಡೆ ಶ್ರೀರಾಮರೆಡ್ಡಿ, ಇವರ ಕಾಟ ನಮಗೆ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ, ದಯವಿಟ್ಟು ಈ ಪಕ್ಕಕ್ಕೆ ನಮಗೆ ಎಲ್ಲಾದರೂ ಒಂದು ಸೀಟ್ ಕೊಟ್ಟು ಬಿಟ್ಟರೆ ನಮಗೆ ನಿಜವಾಗಲು ಅನುಕೂಲವಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಆ ಕಡೆ ಕೇಳುವುದಿಲ್ಲ. ಈ ಕಡೆ ಕೇಳುತ್ತಾರೆ. ಅಲ್ಲಿಗೆ ಹಾಕಿ ಅವರು ಅಲ್ಲಿಗೆ ಹೋಗಲಿ.

ಶ್ರೀ ವಾಟಾಳ್ ನಾಗರಾಜ್: ನೀವು ನನ್ನ ಮೇಲೆ ಕೃಪೆಯಿಟ್ಟು ಒಂದು ಸ್ವಲ್ಪ ಪಕ್ಕಕ್ಕೆ ಕೊಟ್ಟು ಬಿಟ್ಟರೆ ನಾನು ನಿಜವಾಗಲು ಧನ್ಯನಾಗುತ್ತೇನೆ. ಇಲ್ಲಾಂದ್ರೆ ಕಾಟ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಮ್ಮ ಶ್ರೀರಾಮರೆಡ್ಡಿಯವರು ಇನ್ನೂ ಮುನಿಸಿಕೊಂಡೇ ಇದ್ದಾರೆ ಅವರು ನಗಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ನೋಡಿ ಅವರು ಬಂದಾಗ ಕನ್ನಡಕ ಹಾಕುತ್ತಿರಲಿಲ್ಲ. ನಿಮ್ಮನ್ನು ನೋಡಿ ನೋಡಿ ಅವರಿಗೆ ಕನ್ನಡಕ ಹಾಕುವ ಸ್ಟೇಜ್ ಬಂತು.

ಅಧ್ಯಕ್ಷರು: ಆಯಿತು ಬಿಡಿ, ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ಇಲ್ಲ ಇಲ್ಲ ಈ ಪರಿಸ್ಥಿತಿಯ ಕರ್ಮ ನೋಡಿ ಅವರು ಕನ್ನಡಕ ಹಾಕಿಕೊಂಡಿರಬೇಕು. ಸುಮ್ಮನೆ ನೀವು ಏಕೆ ಹೇಳುತ್ತೀರಿ?

ಅಧ್ಯಕ್ಷರು: ಟೈಂ ಮುಗಿದು ಹೋಗಿ ಬಿಡುತ್ತದೆ ಆಮೇಲೆ ನೀವು ಪುನಃ ಸಮಯ ಕೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿರುವ ಹಾಗೆ, ನಾವೆಲ್ಲರೂ ಬೆಂಗಳೂರಿನಲ್ಲಿ ಇದ್ದೇವೆ. ಅನೇಕರು ಈಗಾಗಲೇ ಮಾತನಾಡಿದ್ದಾರೆ. ಮಾನ್ಯ ಕೈಗಾರಿಕೆಯ ಸಚಿವರಿಗೆ ಹೇಳುತ್ತೇನೆ. ಬೆಂಗಳೂರು ಸುತ್ತ ನೀವು ಓಡಾಡಿ. ಮೊದಲು ಬೆಂಗಳೂರು ಹೇಗೆ ಇತ್ತು? 25 ವರ್ಷಗಳ ಹಿಂದೆ ಹೇಗೆ ಇತ್ತು? ಕೆಂಪೇಗೌಡರವರು ಬೆಂಗಳೂರನ್ನು ಸ್ಥಾಪನೆ ಮಾಡಿದಾಗ

ಎಷ್ಟು ಇತಿಹಾಸ ಇದೆ ಎಂದರೆ, ನಿಮಗೆ ಈಗಲೂ ಹಳೆಯ ಪೇಟೆಗಳು, ದರ್ಜಿಪೇಟೆ, ಗಾಣಿಗರ ಪೇಟೆ, ದೇವಾಂಗ ಪೇಟೆ, ಎಂಥೆಂಥ ಹೆಸರುಗಳನ್ನು ಅವರು ಆ ಪೇಟೆಗಳಿಗೆ ಇಟ್ಟು ಒಂದು ಹೊಸ ಇತಿಹಾಸವನ್ನು ನಿರ್ಮಿಸಿದರು. ಮತ್ತು ಬೆಂಗಳೂರಿನಲ್ಲಿ ಸುಮಾರು ಒಂದು ನೂರು ಮಠಗಳು, ದೇವಸ್ಥಾನಗಳು, ಇದ್ದವು. ಇದು ಬೆಂಗಳೂರಿಗೆ ಬಹಳ ವಿಶಿಷ್ಟ. ಇವತ್ತು 50–60 ಮಠಗಳು ಉಳಿದಿವೆ. ಇನ್ನು 60–70 ಮಠಗಳನ್ನು ಎಲ್ಲಾ ದೋಚಿದ್ದಾರೆ. ಅವರು ನಾಲ್ಕು ಕಡೆ ಗೋಪುರಗಳನ್ನು ನಿರ್ಮಿಸಿದ್ದರು. ಈ ನಾಲ್ಕೂ ಗೋಪುರಗಳೇ ಆಗ ಹಸಿರು ವಲಯ ಇದ್ದ ಹಾಗೆ. ಅದು ಮುಂದೆ ಹೋಗಕೂಡದು ಎಂದು ಆ ದಿವಸ ಕೆಂಪೇಗೌಡರು ಸ್ಥಾಪಿಸಿದ್ದರು. ನಾವು ಈಗ ಸುಮ್ಮನೆ ಕೆಂಪೇಗೌಡರ ಬಗ್ಗೆ ಮಾತನಾಡುತ್ತೇವೆ, ಪ್ರಶಸ್ತಿಗಳನ್ನು ಕೊಡುತ್ತೇವೆ, ಅದಕ್ಕೆ ಅರ್ಥವಿಲ್ಲ. ಕೆಂಪೇಗೌಡರ ದೂರದೃಷ್ಟಿಯನ್ನು, ಇವರ ಆಶೆ ಆಶೋತ್ತರಗಳನ್ನು, ನಾವ್ಯಾರು ಈಡೇರಿಸಿಲ್ಲ. ನಾವು ಅವರಿಗೆ ಅಪಚಾರ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಇವತ್ತು ಪರಿಸ್ಥಿತಿ ಏನಾಗಿದೆ? 2011 ಇಸ್ವಿಗೆ ಬೆಂಗಳೂರಿನ ಜನಸಾಮಾನ್ಯರಿಗೆ 6 ದಶ ಲಕ್ಷ ಲೀಟರ್ ನೀರು ಕೊರತೆಯಾಗುತ್ತದೆ. ಸುಮಾರು 20 ಸಾವಿರಕ್ಕಿಂತ ಹೆಚ್ಚು ಕಾರ್ಖಾನೆಗಳು ಬೆಂಗಳೂರಿನಲ್ಲಿವೆ. 10 ಸಾವಿರಕ್ಕಿಂತಲೂ ಹೆಚ್ಚು ಹೋಟೆಲ್‌ಗಳು ಇವೆ. ರಸ್ತೆ, ಆಸ್ಪತ್ರೆ, ನರ್ಸಿಂಗ್ ಹೋಮ್, ಕಾರ್ಖಾನೆಗಳು, ಪ್ರತಿದಿನ 2500 ಮೆಟ್ರಿಕ್ ಟನ್ ಈ ಎಲ್ಲಾ ಮೂಲಗಳಿಂದ ತ್ಯಾಜ್ಯ ವಸ್ತು ಬರುತ್ತಿದೆ. ಬೆಂಗಳೂರಿನಲ್ಲಿ 700 ಆಸ್ಪತ್ರೆಗಳಿವೆ. ಈ ಆಸ್ಪತ್ರೆಗಳಿಂದ ಸುಮಾರು 10 ಮೆಟ್ರಿಕ್ ಟನ್ ಜೀವ ವೈದ್ಯಕೀಯ ತಾಜ್ಯ, ಇದರಲ್ಲಿ ಮೂಳೆ, ಚರ್ಮ, ಕಟ್ ಮಾಡಿದ್ದು, ಇದೆಲ್ಲಾ ಬರುತ್ತದೆ. ಬಹುಮಹಡಿ ಕಟ್ಟಡಗಳು ಯದ್ವಾತದ್ವ ಇವೆ. ಸಿದ್ದರಾಮಯ್ಯನವರೇ ತಮಗೆ ನಾನು ಹೇಳುವುದು ಏನೆಂದರೆ, 25 ವರ್ಷಗಳ ಹಿಂದೆ ಒಂದು ಕಾಲದಲ್ಲಿ ನಮ್ಮ ಬೆಂಗಳೂರಿನಲ್ಲಿ ಒಂದು ಎಕರೆ ಭೂಮಿಗೆ 500 ರೂಪಾಯಿ ಇತ್ತು. ಈಗ 5 ಕೋಟಿ. 500 ರೂಪಾಯಿ ಇದ್ದಂಥ ಒಂದು ಎಕರೆಗೆ ಇವತ್ತಿನ ಬೆಲೆ 5 ಕೋಟಿಯಾಗಿದೆ. ಈ ಊರಿಗೆ ಒಂದು ರೀತಿ ರಾಕ್ಷಸರೇ ಬಂದಿದ್ದಾರೆ, ಯಮಧರ್ಮರೇ ಬಂದಿದ್ದಾರೆ. H.M.Group, Ranka Group, D.L.F.Group, Nitesh Estate, Prestige Group, Shobha Group, Purvankar, ಇವರೆಲ್ಲ ಬಿಲ್ಡರ್ಸ್. ಬೆಂಗಳೂರಿಗೆ ಬಂದಿರತಕ್ಕಂಥ ಬಿಲ್ಡರ್ಸ್ Sky-line, Brigade Group, Manthri Developer, ಇವರೆಲ್ಲ ಬೆಂಗಳೂರಿಗೆ ಬಂದಿರುವವರು. ಬೆಂಗಳೂರಿಗೆ ಯಮಧರ್ಮರು, ಕರ್ನಾಟಕದ ರಾಜಧಾನಿ, ಕನ್ನಡಿಗರ ಭಾಗಕ್ಕೆ, ಕನ್ನಡಿಗರ ಕನಸಿಗೆ, ಇವರಿಂದ ಯಮಲೋಕ ನಿರ್ಮಾಣವಾಗುತಿದೆ. ಬೆಂಗಳೂರು ಸುತಾ ಸುಮಾರು 700–800–900 ಈ

ದೊಡ್ಡ ದೊಡ್ಡ ಕಟ್ಟಡಗಳು, ಬಹುಮಹಡಿ ಕಟ್ಟಡಗಳು, ಯಾವತ್ತು ಕುಸಿಯುತ್ತವೆಯೋ ಗೊತ್ತಿಲ್ಲ. ಈ ಕಟ್ಟಡದ ಭದ್ರತೆ ಏನು? ಅದು ಯಾವ ರೀತಿ ಕಟ್ಟಿದ್ದಾರೆ? ಯಾರು ಓದಿಲ್ಲ. ಬಂದವರಿಗೆಲ್ಲಾ ಅವಕಾಶ ಕೊಟ್ಟಿದ್ದಾರೆ. ಈ ಪರಿಸ್ಥಿತಿಯಿಂದ ಬೆಂಗಳೂರಿನ ಆಸ್ತಿ ಪರಭಾರೆಯಾಗಿದೆ. ಈಗ ನೀವು ಯಾವ ಉದ್ದೇಶಕ್ಕಾಗಿ ವಿಶೇಷ ಆರ್ಥಿಕ ವಲಯವನ್ನು ಮಾಡುತ್ತಿದ್ದೀರಿ? ಕೈಗಾರಿಕೆ ಸ್ಥಾಪಿಸುವುದು ಹಾಗೂ ಕನ್ನಡಿಗರಿಗೆ ಉದ್ಯೋಗ ಕೊಡುವುದು, ಇಲ್ಲ. ಬಹುರಾಷ್ಟ್ರೀಯ ಕಂಪನಿಗಳು ಬ್ರಿಟಿಷ್ ಕಾಲದಲ್ಲಿ East India Company ಯಾವ ರೀತಿ ಬಂತು, ಅದೇ ರೀತಿ ಬಹುರಾಷ್ಟ್ರೀಯ ಕಂಪನಿಗಳು ಈಗ ಬಂದಿವೆ. ಇವುಗಳು ಬಂದ ಮೇಲೆ, ನೂತನ ವಿದ್ಯುತ್ ಕಾರ್ಖಾನೆ ಸಮಾಧಿಯಾಯಿತು. ಮೈಸೂರು ಲ್ಯಾಂಪ್ಸ್ ಸಮಾಧಿಯಾಯಿತು. ತಮಗೆ ಹೇಳುವುದಾದರೆ, ಸರ್. ಎಂ.ವಿಶ್ವೇಶ್ವರಯ್ಯನವರು ಕಟ್ಟಿದಂಥ.. BEL, ಕೆ.ಸಿ. ರೆಡ್ಡಿಯವರ ಕಾಲದಲ್ಲಿ ನಮ್ಮ ಕರ್ನಾಟಕಕ್ಕೆ ಕೇಂದ್ರ ಕೈಗಾರಿಕೆಗಳು ಬಂದವು. HMT, ITI, ಇವೆಲ್ಲಾ ಕೆ.ಸಿ.ರೆಡ್ಡಿಯವರ ಕಾಲದಲ್ಲಿ ಬಂದವು. ಅವರ ಒಂದು ಒಳ್ಳೆಯ ದೂರದೃಷ್ಟಿಯಿಂದ ಬಂದಂಥವುಗಳು. ತಮಗೆ ನಾನು ಹೇಳುವುದು ಏನೆಂದರೆ, ಇವೆಲ್ಲಕ್ಕೂ ತಿಲಾಂಜಲಿ ಹಾಕುವುದು ಬೇಡ. ಮೈಸೂರು ಲ್ಯಾಂಪ್ಸ್ ಕಂಪನಿಯನ್ನು ನನಗೆ ಕೊಡಿ ನಾನು ಲಾಭದಲ್ಲಿ ನಡೆಸುತ್ತೇನೆಂದು ವಿಜಯಕುಮಾರ್ ಎನ್ನುವಂಥ IAS ಅಧಿಕಾರಿ ನಮ್ಮ ಸರ್ಕಾರಕ್ಕೆ ಸವಾಲು ಹಾಕಿದ್ದಾರೆ. ನೀವು ಆ ಕಂಪನಿಗೆ ಅವರನ್ನು ನಿರ್ದೇಶಕರನ್ನಾಗಿ ಮಾಡಿ ಕಂಪನಿಯ ಬಾಗಿಲು ತೆಗೆಯದೇ ಮತ್ತು ಅವರಿಗೆ ಅಲ್ಲಿ ಜಾಗ ಕೊಡದೇ ಇರುವುದರಿಂದ ಮೈಸೂರು ಲ್ಯಾಂಪ್ಸ್ ಕಂಪನಿಯ ಹೊರಗಡೆ ಕುಳಿತು ಅವರು ಸಭೆ ಮಾಡಿದ್ದಾರೆ. ಇವತ್ತಿನ ದಿವಸ ಇಡೀ ಕರ್ನಾಟಕದಲ್ಲಿರುವ ಬಹುತೇಕ IAS ಅಧಿಕಾರಿಗಳು ಒಂದಾಗಿದ್ದರೆ. ವಿಜಯ್‌ಕುಮಾರ್‌ರವರು ಮಾತ್ರ ಒಬ್ಬಂಟಿಗರಾಗಿದ್ದಾರೆ. ನಮ್ಮಲ್ಲಿ ದುರಹಂಕಾರಿ ಮತ್ತು ಹಂದಿಗಳಿಗಿಂತಲೂ ಕಡಿಮೆ ಇರತಕ್ಕಂಥ ಕೆಲವು ಅಧಿಕಾರಿಗಳು ನಮ್ಮಲ್ಲಿದ್ದಾರೆ. ಅವರ ಹೆಸರುಗಳನ್ನು ಇಲ್ಲಿ ಹೇಳತಕ್ಕಂಥದು ಒಳ್ಳೆಯದಲ್ಲ. ಹಂದಿಗಳು ವಿಷ್ಣು ಅವತಾರವೆಂದು ಮಾನ್ಯ ಮಾಧುಸ್ವಾಮಿಯವರು ಹೇಳುತ್ತಿದ್ದಾರೆ. ಆದ್ದರಿಂದ ಅಂಥ ಅಧಿಕಾರಿಗಳನ್ನು ಪ್ರಾಣಿಗಳಿಗೆ ಹೋಲಿಸುತ್ತೇನೆ. ನಮ್ಮ ಶಾಸಕರನ್ನು ಕಂಡರೆ ಗುರ್ ಎನ್ನುತ್ತಾರೆ ಶಾಸಕರು ಹೋದರೆ ಅವರ ಜೊತೆ ಮಾತನಾಡುವುದಿಲ್ಲ ಮತ್ತು ಗೌರವ ಕೊಡುವುದಿಲ್ಲ. ಶಾಸಕರು ಮಾಹಿತಿಗಳನ್ನು ಕೇಳಿದರೆ ಅವರ ಜೊತೆ ಮಾತನಾಡುವುದಿಲ್ಲ. ಕೆಲವು ಈ ರೀತಿಯಾದಂಥ ಅಧಿಕಾರಿಗಳು ಇದ್ದಾರೆ.

ಅವರ ಬಗ್ಗೆ ಮಾತನಾಡಿ ಅವರ ಹೆಸರು ಹೇಳತಕ್ಕಂಥದು ನನಗೆ ಸರಿಯಾದ ಕ್ರಮವಲ್ಲ. ಇತ್ತೀಚಿನ ದಿನದ Economic Times ಪತ್ರಿಕೆಯಲ್ಲಿ ಒಂದು ವಿಷಯ ಬಂದಿತು. ಅದೇನೆಂದರೆ, HUL ಪ್ರಾಪರ್ಟಿಯಲ್ಲಿ ಸುಮಾರು 26 ಎಕರೆ ಜಮೀನನ್ನು ರಿಲಿಯನ್ಸ್ ಕಂಪನಿಯ ನಿತೀಶ್ ಗ್ರೂಪ್‌ನವರು 400 ಕೋಟಿ ರೂಪಾಯಿಗೆ ಕೊಂಡು ಕೊಳ್ಳುತ್ತಿದ್ದಾರೆಂದು ಬಂದಿತು. ಆದ್ದರಿಂದ, ಬೆಂಗಳೂರು ಯಾವ ಹಂತಕ್ಕೆ ಹೋಗುತ್ತಿದೆ ಎನ್ನತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕು. APMC ಕಾಯಿದೆಯ ಬಗ್ಗೆ ಒಂದು ಬಿಲ್‌ನ್ನು ಇಲ್ಲಿ ಪಾಸ್ ಮಾಡಿದ್ದೇವೆ. ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ APMC ಬಂದ್ ಆಗಿದೆ. ರೈತರ ವಿರೋಧಿ ಮತ್ತು ರೈತರ ಮರಣಶಾಸನ ಮತ್ತು ರೈತರನ್ನು ಹೊರಕ್ಕೆ ಹಾಕುವಂಥ ಶಾಸನವನ್ನು ತಂದಿದ್ದಾರೆಂದು ಬಂದ್ ಮಾಡುತ್ತಿದ್ದಾರೆ. ಇವತ್ತಿನಂದ ನನ್ನ ಸಂಪೂರ್ಣ ಬೆಂಬಲ ಅವರಿಗೆ ಇದೆ. ಮತ್ತೆ ಇಡೀ ರಾಜ್ಯದ ರೈತರ ಬೆಂಬಲ ಅವರಿಗೆ ಇದೆ. APMC ಕಾಯಿದೆಯನ್ನು ತಂದಿರತಕ್ಕಂಥದು ಸರಿಯಿಲ್ಲವೆಂದು ಒಂದು ದೊಡ್ಡ ಸಮರವೇ ಆಗಿದೆ. 26 ಎಕರೆ ಜಮೀನನ್ನು 400 ಕೋಟಿ ರೂಪಾಯಿಯವರೆಗೆ ತೆಗೆದುಕೊಳ್ಳುತ್ತಾರೆಂದರೆ ಇಲ್ಲಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ತಾವು ನೋಡಬೇಕಾಗಿದೆ. ಒಂದು ಕಡೆ ಬಿಡಿಎರವರು ಯದ್ವಾತದ್ವಾ ಜಮೀನುಗಳನ್ನು ಹರಾಜು ಹಾಕುತ್ತಿದೆ. ಮತ್ತೊಂದು ಕಡೆ ವಿಶೇಷ ಆರ್ಥಿಕ ವಲಯ ಇನ್ನೊಂದು ಕಡೆ IT BT, ಇದು ಕನ್ನಡಿಗರ ಪಾಲಿಗೆ ಇವರು ಯಮರಾಗಿದ್ದಾರೆ. ಆದ್ದರಿಂದ, ಅತ್ಯಂತ ಕಳಕಳಿಯಿಂದ ಮಾನ್ಯ ಕೈಗಾರಿಕಾ ಸಚಿವರಲ್ಲಿ ಕೇಳುವುದೇನೆಂದರೆ, ನಾನು ಈಗಾಗಲೇ ಪ್ರತಿಯೊಂದನ್ನು ಹೇಳಿದ್ದೇನೆ. ನಂದಗುಡಿಯಲ್ಲಿ ಮಾಡುತ್ತಿರುವ ವಿಶೇಷ ಆರ್ಥಿಕ ವಲಯ ಮಾಡತಕ್ಕಂಥದ್ದನ್ನು ನೀವು ಕೈಬಿಡತಕ್ಕಂಥದು ಒಳ್ಳೆಯದು, ಒಂದು ವೇಳೆ ಕೈಬಿಡದಿದ್ದರೆ ಇದರಿಂದ ಬಹಳ ದೊಡ್ಡ ಅಪಾಯ ಕಾದಿದೆ. ಈಗ ಇರತಕ್ಕಂಥ ವಿಚಾರದಲ್ಲಿ ನೀವು ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಕೊಡುವುದಕ್ಕೆ ಆಗುವುದಿಲ್ಲ. ಕುಡಿಯುವ ನೀರನ್ನು ಎಷ್ಟು ಕೊಡುವುದಕ್ಕೆ ಸಾಧ್ಯ ಎನ್ನತಕ್ಕಂಥದರ ಬಗ್ಗೆ ತಾವು ಚಿಂತನೆ ಮಾಡಿದ್ದೀರಾ? ದೇವನಹಳ್ಳಿಗೆ ಮತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹಾಗು ಈ ಕಡೆ ವೈಟ್‌ಫಿಲ್ಡ್‌ಗೆ ಎಷ್ಟು ನೀರು ಕೊಡುತ್ತೀರಿ. ಬೆಂಗಳೂರಿನ ಸುತ್ತಮುತ್ತ ಸುಮಾರು 1.5 ರಿಂದ 2 ಕೋಟಿ ಜನರಾಗುತ್ತಾರೆ. ಆದ್ದರಿಂದ, ಇವರಿಗೆಲ್ಲಾ ನೀರನ್ನು ಎಲ್ಲಿಂದ ತಂದು ಕೊಡುತ್ತೀರಿ? ಎಲ್ಲೂ ಸಹ ನೀರು ಕೊಡುವುದಕ್ಕೆ ನಿಮಗೆ ಸಾಧ್ಯವಿಲ್ಲ. ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ನಾನು ನಿಮಗೆ ಹೇಳುವುದೇನೆಂದರೆ, ವಿಶೇಷ ಆರ್ಥಿಕ ವಲಯ ತರುವುದಾದರೆ

ಹಿಂದುಳಿದ ಮತ್ತು ಗಡಿ ಪ್ರದೇಶವಾದ ನಮ್ಮ ಚಾಮರಾಜನಗರಕ್ಕೆ ಒಂದು ವಿಶೇಷ ಆರ್ಥಿಕ ವಲಯವನ್ನು ಕೊಡಿ, ಇದು ನಮ್ಮ ಜನಕ್ಕೆ ಬೇಕಾಗಿದೆ. ಶಿರಾ ಮತ್ತು ಮಧುಗಿರಿ ಹಾಗು ಎಲ್ಲಾ ಕಡೆ ಕೊಡಿ ನನ್ನದೇನೂ ಅಭ್ಯಂತರವಿಲ್ಲ. ಆದರೆ, ಬೆಂಗಳೂರನ್ನು ಬೆಳೆಸತಕ್ಕಂಥದನ್ನು ನಾವು ನಿಲ್ಲಿಸಬೇಕು. ಇದೇ ರೀತಿಯಲ್ಲಿ ಬೆಂಗಳೂರು ಬೆಳೆಯುತ್ತಾ ಹೋದರೆ ನಾವು ಇನ್ನು ಮುಂದೆ ಮೂಲಂಗಿ, ಈರುಳ್ಳಿ, ಗೆಣಸು, ಸೊಪ್ಪು ತಿನ್ನಬೇಕಾಗಿಲ್ಲ. ಏನು ತಿನ್ನಬೇಕೆಂದರೆ ಸೋಪು, ಕಬ್ಬಿಣ ತಿಂದು ಸೀಮೆಣ್ಣೆಯನ್ನು ಕುಡಿಯಬೇಕಷ್ಟೆ. ನೀರು ಕುಡಿಯುವುದಕ್ಕೆ ನಮಗೆ ನೀರು ಸಿಗುವುದಿಲ್ಲ. ಇವತ್ತಿನ ಎಳ್ಳೆಣ್ಣೆ, ಹೊಂಗೆಯೆಣ್ಣೆ, ಅರಳೆಣ್ಣೆ ಇಲ್ಲ. ಶಾಂಪು ಮತ್ತು ಪ್ಲಾಸ್ಟಿಕ್ ತಿನ್ನಬೇಕಷ್ಟೆ. ಇವತ್ತಿನ ದಿವಸ ಎಮ್ಮೆ, ಹಸುಗಳಿಗೆ ಆಹಾರ ಇಲ್ಲದೇ ಪ್ಲಾಸ್ಟಿಕ್ ತಿನ್ನುತ್ತಿವೆ. ಇನ್ನು ಮುಂದೆ ನಾವು ಕೂಡ ಪ್ಲಾಸ್ಟಿಕ್, ಕಬ್ಬಿಣ, ಸೋಪ್ ತಿನ್ನಬೇಕು, ಬಾಯಾರಿಕೆಗೆ ಸೀಮೆಯೆಣ್ಣೆಯನ್ನು ಕುಡಿಯಬೇಕು, ಇದೊಂದೆ ನಮಗೆ ಉಳಿದಿರುವುದು. ಆದ್ದರಿಂದ, ಇವತ್ತಿನ ದಿವಸ ಇತಿಹಾಸ ನಿರ್ಮಾಣವಾಗಬೇಕಾದರೆ, ಅಲ್ಲಿ ವಿಶೇಷ ಆರ್ಥಿಕ ವಲಯವನ್ನು ನರ್ಮಾಣ ಮಾಡತಕ್ಕಂಥದ್ದನ್ನು ಕೈಬಿಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಇನ್ನೂ ಅನೇಕ ಜನ ಸದಸ್ಯರು ಮಾತನಾಡುವುದಕ್ಕೆ ಬಯಕೆ ವ್ಯಕ್ತಮಾಡಿದ್ದಾರೆ. ಇಬ್ಬರು ಸದಸ್ಯರು ಮಾತ್ರ ಇದರ ಬಗ್ಗೆ ಮಾತನಾಡಬೇಕೆಂದು ನಿನ್ನೆ ದಿವಸ ತೀರ್ಮಾನವಾಗಿದೆ. ಇವತ್ತು ಮಾನ್ಯ ಬಸವರಾಜ್ ರಾಯರೆಡ್ಡಿ ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಬೇಕೆಂದು ತೀರ್ಮಾನವಾಗಿತ್ತು.

ಶ್ರೀ ವಿ.ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಇದರಿಂದ ಬೆಂಗಳೂರು ನಾಗರೀಕರಿಗೆ ತೊಂದರೆಯಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಮಾತನಾಡುವುದಕ್ಕೆ ನನಗೂ ಕೂಡ 5 ನಿಮಿಷ ಅವಕಾಶವನ್ನು ದಯಮಾಡಿ ಕೊಡಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ತೀರ್ಮಾನ ಯಾರು ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಆದರೆ, ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು: ನಿನ್ನೆ ದಿವಸ ಉಪಾಧ್ಯಕ್ಷರು ಪೀಠದಲ್ಲಿದ್ದಾಗ ನಿಮ್ಮ ಎದುರಿನಲ್ಲಿಯೇ ತೀರ್ಮಾನ ಮಾಡಿದ್ದಾರೆ. ಮತ್ತೆ ನನ್ನ ಛೇಂಬರ್‌ನಲ್ಲಿಯೂ

ಕೂಡ ಹೇಳಿದ್ದಾರೆ. ಈಗ ಒಂದೇ ಸಾರಿ ರಿವರ್ಸ್ ಹೊಡೆದರೆ ಹೇಗೆ ಮಾನ್ಯ ಸಿದ್ದರಾಮಣ್ಣನವರೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾವು ಹೇಳತಕ್ಕಂಥದನ್ನು ತಾವು ಕೇಳಿ. ನಿಮ್ಮ ಪೀಠದಲ್ಲಿ ಮಾನ್ಯ ಉಪಾಧ್ಯಕ್ಷರಿದ್ದರು, ನಾಳೆ ದಿವಸ ಮೂರ್ನಾಲ್ಕು ಜನರು ಮಾತನಾಡಬಹುದೆಂದು ಹೇಳಿದ್ದೇವಷ್ಟೆ. ಇಷ್ಟು ಬಿಟ್ಟರೆ ಬೇರೇನೂ ಒಪ್ಪಂದವಾಗಿಲ್ಲ.

ಅಧ್ಯಕ್ಷರು: ಇಬ್ಬರು ಮಾತನಾಡುತ್ತಾರೆಂದು ತೀರ್ಮಾನವಾದ ಮೇಲೆ ಮತ್ತೆ ಈ ರೀತಿ ಏಕೆ?

ಶ್ರೀ ಸಿದ್ದರಾಮಯ್ಯ: ಇಬ್ಬರು ಮಾತ್ರ ಮಾತನಾಡಬೇಕೆಂದು ತೀರ್ಮಾನವಾಗಿಲ್ಲ.

ಅಧ್ಯಕ್ಷರು: ಇದರ ಮೇಲಿನ ಚರ್ಚೆ ಮುಗಿಯಬೇಕೆಂದಾಗ, ಬೆಳಿಗ್ಗೆ ಇಬ್ಬರು ಮಾತನಾಡುತ್ತಾರೆ ಎಂದು ಹೇಳಿದ್ದೀರಿ. ಆದ್ದರಿಂದ, ಈಗ ಸಮಯವಿಲ್ಲ, ಇನ್ನೂ ಬಹಳಷ್ಟು ಬಿಲ್‌ಗಳಿವೆ. ಇನ್ನು ಒಂದು ಬಿಲ್ ಕೂಡ ಪಾಸ್ ಆಗಿಲ್ಲ,

ಶ್ರೀ ಸಿದ್ದರಾಮಯ್ಯ: ನೀವು ಇದನ್ನು ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದರಿಂದ ಇದರ ಬಗ್ಗೆ ಎಲ್ಲರೂ ಮಾತನಾಡುವುದಕ್ಕೆ ಬಯಸಿದ್ದಾರೆ.

(ಗೊಂದಲ)

ಅಧ್ಯಕ್ಷರು: ನನ್ನ ಮಾತನ್ನು ಕೇಳಿ. ಈಗಾಗಲೇ ಇದರ ಬಗ್ಗೆ ಬಹಳಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ಆದ್ದರಿಂದ ನಿನ್ನೆ ದಿವಸ ಆ ರೀತಿಯಾಗಿ ತೀರ್ಮಾನವಾಗಿದೆ. ದಯವಿಟ್ಟು ಸಹಕರಿಸಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಣ್ಣನವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಹಾಗೂ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮಾತ್ರ ಮಾತನಾಡುತ್ತಾರೆ.

ಅಧ್ಯಕ್ಷರು: ನಾನು ಹೇಳುವುದನ್ನು ದಯವಿಟ್ಟು ಕೇಳಿ. ಅರ್ಧಗಂಟೆ ಮೇಲಿನ ಚರ್ಚೆ ಇನ್ನೂ ಮೂರ್ನಾಲ್ಕು ಇವೆ. ಈ ವಿಷಯ ಎಷ್ಟು ಪ್ರಾಮುಖ್ಯವೋ ಅದೇ ರೀತಿಯಾಗಿ ಬಾಕಿ ಉಳಿದಿರತಕ್ಕಂಥ ವಿಷಯಗಳೂ ಅಷ್ಟೆ ಪ್ರಾಮುಖ್ಯವಾಗಿವೆ.

ಮುಂದೆ ಇರತಕ್ಕಂಥವರೆಲ್ಲರೂ ಮಾತನಾಡಿ 5 ಪ್ರಾಮುಖ್ಯವಾದಂಥ ವಿಷಯಗಳು ಲ್ಯಾಪ್ಸೆಸ್ ಆದರೆ ಅದು ಬುದ್ಧಿವಂತಿಕೆ ಲಕ್ಷಣವೇ?

(ಗೊಂದಲ)

ಶ್ರೀ ವಿ. ಸೋಮಣ್ಣ:- ಮಾನ್ಯ ಅಧ್ಯಕ್ಷರೆ, ನಾವು ಯಾವಾಗ ಮಾತನಾಡಿದ್ದೇವೆ ಹೇಳಿ.

ಅಧ್ಯಕ್ಷರು : ನೀವು ಮಾತನಾಡದೇ ಇರಬಹುದು.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಇದು ಮಹತ್ವವಾದ ವಿಚಾರವಾಗಿದೆ ಆದ್ದರಿಂದ, ಸೋಮಣ್ಣ, ಜಯಪ್ರಕಾಶ್ ಹೆಗ್ಡೆ ಮತ್ತು ಶ್ರೀರಾಮರೆಡ್ಡಿಯವರಿಗೆ ಅವಕಾಶ ಕೊಡಿ.

ಅಧ್ಯಕ್ಷರು : 10 ನಿಮಿಷದಲ್ಲಿ ದಯಮಾಡಿ ಮಾತನಾಡಿ ಮುಗಿಸಬೇಕು.

ಶ್ರೀ ಹೆಚ್.ಡಿ. ಬಸವರಾಜ್: ಮಾನ್ಯ ಅಧ್ಯಕ್ಷರೆ, ಒಂದು ಮಾಹಿತಿಯನ್ನು ನಾನು ಕೊಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಬಜೆಟ್ ಬಗ್ಗೆ ಮಾತನಾಡುವುದಕ್ಕೆ 27 ಗಂಟೆ ಅವಧಿಯನ್ನು ಅವರಿಗೆ ನೀವು ಕೊಟ್ಟಿದೀರಿ. ಈ ಭಾಗಕ್ಕೆ ನೀವು ಕೇವಲ ಒಂದು ಗಂಟೆ ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ, ಎಲ್ಲಾದರೂ ಒಂದು ಕಡೆ ತಾವು ನ್ಯಾಯವನ್ನು ಒದಗಿಸಬೇಕಲ್ಲವೇ? ಈ ಸದನದಲ್ಲಿ ಯಾವ್ಯಾವ ಪಕ್ಷಕ್ಕೆ ಎಷ್ಟು ಗಂಟೆಯವರಿಗೆ ಮಾತನಾಡುವುದಕ್ಕೆ ಸಮಯವನ್ನು ಒದಗಿಸಿ ಕೊಟ್ಟಿದ್ದೀರೆಂಬ ಉಲ್ಲೇಖ ಇದೆ. 27 ಗಂಟೆ ಪ್ರತಿಪಕ್ಷದವರಿಗೆ ಮತ್ತು ಮಿತ್ರ ಪಕ್ಷದವರಿಗೆ 7 ಗಂಟೆ ಮತ್ತು ಈ ಪಕ್ಷದವರಿಗೆ 1 ಗಂಟೆ ಅವಕಾಶ ಕೊಟ್ಟಿದ್ದೀರಿ ಇದು ನ್ಯಾಯವೇ? ಈಗಲಾದರು ನಾವು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕಲ್ಲವೇ?

ಅಧ್ಯಕ್ಷರು: ದಯಮಾಡಿ ಕೇಳಿ, ಅವರು 10 ನಿಮಿಷ ಮಾತನಾಡುತ್ತಾರೆ.

ಶ್ರೀ ಹೆಚ್.ಡಿ. ಬಸವರಾಜ್: ಸದನಕ್ಕೆ ಹೋಗಿ ಅಲ್ಲಿ ಮಾತನಾಡುವುದಿಲ್ಲವೇ ಎಂದು ಕ್ಷೇತ್ರದ ಜನ ನಮ್ಮನ್ನು ಕೇಳುತ್ತಾರೆ.

ಅಧ್ಯಕ್ಷರು: ದಯಮಾಡಿ ನಾನು ಹೇಳುವುದನ್ನು ಕೇಳಿ. ತಾವು ಹೇಳತಕ್ಕಂಥದು ನನಗೆ ಅರ್ಥವಾಗುತ್ತದೆ. ಇದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಅನೇಕ ಜನ ಸದಸ್ಯರು ಬಯಸುತ್ತಿದ್ದಾರೆ, ಅವಕಾಶ ಕೊಡುತ್ತೇನೆ. ಆದರೆ, ಇವತ್ತು ರಾತ್ರಿ 9 ಅಥವಾ 10 ಗಂಟೆಯಾಗಲಿ ನಾನು ಸದನ ನಡೆಸುವುದಕ್ಕೆ

ತಯಾರಿದ್ದೇನೆ. ನನ್ನ ಇಚ್ಛೆ ಏನೆಂದರೆ, ಅರ್ಧಗಂಟೆ ಮೇಲಿನ ಚರ್ಚೆಗಳು ಮೂರ್ನಾಲ್ಕು ಇವೆ. ಅವು ಕೂಡ ಮುಗಿಯಬೇಕು ಮತ್ತೆ 69ರ ಮೇಲಿನ ಚರ್ಚೆ ಕೂಡ ಮುಗಿಯಬೇಕು. ಮತ್ತೆ ಬಹಳ ಮುಖ್ಯವಾಗಿರತಕ್ಕಂಥ ಗಮನಸೆಳೆಯುವ ಸೂಚನೆ ಕೂಡ ಮುಗಿಯಬೇಕು. ಆದ್ದರಿಂದ, ಇವತ್ತು ರಾತ್ರಿ 10 ಗಂಟೆಯವರೆಗೆ ನಾನು ಸದನವನ್ನು ನಡೆಸುತ್ತೇನೆ. ತಾವು 10 ನಿಮಿಷದೊಳಗೆ ಮಾತನಾಡಿ ಮುಗಿಸಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಆರ್ಥಿಕ ವಲಯದ ಬಗ್ಗೆ ಬಹಳಷ್ಟು ಚರ್ಚೆಗಳು ಆಗುತ್ತಿದೆ. Special Economic Zone ಬಗ್ಗೆ ಬಹಳಷ್ಟು ಚರ್ಚೆಗಳು ನಡೆದಿವೆ. ಇಲ್ಲಿ ಹಲವಾರು ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಈ ಕಾನೂನು ಮೂಲತಃ ತಂದಿರುವಂತಹದ್ದು ಕೇಂದ್ರ ಸರ್ಕಾರ 2000 ಇಸವಿಯಲ್ಲಿ ಎನ್‌ಡಿಎ ಸರ್ಕಾರ ಇದ್ದಾಗ Special Economic Zone Act ನ್ನು ಅವರು draft ಮಾಡಿದರು. 2005ನೇ ಇಸವಿಯಲ್ಲಿ ಯುಪಿಎ ಸರ್ಕಾರ ಈ Act ನ್ನು ಪಾಸ್ ಮಾಡಿದೆ. ಈ Act ನಲ್ಲಿ ಮೂಲತಃ ಸಂಪೂರ್ಣವಾದಂತಹ ಅಧಿಕಾರ ಕೇಂದ್ರಸರ್ಕಾರಕ್ಕೆ ಇದೆ. ಇಲ್ಲಿ ರಾಜ್ಯ ಸರ್ಕಾರದ ಪಾತ್ರ ಇದರಲ್ಲಿ ತುಂಬಾ ಏನು ಇಲ್ಲ. ಇದು ಒಂದನೆಯ ಅಂಶ.ಎರಡನೆಯ ಅಂಶವೆಂದರೆ, ನನ್ನ ಸ್ಪಷ್ಟವಾದ ಅಭಿಪ್ರಾಯವೆಂದರೆ ಕೇಂದ್ರ ಸರ್ಕಾರ 2005ನೇ ಇಸವಿಯಲ್ಲಿ Special Economic Zone Act ಏನು ಮಾಡಿದೆ, ಆ Act ಸರಿಯಿಲ್ಲ ಅದು ಬದಲಾವಣೆ ಆಗುವವರೆಗೂ ಭಾರತದೇಶದಲ್ಲಿ ಎಲ್ಲಿಯೂ ಕೂಡ ಇದನ್ನು ಜಾರಿ ಮಾಡಬಾರದು ಎಂದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ, 1ನೇಯ ಕಾರಣ, creating a Government within a Government according to the SEZ Act. ಸರ್ಕಾರದ ಒಳಗಡೆ ಇನ್ನೊಂದು ಸರ್ಕಾರವನ್ನು ರಚನೆ ಮಾಡುವುದಕ್ಕೆ ನಾವು ಅಧಿಕಾರವನ್ನು ಕೊಡುತ್ತಿದ್ದೇವೆ. Special Development Officer ಎಂದು ಒಂದು Post create ಆಗುತ್ತದೆ. ಆ Development Officer Postಗೆ ಸಂಪೂರ್ಣವಾದಂತಹ ಅಧಿಕಾರವನ್ನು ಕೊಟ್ಟುಬಿಟ್ಟಿದ್ದಾರೆ, by violating Article 19 of the Indian Constitution. ಭಾರತ ಸಂವಿಧಾನದಲ್ಲಿ ಪ್ರತಿ ಮನುಷ್ಯನೊಬ್ಬನಗೆ ಏನು ಮೂಲಭೂತವಾದ ಹಕ್ಕುಗಳನ್ನು 19 ರಲ್ಲಿ ಕೊಟ್ಟಿದ್ದಾರೆ. ಆ Act ಪ್ರಕಾರ ಅದು ಕೂಡ violate ಆಗುತ್ತದೆ. Special Development Officerನ ಅನುಮತಿಯಿಲ್ಲದೇ ಆ Economic Zone ನಲ್ಲಿ ಯಾವ activities ಗಳನ್ನು ಮಾಡಬಾರದು ಎಂದು ಹೇಳುವಂತಹ

ಅಧಿಕಾರವನ್ನು ಆ Act ಪ್ರಕಾರ Special Development Officer ಗೆ ಕೊಟ್ಟಿದ್ದಾರೆ. Number 2- According to Section 22 of the SEZ Act Labour Lawವನ್ನು complete ಆಗಿ violation ಮಾಡಿದ್ದಾರೆ. Number 3- most important ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಇದು ಗೊತ್ತಿರಬಹುದು. ಕಮಲಾನಾಥ್‌ರವರು ತಮಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದು ಏನೆಂದರೆ More than 10% of agriculture land which is multi crop land ಯಾವುದು ಇದೆ, ಅದನ್ನು 10%ಗಿಂತ ಹೆಚ್ಚಿಗೆ acquire ಮಾಡಬಾರದು ಎಂದು ಹೇಳಿ ಒಂದು ಪತ್ರವನ್ನು ಬರೆದಿದ್ದಾರೆ. Approach to the 11th Finance Commission ಗೆ ಒಂದು approach paperನ್ನು ಕೊಡುವಂತಹ ಸಂದರ್ಭದಲ್ಲಿ ಅವರು ಒಂದು observe ಮಾಡಿದ್ದಾರೆ. ಅದು ಏನೆಂದರೆ, 11th Planning approach paper produce ಮಾಡುವಾಗ ಒಂದನ್ನು ಅವರು observe ಮಾಡಿದ್ದಾರೆ. Some proposed SEZ involves huge tracks of land developers. This is not told by any body else. This is an approach paper given by 11th Finance Commission. ಅವರೇ ಸ್ಪಷ್ಟವಾಗಿ ಹೇಳಿದ್ದಾರೆ. ಈ SEZ ಹೆಸರಿನಲ್ಲಿ Land Developersನ್ನು creat ಮಾಡುವುದಕ್ಕೆ ಹೊರಟಿದ್ದಿರಿ ಎನ್ನುವಂತಹ ವಿಚಾರವನ್ನು ಅವರು ಸ್ಪಷ್ಟ ಮಾಡಿದ್ದಾರೆ. ಇದಕ್ಕಿಂತ ಬಹಳ ಪ್ರಮುಖವಾದಂತಹ ಅಂಶವೆಂದರೆ, ಈ SEZ Act ಪ್ರಕಾರ Land use ಬಗ್ಗೆ ನೀವು land acquire ಮಾಡಬೇಕೆಂದು ಹೇಳುತ್ತಿದ್ದೀರಿ, ಆ acquire ಮಾಡಿರುವಂತಹ ಲ್ಯಾಂಡ್‌ನ್ನು ಹೇಗೆ use ಮಾಡಬೇಕೆನ್ನುವುದರ ಬಗ್ಗೆ clarity ಇಲ್ಲ, ಸ್ಪಷ್ಟತೆ ಇಲ್ಲವೆಂದು ಹೇಳಿದ್ದಾರೆ. ಅದರಿಂದಾಗಿ ಏನಾಗುತ್ತದೆಂದರೆ, ಈ Real Estate ದಂಧೆ ಪ್ರಾರಂಭವಾಗುವುದಕ್ಕೆ ಅವಕಾಶವಾಗುತ್ತದೆ. What is meant by land use? Land use ಅಂದರೆ ಏನು? Acquire ಮಾಡಿರುವಂತಹ ಭೂಮಿಯನ್ನು ಯಾವ ರೀತಿಯಾಗಿ ಉಪಯೋಗ ಮಾಡಬೇಕು ಎಂದು ಹೇಳುವಂತಹದ್ದು. ಅದನ್ನು ಯಾವ ರೀತಿಯಾಗಿ ಉಪಯೋಗ ಮಾಡಬೇಕೆಂದರೆ, ಯಾವ purposeಗೆ ನೀವು land ನ್ನು acquire ಮಾಡುತ್ತಿದ್ದಿರೋ, ಆ purposeಗೆ ಕನಿಷ್ಟ 75% ಭೂಮಿಯನ್ನು ಬಿಡಬೇಕಾಗುತ್ತದೆ. ಇನ್ನು 25% land ನ್ನು ನೀವು infrastructure developmentಗೆ ಬಿಡಬೇಕು. ಆ ರೀತಿಯಾದಂತಹ ಯಾವುದೇ clarity ಇಲ್ಲದೇ land use ನ್ನು ಹೇಗೆ ಮಾಡಬೇಕು ಎಂಬ clarity ನ್ನು SEZ Act ನಲ್ಲಿ ಕೊಡದೇ ಅವರು ಈ Act ನ್ನು ಮಾಡುವುದರಿಂದ it is giving

room for huge real estate business. ಆದ್ದರಿಂದ ಈ Act ನಲ್ಲಿ ಇರುವಂತಹ ಲೋಪವನ್ನು ಹಲವಾರು ರಾಜ್ಯ ಸರ್ಕಾರಗಳು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಆದ್ದರಿಂದ ಈ SEZ Act ನ್ನು as it is ಇದನ್ನು ಜಾರಿ ಮಾಡಬಾರದು ಎಂದು ಹೇಳುವಂತಹದ್ದು ನನ್ನ ಪ್ರಮುಖವಾದಂತಹ ಭಾವನೆ. ಇದು ಇರುವಂತಹ ಪರಿಸ್ಥಿತಿಯಾಗಿದೆ. Industries develop ಮಾಡುವಂತಹ ಸಂದರ್ಭದಲ್ಲಿ ಇವರು ಏನು ಹೇಳುತ್ತಿದ್ದಾರೆಂದರೆ SEZ Act ನಲ್ಲಿ 5ಲಕ್ಷ ಜನರಿಗೆ ನಾವು employmentನ್ನು ಕೊಡುತ್ತೇವೆಂದು ಹೇಳುತ್ತಿದಾರೆ. ಆದರೆ ನೀವು agriculture land ನ್ನು acquire ಮಾಡುವುದರಿಂದ ಎಷ್ಟು ಲಕ್ಷ ಜನರನ್ನು ನೀವು ಹೊರಗೆ ಹಾಕುತ್ತಿದ್ದೀರೆಂಬುದನ್ನು ರೈತರನ್ನು ಹಾಗೂ ಕೃಷಿ ಕಾರ್ಮಿಕರನ್ನು ಸೇರಿಸಿ ಇವರು ಗಮನಕ್ಕೆ ತೆಗೆದುಕೊಂಡಿಲ್ಲ. ಉದಾಹರಣೆಗೆ ಹೇಳುವುದಾದರೆ ನಂದಗುಡಿಯಲ್ಲಿ ತಾವು ಅದನ್ನು propose ಮಾಡಿದ್ದೀರಿ, 16 ಸಾವಿರ ಎಕರೆಯನ್ನು ನೀವು acquire ಮಾಡುವುದರಿಂದ ಎಷ್ಟು ಲಕ್ಷ ಜನ ರೈತರು ಭೂಮಿಯಿಂದ ಹೊರಗೆ ಹಾಕುತ್ತಿದ್ದೀರಿ, ಎಷ್ಟು ಲಕ್ಷ ಜನರು ಕೃಷಿ ಕಾರ್ಮಿಕರು ಕೆಲಸವನ್ನು ಕಳೆದುಕೊಳ್ಳುತ್ತಾರೆ, ಅದರ ಬಗ್ಗೆ ಇವರು ಲೆಕ್ಕವನ್ನು ಹೇಳುವುದಿಲ್ಲ. ಕೆಲವರು 5ಲಕ್ಷ ಜನರಿಗೆ employment opportunity create ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದಕ್ಕೆ ಯಾವುದೇ ಆಧಾರವಿಲ್ಲ. ಅದರ ಜೊತೆಗೆ ಈ Act ನ್ನು ಜಾರಿ ಮಾಡುವುದರಿಂದ ಅತಿಹೆಚ್ಚಿನ huge loss of revenue ಆಗುತ್ತದೆ. ಇದು national averageನಲ್ಲಿ ನಾನು ಹೇಳತಕ್ಕಂಥದ್ದನ್ನು ತಾವು state ಗೆ convert ಮಾಡಬಹುದು. Tax revenue ಯಾವುದು? tax revenue ಎಷ್ಟು ಲಾಸ್ ಆಗುತ್ತದೆಂದರೆ, 1,26,261 ಕೋಟಿ ರೂಪಾಯಿಗಳು tax loss ಆಗುತ್ತದೆ. 2006–07, 2009–10ಕ್ಕೆ the amount of tax incentive provided under the SEZ Act out of this loss of direct tax revenue was estimated to be Rs. 53,740 crores. 53,740 ಕೋಟಿ ರೂಪಾಯಿಗಳು revenue loss ಆಗುತ್ತದೆ. ನಮ್ಮ ದೇಶಕ್ಕೆ ಲಾಸ್ ಆಗುತ್ತದೆ. ಅದರಲ್ಲಿ ನಮ್ಮ stateಗೆ ಎಷ್ಟು loss ಆಗುತ್ತದೆ ಎಂದು ನಾವು ಲೆಕ್ಕ ಹಾಕಬೇಕಾಗುತ್ತದೆ. ಅದೇ ರೀತಿಯಾಗಿ loss of indirect tax revenue. .ಒಟ್ಟು ಈ SEZ ನಿಂದ 48,881 ಕೋಟಿ ರೂಪಾಯಿಗಳು indirect tax revenue loss ಆಗುತ್ತದೆ. ಈ ರೀತಿಯಾಗಿ ಲಾಸ್ ಆಗುವಂತಹ ಇಂತಹ taxನ್ನು ಯಾವ ರೀತಿಯಾಗಿ ನಾವು ಮತ್ತೆ ಪಡೆಯಬೇಕು, ಎಂಬುದರ ಬಗ್ಗೆ SEZ Act ನಲ್ಲಿ clarity ಇಲ್ಲ. ನನ್ನ ಹತ್ತಿರದ ಕೇಂದ್ರ ಸರ್ಕಾರದ draft Act ಇದೆ. ಇದನ್ನು ತಾವು ತೆಗೆದುಕೊಂಡು

ಓದಬಹುದು. ಎಲ್ಲೂ ಕೂಡ specific ಆಗಿ industries start ಮಾಡುವಾಗ ಯಾವ productsನ್ನು ನೀವು produce ಮಾಡುತ್ತೀರಿ? what is the terms and condition? ಎಲ್ಲೂ ಕೂಡ ಹಾಕಿರುವುದಿಲ್ಲ. ನಾವು industrial purposeಗೆ ನಾವು acquire ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಅದೇ ಸಂದರ್ಭದಲ್ಲಿ ನೀವು ಕೇಂದ್ರ ಸರ್ಕಾರದ ವಾಣಿಜ್ಯ ಇಲಾಖೆಯ ಮಂತ್ರಾಲಯ ರಾಜ್ಯ ಸರ್ಕಾರಕ್ಕೆ ಒಂದು ಪತ್ರವನ್ನು ಕೊಟ್ಟಿದೆ. SEZ Act ನ್ನು implement ಮಾಡುವಾಗ ನೀವು ಪ್ರಾದೇಶಿಕ ಅಸಮಾನತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದನ್ನು ಇಟ್ಟುಕೊಂಡೇ ನೀವು SEZ Act ನ್ನು ಮಾಡಬೇಕೆ ಹೊರತು ಆ imbalanceನ್ನು ಹೆಚ್ಚು ಮಾಡುವಂತಹ ರೀತಿಯಲ್ಲಿ ನೀವು SEZ Act ನ್ನು ತರಬಾರದು. ಉದಾಹರಣೆಗೆ ಹೇಳುವುದಾದರೆ ಕೆಜಿಎಫ್‌ನಲ್ಲಿ 12 ಸಾವಿರ ಎಕರೆ ಭೂಮಿ ಇದೆ. It is barren land. ಅದು ಯಾವುದಕ್ಕೂ ಕೂಡ ಕೆಲಸಕ್ಕೆ ಬರುವುದಿಲ್ಲ. ಗಣಿಗೋಸ್ಕರ ನಾವು ಕೊಟ್ಟಿರುವಂತಹ ಭೂಮಿಯಾಗಿದೆ. ಅಲ್ಲಿ ನೀವು ಇದನ್ನು ಮಾಡಿ. ಏತಕ್ಕಾಗಿ ನಂದಗುಡಿಗೆ ಹೋಗುತ್ತೀರಿ? 12 ಸಾವಿರ ಎಕರೆ ನಮ್ಮ ಕೆಜಿಎಫ್‌ನಲ್ಲಿದೆ. ಇದಕ್ಕೆ ಯಾರ ತಕರಾರು ಇಲ್ಲ. ಇದಕ್ಕೆ ಯಾರ ಅಭ್ಯಂತರವೂ ಕೂಡ ಇಲ್ಲ. ಕೆಜಿಎಫ್‌ಗೂ ನಂದಗುಡಿ ಜಾಸ್ತಿ ದೂರ ಇಲ್ಲ. ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಡಾ:ನಂಜುಂಡಪ್ಪನವರ ವರದಿಯ ಬಗ್ಗೆ ಮಾತನಾಡುವಾಗ ನೀವು regional imbalanceನ್ನು fulfill ಮಾಡಬೇಕಾದರೆ ನೀವು ಇದನ್ನು ಮಾಡಬೇಕು. ಆದರೆ ನೀವು SEZ Act ನಲ್ಲಿ ಏನು ವಾದ ಮಾಡುತ್ತೀರೆಂದರೆ, infrastructure development ಎಂದು ತಾವು ಹೇಳುತ್ತೀರಿ. ಆದರೆ infrastructure development ಗೆ ನೀವು acquire ಮಾಡುವಂತಹ land ನಲ್ಲಿ ಎಷ್ಟು percent ಇಡಬೇಕೆಂದು ನಿಮ್ಮ Actನಲ್ಲಿ ನೀವು ಹೇಳಿಲ್ಲ. ಅದು ಎಷ್ಟು percentage? Industryಗೆ ಎಷ್ಟು percent ಇಡಬೇಕು, Housingಗೆ ಎಷ್ಟು percent ಇಡಬೇಕು. ಇದರಲ್ಲಿ ಏನೂ ಇಟ್ಟಿಲ್ಲ. You have not demarcated. You have not described anything. ಏನೂ ಮಾಡಿಲ್ಲ. infrastructure development ಇಲ್ಲ. ಅದಕ್ಕೆ ಇವರು ಹೋಗುವುದಿಲ್ಲವೆಂದು ನೀವು ಮಾತನಾಡುತ್ತೀರಿ. infrastructure development ಮಾಡುವುದಕ್ಕೆ ನೀವು ಮಾಡಬೇಕಾದುದು ಎಂದರೆ, ನೀವು ಚೈನಾ ಬಗ್ಗೆ ಮಾತನಾಡುತ್ತೀರಿ. ಚೈನಾದಲ್ಲಿ ಏನು ಇದೆ, Government never gives the land to any Developers. Government develop ಮಾಡುತ್ತಾರೆ, ಅವರೇ ಲೀಸ್‌ಗೆ ಕೊಡುತ್ತಾರೆ. ಅವರು ಏನು ಮಾಡುತ್ತಾರೆಂದರೆ ನೀವು ಎಲ್ಲಿಯಾದರೂ

infrastructure ಮಾಡಿ ನೀವು ಬೀದರ್, ಬೆಳಗಾಂ, ಮಾಡುತ್ತೀರಾ, ಮಾಡಬಹುದು. infrastructure ಅಂದರೆ ಏನು ಅವರಿಗೆ Airport ಬೇಕು, transport conveyance ಬೇಕು, ಮಾಡಿ ಆಗ Regional balance ಆಗುತ್ತದೆ. Why you are concentrating only in Bangalore? ಇದೇ ಸಂದರ್ಭದಲ್ಲಿ industries ಬೇಡ ನಮಗೆ ಎಂದು ಹೇಳತಕ್ಕಂತಹದ್ದು ನಾನು ಒಪ್ಪುವುದಿಲ್ಲ. Industry will grow whether one agrees or disagrees. ಏಕೆಂದರೆ ಜಾಗತಿಕ ಇತಿಹಾಸ ನಮಗೆ ತೋರಿಸಿಕೊಟ್ಟಿದೆ. Industry has always grown fighting against the land ardently. ನಾವು ಇನ್ನೊಂದು ಅಂಶವನ್ನು ತಿಳಿದುಕೊಳ್ಳಬೇಕು. ನೀವು ಮತ್ತು ನಾವು ಇಷ್ಟೆಲ್ಲಾ ವಿರೋಧವನ್ನು ಮಾಡಿದರೂ ಬಂಡವಾಳ ಇದೆಯಲ್ಲಾ Capital ಅದಕ್ಕೆ ತಾನೇ ನಾವು ಹೊಡೆದಾಡುತ್ತಿರುವುದು. ಬಂಡವಾಳ ಹೂಡಬೇಕು, ಇಲ್ಲದಿದ್ದರೆ develop ಆಗುವುದಿಲ್ಲ ಎಂದು ಹೇಳುತ್ತೇವೆ. ಬಂಡವಾಳ ಎನ್ನುವುದು ನೀವು ಮತ್ತು ನಾವು ಹೇಳುವ ಕಡೆಗೆ ಬರುವುದಿಲ್ಲ. We must bear in mind. Capital is having its own law, its own dynamics. Capital goes always where it will get highest rate of profit. ನೀವು ಮತ್ತು ನಾವು ಹೇಳುವ ಕಡೆಗೆ ಬಂಡವಾಳ ಹೋಗುವುದಿಲ್ಲ. ಅದು ಎಲ್ಲಿಗೆ ಹೋಗುತ್ತದೆ, ಅವರಿಗೆ cheap rateನಲ್ಲಿ raw-materials ಸಿಗಬೇಕು. Market ಸಿಗಬೇಕು, cheap rate ನಲ್ಲಿ labour ಸಿಗಬೇಕು. ಅಲ್ಲಿಗೆ ಮಾತ್ರ ಅವರು ಹೋಗುತ್ತಾರೆ. Why the capital is coming to the third world countries? Because they will get the lowest rate of labour, lower rate of raw materials, marketing. ಹಾಗಾಗಿ ಬರುತ್ತೇ. ನೀವು ಮತ್ತು ನಾವು ಇಲ್ಲಿಗೆ ಹೋಗಿ ಅಲ್ಲಿಗೆ ಹೋಗಬೇಡಿ ಅಂದರೆ ಅವರು ಕೇಳುವುದಿಲ್ಲ. ಇದು final logic of capital. But, State Governmentಗೆ ನೀವು ಈ Actನ್ನು ಮಾಡುವಂತಹ ಸಂದರ್ಭದಲ್ಲಿ ಅವರಿಗೆ specific ಆಗಿ Act ನಲ್ಲಿ direction ಕೊಟ್ಟಿಲ್ಲ. ಏನು ಮಾಡಬೇಕೆಂದು, ಹಾಗೂ land use ಬಗ್ಗೆ ಎಷ್ಟು percentage ಎಂದು, ಎಷ್ಟು percentage tax ಮಾಡಬೇಕೆಂಬುದರ ಬಗ್ಗೆ clarifyಮಾಡಿರುವುದಿಲ್ಲ. ಆದ್ದರಿಂದ ಇದರ ಬಗ್ಗೆ ನನ್ನ ಸ್ಪಷ್ಟ ಅಭಿಪ್ರಾಯ ಕೇಂದ್ರ ಸರ್ಕಾರದವರು ಮಾಡಿರುವಂತಹ ಈ SEZ Act ಏನು ಇದೆ, ಇದರಲ್ಲಿ ಮಾರ್ಪಾಡು ತರುವವರೆಗೂ ರಾಜ್ಯ ಸರ್ಕಾರ ಇದನ್ನು ಜಾರಿಗೆ ಮಾಡಬಾರದು. ಇದನ್ನು ಮಾಡುವುದರಿಂದ ಅಪಾಯ ಕಾದಿದೆ. ರಾಜ್ಯ ಸರ್ಕಾರಗಳು ಕೂಡ ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಈ Act ನಲ್ಲಿ ಲೋಪದೋಷಗಳು ಇವೆ.

ಇದನ್ನು ಸರಿಪಡಿಸಿ ಆಮೇಲೆ ನಾವು ಇದನ್ನು ಜಾರಿ ಮಾಡುತ್ತೇವೆಂದು ಹೇಳಬೇಕು. Multi crop land ಯಾವುದೇ ಕಾರಣದಿಂದಲೂ acquire ಮಾಡಬಾರದು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ನನ್ನೆಯಿಂದ ಈ ಬಗ್ಗೆ ಚರ್ಚೆ ನಡೆದಿದೆ. SEZ ಗೆ ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಎಷ್ಟು permission ಕೊಟ್ಟಿದ್ದೀರಿ, ಇದುವರೆಗೂ ಎಷ್ಟು ಪ್ರಾರಂಭವಾಗಿದೆ. ನೀವು ಕೇವಲ permission ನ್ನು ಕೊಟ್ಟಿರುವುದು ಅವರು ಜಾಗವನ್ನು ತೆಗೆದಿಟ್ಟುಕೊಂಡಿರುವುದು ಮಾತ್ರವೇ, ಅವರು ಯಾವುದಾದರೂ ಏರಿಯಾದಲ್ಲಿ develop ಮಾಡಿದ್ದಾರಾ? ಅಲ್ಲಿ industries ಬಂದಿದೆಯಾ? ಅಲ್ಲಿ ಏನೇನು ಆಗಿದೆ ಎಂಬುದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡಬೇಕು. ಈಗ fertile ಕೃಷಿ ಭೂಮಿಯನ್ನು ಕೊಡುವುದಕ್ಕಿಂತ ನಮ್ಮಲ್ಲಿ ಅನೇಕ Public Sector Undertakings close ಆಗಿದೆ, including ನಿಮ್ಮದು ಕೆಜಿಎಫ್‌ದು. ಅದನ್ನು ಏನು ಮಾಡಬೇಕೆಂಬುದರ ಬಗ್ಗೆ ಇನ್ನು ಆಲೋಚನೆಯನ್ನು ಮಾಡಿರುವುದಿಲ್ಲ. ಯಾವ Public Sector Undertaking Government ದು ನಡೆಯುತ್ತಿರುವುದನ್ನು close ಮಾಡಿಸಿ, ಅದನ್ನು ಹಾಗೆಯೇ ಇಟ್ಟುಕೊಂಡು ಖಾಸಗಿಯವರಿಗೆ ಕೊಡುವಂತಹ ವ್ಯವಸ್ಥೆ. ಅದನ್ನೇ develop ಮಾಡಿದರೆ ಸರ್ಕಾರವೇ ತೆಗೆದುಕೊಂಡು ಮಾಡಿದರೆ ಆಗುತ್ತದೆ. ಲೀಸ್ ಕೊಡುವುದರ ಬಗ್ಗೆ ಶ್ರೀರಾಮರೆಡ್ಡಿಯವರು ಹೇಳಿದರು, ಚೈನಾ ದೇಶದಲ್ಲಿ ಲೀಸ್‌ಗೆ ಕೊಟ್ಟರೆ ಅದನ್ನು ಅವರು ವಾಪಸ್ಸು ಕೊಡಲೇಬೇಕಾಗುತ್ತದೆ. ಇಲ್ಲಿ ಹಾಗೆ ಆಗುವುದಿಲ್ಲ, ಲೀಸ್‌ಗೆ ಕೊಟ್ಟರೆ ಅದನ್ನು permanent ಆಗಿ ಕೊಟ್ಟಂತೆ ಆಗುತ್ತದೆ. ಅವರಿಗೆ ಲೀಸ್ ಕೊಟ್ಟರೆ ಅದನ್ನು ವಾಪಸ್ಸು ತೆಗೆದುಕೊಳ್ಳುವ ಪರಿಸ್ಥಿತಿಯೇ ಇಲ್ಲ. ಅದರ ಆಡಳಿತ ವ್ಯವಸ್ಥೆಯೇ ಬೇರೆ, ನಮ್ಮ ದೇಶದ ಆಡಳಿತ ವ್ಯವಸ್ಥೆಯೇ ಬೇರೆ ಇದೆ. ಆದರೆ ಆ ಬಗ್ಗೆ ನಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ನಾವು ಇವತ್ತಿನ ಪರಿಸ್ಥಿತಿಯಲ್ಲಿ ನೀರಿನ ಬಗ್ಗೆ ಮಾತನಾಡಿದರೆ ನಾವು ನೀರನ್ನು ಕೊಡುವುದಕ್ಕೆ ಮಾತ್ರ ಸಾಧ್ಯವಾಗುತ್ತದೆ. Power position ಬಗ್ಗೆ ನಾವು ಆಲೋಚನೆಯನ್ನು ಮಾಡಿರುವುದಿಲ್ಲ. ನಮ್ಮಲ್ಲಿ ಪವರ್ ಇಲ್ಲ, ಇವತ್ತಿಗೆ ಬೇಕಾದಷ್ಟು ಪವರ್ ಇಲ್ಲ, ನಾನು ಮೊನ್ನೆ ದಿನ ಬಜೆಟ್‌ನ ಬಗ್ಗೆ ಮಾತನಾಡುವಾಗ ಹೇಳಿದ್ದೇನೆ. By 20011, 2000 to 3000 MW short ಆಗುತ್ತದೆ. ನಾವು ಇವತ್ತು ಏನು implement ಮಾಡುತ್ತೇವೆ, ಆ project ಎಲ್ಲವೂ ಕೂಡ ಕಾರ್ಯ ಮಾಡುವುದಕ್ಕೆ ಪ್ರಾರಂಭ ಮಾಡಿದರೂ ಸಹ we will be short of power. ಹಾಗಾದರೆ ಇವರಿಗೆ ಎಲ್ಲಿಂದ

ಕೊಡುತ್ತೀರಿ? ಮೊನ್ನೆ ನಾವು ಎಪಿಎಂಸಿ Actನ್ನು ತಿದ್ದುಪಡಿ ಮಾಡಿದ್ದೇವೆ. Contract Farmingಗೆ ನಾವು permission ಕೊಡುತ್ತಿದ್ದೇವೆ. Land Reforms Act has become redundant. ಈ ಬೆಂಗಳೂರು ಸುತ್ತಮುತ್ತ ಇರುವಂತಹ ಭೂಮಿಯನ್ನು ನೀವು Contract Farming ಮಾಡಿ ತೊಂದರೆಯಿಲ್ಲ. ಬೆಂಗಳೂರು ಸುತ್ತಮುತ್ತ ಇರುವಂತಹ ಉದ್ದಿಮೆಯನ್ನು ತಂದು ನೀವು ಅಭಿವೃದ್ಧಿ ಮಾಡುವುದನ್ನು ನೀವು ನಿಲ್ಲಿಸಬೇಕಾಗುತ್ತದೆ. ಬೇರೆ ಬೇರೆ ಜಿಲ್ಲೆಯಲ್ಲಿ ನೀವು Airport ಮಾಡುವ ಬಗ್ಗೆ ತೀರ್ಮಾನ ಮಾಡಿ ಆಗಿದೆ. ನೀವು infrastructure development ಮಾಡುವುದರ ಬಗ್ಗೆ ತೀರ್ಮಾನ ಮಾಡಿದ್ದೀರಿ. ಇಲ್ಲಿರುವಂತಹ ರೈತರ ಭೂಮಿಯನ್ನು ಕಿತ್ತುಕೊಂಡು ಅವರ ಉದ್ಯೋಗವನ್ನು ತೆಗೆದುಕೊಂಡು ಇಲ್ಲಿ ಉದ್ದಿಮೆಯನ್ನು ಮಾಡುವುದಕ್ಕಿಂತ ಬೇರೆ ಬೇರೆ ಜಿಲ್ಲೆಗಳಿಗೆ ಹೋದರೆ ಅಲ್ಲಿ ಇನ್ನು ಬೆಲೆ ಜಾಸ್ತಿಯಾಗಿರುವುದಿಲ್ಲ. At least ಅಲ್ಲಿರುವಂತಹ ರೈತರಿಗೆ ಸ್ವಲ್ಪ ದುಡ್ಡು ಸಿಗುವಂತಹ ವ್ಯವಸ್ಥೆಯಾಗಲಿ. ಅಲ್ಲಿರುವಂತಹ ನಿರುದ್ಯೋಗಿ ಯುವಕರಿಗೆ ಉದ್ಯೋಗ ಸಿಗುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮ ಭಾಗದಲ್ಲಿ ಮಂಗಳೂರಿನಲ್ಲಿ Airport ಇದೆ, ಉಡುಪಿಯಲ್ಲಿ ಮಾಡುವುದು ಎಂದು proposal ಬಂದಿದೆ. Port ಇದೆ, Port is the cheapest mode of transportation. ಅದನ್ನು develop ಮಾಡಿ New Mangalore Port ಇರುವುದರಿಂದ ಅದನ್ನು ಮಲ್ಪೆಯಲ್ಲಿ ಮಾಡುವುದಕ್ಕಾಗುತ್ತದೆ. ಕಾರವಾರದಲ್ಲಿ ಮಾಡುವುದಕ್ಕಾಗುತ್ತದೆ. ಇವೆಲ್ಲದರ ಬಗ್ಗೆ ಆಲೋಚನೆಯನ್ನು ಮಾಡಬೇಕಾಗುತ್ತದೆ. ಕರಾವಳಿಯಲ್ಲಿ ಇರುವುದನ್ನು ಇಲ್ಲಿಗೆ ತಂದು ಹಾಕಿ ನಾವು ಮಂಗಳೂರಿನಲ್ಲಿ ಒಂದು SEZ ಬರುತ್ತದೆಂದು ಒಂದು ಆಸೆ ಇದ್ದು ಅದನ್ನು ನಾವು ನೋಡುತ್ತಿದ್ದೇವೆ. ಅದು sanction ಆಗಿದೆ ಎಂದು ಹೇಳುತ್ತಿದ್ದಾರೆ ಇನ್ನು ಏನೂ Develop ಆಗುತ್ತಿರುವುದನ್ನು ನಾವು ಕಾಣುತ್ತಿಲ್ಲ. ಇದು ಕೇವಲ real estate ಉದ್ದಿಮೆಯಾಗುತ್ತಿದೆ. ಬಿಡಿಎನವರು acquire ಮಾಡುವುದು, ಕೆಐಎಡಿಬಿಯವರು acquire ಮಾಡುವುದು, SEZ ಹೆಸರಿನಲ್ಲಿ acquire ಮಾಡುವುದು, ಅದು Satellite Town ಮಾಡುವುದಕ್ಕೆ acquire ಮಾಡುವುದು, ಆದರೆ ಇನ್ನು ಯಾವ ಕಾಯಿದೆಯಡಿಯಲ್ಲಿ ಎಷ್ಟು acquire ಮಾಡುತ್ತಿದ್ದಾರೆಂದು ಅದರ ಬಗ್ಗೆ ನಾವು ಸ್ವಲ್ಪ ತನಿಖೆಯನ್ನು ಮಾಡಬೇಕಾಗುತ್ತದೆ. acquire ಮಾಡುವುದಕ್ಕೆ ಒಂದು guidelines ಇದೆ. SEZ Act ನಲ್ಲಿ ಯಾವ ರೀತಿಯಲ್ಲಿ ಕೊಡಬೇಕೆಂಬುದರ ಬಗ್ಗೆ ಇದೆ. Government waste land. Fertile ಕೃಷಿ ಭೂಮಿಯನ್ನು

ಕೊಡಬೇಕೆಂದು ಏನು ಇಲ್ಲ. waste land ಇದ್ದರೆ ಅದನ್ನು ಬೇರೆ ಉಪಯೋಗಕ್ಕೆ ಬಳಸುವ ಭೂಮಿ ಇದ್ದರೆ, ರೈತರ ಭೂಮಿಯನ್ನು ಕೊಡುವುದಾದರೆ ಮೊದಲು Public hearing ಮಾಡಬೇಕು. ರೈತರ ಹತ್ತಿರ ಚರ್ಚೆಯನ್ನು ಮಾಡಬೇಕು. ರೈತರು ಆ ಭಾಗದಲ್ಲಿ ಕೊಡುವವರಿದ್ದರೆ Government shall facilitate the industrialist or developer. SEZ ನಲ್ಲಿ developer ಎಂದು ಕರೆಯಬೇಕಾಗುತ್ತದೆ. ಉದ್ಯಮದವರು ಎಂದು ಯಾರು ಹೇಳುವುದಿಲ್ಲ, ಅವರನ್ನು developer ಎಂದು ಹೇಳುತ್ತಾರೆ. ಏಕೆಂದರೆ ಅದು guidelinesನಲ್ಲಿ ಇದೆ. ಅಲ್ಲಿ developer ಎಂದು ಇರುತ್ತದೆ. ಇದರ ಬಗ್ಗೆ ಚರ್ಚೆ ಮಾಡುವಾಗ ಮಾನ್ಯ ಶಿವಕುಮಾರ್‌ರವರು ಮಾತನಾಡುವಾಗ ಮಾನ್ಯ ಮಂತ್ರಿಗಳು ಹೇಳಿದರು ನಾವು ಇನ್ನು acquire ಮಾಡಿಲ್ಲವೆಂದು ಹೇಳಿದರು ಇಲ್ಲಿ notify ಮಾಡಿದ್ದೀರಿ. 1 ಲಕ್ಷ 50 ಸಾವಿರಕ್ಕಿಂತ ಹೆಚ್ಚು ಭೂಮಿಯನ್ನು notify ಮಾಡಿರುವ ಬಗ್ಗೆ ಮಾನ್ಯ ಖರ್ಗೆಯವರು ಸಹ ಹೇಳಿದ್ದಾರೆ. ನೀವು ಮಾಡುವುದನ್ನು ನಾವು ಮುಂದುವರೆಸಿಕೊಂಡು ಹೋಗುತ್ತಿದ್ದೇವೆಂದು ಮಾನ್ಯ ಅಶೋಕ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಅವರು ಮಾಡಿರುವ ತಪ್ಪನ್ನು ನಾವು ಮಾಡುತ್ತಿದ್ದೇವೆ ಎಂದು ಅವರು ಒಪ್ಪಿಕೊಂಡರು. ಇದು ಎಂತಹ ದುರಂತ ಅಧ್ಯಕ್ಷರೆ, ಯಾರಾದರೂ ಒಬ್ಬರು ತಪ್ಪನ್ನು ಮಾಡಿದರೆ ಅದನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ನಿಮ್ಮನ್ನು ಅಲ್ಲಿ ಕೂರಿಸಲಿ. ಮಾನ್ಯ ಅಶೋಕ್‌ರವರು ಹೇಳಿದಾಗ ನಾನು ಇಲ್ಲಿಯೇ ಕುಳಿತಿದ್ದೆ. ನೀವು ಏನಾದರೂ ಬದಲಾವಣೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ನಾವು ನೋಡುತ್ತಿರುವುದು.

ಅಧ್ಯಕ್ಷರು: ಅವರಿಗೆ ತಪ್ಪು ಎಂದು ಗೊತ್ತಿದ್ದರೆ ಅದನ್ನು ಮುಂದುವರಿಸುತ್ತಿರಲಿಲ್ಲ. ಅವರು ಮಾಡಿರುವುದು ಸರಿ ಎಂದು ಅನಿಸಿರಬಹುದು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಆದರೆ project ಇಲ್ಲದೆಯೇ acquire ಮಾಡುವುದು ಏತಕ್ಕೆ? ಯಾವುದಾದರೂ ಒಂದು proposal ಇದ್ದರೆ ಅದಕ್ಕೆ public hearing ನ್ನು ಮಾಡಿ ನಂತರ acquisition proceedings start ಮಾಡುವುದನ್ನು ಬಿಟ್ಟರೆ ನೇರವಾಗಿ guidelines, procedure follow ಮಾಡಿ ರೈತರನ್ನು ಕೇಳದೆಯೇ, ಸ್ಥಳವನ್ನು ಕೇಳದೆಯೇ ನೇರವಾಗಿ ಅದನ್ನು ಮಾಡುವಂತಹದ್ದು ಇವತ್ತು green belt ದೂರ ಹಾಕಿಕೊಂಡು ಹೋಗುತ್ತಿದ್ದೀರಿ. ಅಲ್ಲಿ ಇನ್ನೊಂದು ಆಗುತ್ತಿದೆ. ಇವರು ಎಲ್ಲಿ ಉದ್ದಿಮೆಯನ್ನು ತರುವ ಬಗ್ಗೆ SEZ ನ್ನು ಮಾಡಬೇಕೆಂದು ಆಲೋಚನೆಯನ್ನು ಮಾಡುತ್ತಾರೆ. ಅದರ ಮುಂಚೆಯೇ

ಅಲ್ಲಿರುವಂತಹ ಸುತ್ತಮುತ್ತಲಿರುವ ಭೂಮಿಯು ಖರೀದಿ ಆಗಿ ಹೋಗಿರುತ್ತದೆ. ಮೊದಲೇ ಏನು developers ಇದ್ದಾರೆ ಅವರು developers ಹೆಸರಿನಲ್ಲಿ ಯಾರ್‍ಯಾರು ಅಧಿಕಾರದಲ್ಲಿದ್ದವರು ಅದರ ಸುತ್ತಮುತ್ತ ಇರುವಂತಹ ಭೂಮಿಯನ್ನು ಖರೀದಿ ಮಾಡಿ ಆಗಿರುತ್ತದೆ. ನಂತರ ಅಲ್ಲಿ ಉದ್ದಿಮೆ ಬರುವಂತಹದ್ದು ಆಗುತ್ತದೆ. SEZ ಹಾಗೂ Satellite town ಬರುವಂತಹದ್ದು ಆಗುತ್ತದೆ. ಇದರ ಬಗ್ಗೆ ತನಿಖೆಯಾಗಬೇಕಾಗುತ್ತದೆ. ಇದನ್ನು ಮಾಡುವುದರ ಬಗ್ಗೆ ಯಾವ ಉದ್ದೇಶವಿದೆ ಎಂಬುದು ಗೊತ್ತಾಗಬೇಕು. ಇದನ್ನು ಯಾವ ರೀತಿಯಾಗಿ ಬೆಳೆಸಬೇಕೆಂಬುದರ ಬಗ್ಗೆ ಬೆಲ್ಟ್‌ಗೆ ಗೊತ್ತಿರುವುದಿಲ್ಲ. ಅದು ಮುಂದೆ ಮುಂದೆ ಹೋಗುತ್ತಿದೆ. ಗ್ರೀನ್ ಬೆಲ್ಟ್ ಎಂದು ಹೇಳುವಂತಹದ್ದನ್ನು ಬಿಟ್ಟರೆ ಆ ಬೆಲ್ಟ್ ಇಲ್ಲ. ಎಲ್ಲಾ ಮಂತ್ರಿಗಳು ಚೈನಾಕ್ಕೆ ಹೋಗುತ್ತಿದ್ದಾರೆ. ನಾನು ನಿನ್ನೆ ನಮ್ಮ ಸ್ನೇಹಿತರ ಹತ್ತಿರ ಮಾತನಾಡುವಾಗ ಹೇಳಿದೆ. Tourism Minister tour ಮಾಡಿದರು. ಅಲ್ಲಿ tourism develop ಆಗಿಲ್ಲವೆಂಬ ಮಾತನ್ನು ಹೇಳಿದೆ. ಅದೇ ರೀತಿಯಲ್ಲಿ ಚೈನಾಕ್ಕೆ ಹೋಗಿದ್ದಾರೆ. ಚೈನಾ ಏನು ಎಂದರೆ ಒಂದು area develop ಮಾಡಿರುವ ಬಗ್ಗೆ ನಾನು ತಮ್ಮ ಜೊತೆಯಲ್ಲಿ ಬಂದಿದ್ದ ಅಧ್ಯಕ್ಷರೆ, ಅಲ್ಲಿ ಎಲ್ಲಾ ವ್ಯವಸ್ಥೆಯನ್ನು ಮಾಡಿ ಇವರು ಕೊಡುತ್ತಿರುವುದನ್ನು ಬಿಟ್ಟರೆ ಬರೀ ಜಾಗವನ್ನು ಕೊಡುವಂತಹದ್ದು ಅಲ್ಲ. ಇವತ್ತು ನಮ್ಮಲ್ಲಿ ಕೇವಲ ಜಾಗವನ್ನು ಕೊಡುವಂತಹದ್ದು ಆಗಿದೆ. ಇವತ್ತು ನಾನು ಏನು ಹೇಳುತ್ತೇನೆಂದರೆ Traffic congestion ಬಗ್ಗೆ ಚರ್ಚೆಯಾಯಿತು. ಒಂದು ವೇಳೆ ಒಂದು ಏರಿಯಾವನ್ನು ಅಭಿವೃದ್ಧಿ ಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡಿ ಅಲ್ಲಿ ಕೇವಲ ಉದ್ದಿಮೆ ಬರುವಂಥದ್ದು ಮಾತ್ರವಲ್ಲ. ವಸತಿ ಯೋಜನೆ ಆದರೆ ಮಾತ್ರ ನಮಗೆ ಸಹಾಯವಾಗುತ್ತದೆ. ಬೆಂಗಳೂರಿನಲ್ಲಿ ವಸತಿ, ರಾಮನಗರಕ್ಕೆ ಅಥವಾ ಹೊಸಕೋಟೆಗೆ ಹೋಗಿ ಬರುವಂಥಾದ್ದೂ ಆಗಬಾರದು. ಅಲ್ಲಿ ಏನು develop ಮಾಡುತ್ತಾರೆ ಆ ಏರಿಯಾದಲ್ಲಿ ವಸತಿ ಯೋಜನೆ ಆದಾಗ ಮಾತ್ರ ನಮ್ಮ ಉಳಿದ ಸಮಸ್ಯೆಗಳು ಪರಿಹಾರವಾಗುತ್ತದೆ. ಇಲ್ಲದೇ ಹೋದರೆ ಪುನಃ ನಾವು ಅಲ್ಲಿನ ಉದ್ದಿಮೆಯವರಿಗೆ ಕೊಡುವುದು, ಇಲ್ಲಿಂದ ಅಲ್ಲಿಗೆ ಹೋಗಿ ಬರುವಂಥದ್ದು ಆಗಬಾರದು. ಈಗ ದೊಡ್ಡ 1,000, 2,000 ಎಕರೆಯ ಪ್ರದೇಶವನ್ನು Multi National Companies ಗೆ ಕೊಟ್ಟಿದ್ದೇವೆ. ಅಲ್ಲಿ ಅವರು Offices ಮಾತ್ರ ಮಾಡಿದ್ದಾರೆ ವಿನಃ ವಸತಿ ಯೋಜನೆಗೆ ಪುನಃ ಅವರ ಬಸ್ಸು, ಕಾರು, ಇವತ್ತು ಬೆಂಗಳೂರು ನಗರದಲ್ಲಿ taxies ಓಡಾಡುವುದನ್ನು ಲೆಕ್ಕ ಹಾಕಿದರೆ ಕೇವಲ Multi National Companies ಗೆ ನಿರುದ್ಯೋಗಿ ಯುವಕರಿಗೆ ಉದ್ಯೋಗವಾಗುತ್ತದೆ, ಆದರೆ Traffic Congestion ಬಗ್ಗೆ

ಆಲೋಚನೆ ಮಾಡಿದಾಗ ಈ ಪರಿಸ್ಥಿತಿಯನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಏನು ಪರಿಹಾರವೆಂದು ಆಲೋಚನೆ ಮಾಡಬೇಕು. 40.00 ಲಕ್ಷ ವಾಹನಗಳು ಬೆಂಗಳೂರಿನಲ್ಲಿ ಓಡಾಡುತ್ತಿವೆ. ಅದರೊಂದಿಗೆ ಎಲ್ಲಾ ಜಿಲ್ಲೆಗಳಲ್ಲಿ ಒಂದೊಂದು airport ಮಾಡುವುದಾಗಿ ತೀರ್ಮಾನವನ್ನು ಮಾಡಿದ್ದಾರೆ. ಅದರಂತೆ ಎಲ್ಲಾ ಜಿಲ್ಲೆಗಳಲ್ಲಿ ಅಭಿವೃದ್ಧಿ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ನಮ್ಮಲ್ಲಿ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ Negative growth of population, ನಮ್ಮಲ್ಲಿ ಜಾಗವಿದೆ. ಅಭಿವೃದ್ಧಿ ಮಾಡಲಿಕ್ಕೆ ಅವಕಾಶವಿದೆ. Skilled and unskilled labourers ಇಬ್ಬರೂ ದೊರೆಯುತ್ತಾರೆ. ಅಂಥ ಕಡೆಯಲ್ಲಿ ಹಾಕಿ. Under developed area ಆದ ಉತ್ತರ ಕರ್ನಾಟಕದಲ್ಲಿ ಏರ್‌ಪೋರ್ಟ್ ಅನ್ನು ಮಾಡಲಿಕ್ಕೆ ಏನು ಪ್ರಯತ್ನವನ್ನು ಮಾಡುತ್ತಿದ್ದೀರಿ. ಅಲ್ಲಿ ಅಭಿವೃದ್ದಿಯನ್ನು ಮಾಡಲಿಕ್ಕೆ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತಾ, ಬೆಂಗಳೂರಿನ ಸುತ್ತಮುತ್ತ ಮಾಡುವುದನ್ನು ನೀವು ಕೈಬಿಡಬೇಕು. ಬೆಂಗಳೂರಿನ ಸುತ್ತಮುತ್ತ ಅಭಿವೃದ್ಧಿಯನ್ನು ಮಾಡುವುದನ್ನು ಕೈಬಿಟ್ಟು ಬೇರೆ ಬೇರೆ ಜಿಲ್ಲೆಗಳಲ್ಲಿ ಮಾಡಿದಾಗ ಖಂಡಿತ ಇಡೀ ರಾಜ್ಯ ಅಭಿವೃದ್ದಿಯಾಗುತ್ತದೆಂದು ಹೇಳುತ್ತಾ ಈ ಒಂದು ವ್ಯವಸ್ಥೆಯನ್ನು ಕೈಬಿಡಬೇಕೆಂದು ಸರ್ಕಾರದಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಪಿ.ಜಿ.ಆರ್. ಸಿಂಧ್ಯಾರವರು ದಯಮಾಡಿ ಹತ್ತು ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ವಿ.ಸೋಮಣ್ಣ: ಅಧ್ಯಕ್ಷರೇ ನಾನು ಮಾತನಾಡಲಿಕ್ಕೆ ಅವಕಾಶವನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು: ನಿಮಗೂ ಅವಕಾಶವನ್ನು ಕೊಡುತ್ತೇನೆ. ಈಗ ಮೂರು ಜನ ಎಂದಾಗಿದೆ. ಸಿಂಧ್ಯಾರವರು ಸೀನಿಯರ್ ಮೆಂಬರ್. ಸಿಂಧ್ಯಾರವರೇ ಮಾತನಾಡಿ, 10 ನಿಮಿಷದಲ್ಲಿ ದಯಮಾಡಿ ಮಾತನಾಡಿ ಮುಗಿಸಬೇಕು. ನಿಮಗೂ 10 ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ನಮಗೂ ಅವರದಾದ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಶ್ರೀನಿವಾಸಗೌಡರೇ ಏಕೆ ಹೀಗೆ ಮಾಡುತ್ತೀರಿ, ನಿನ್ನೆ ಎರಡು ಎಂದು ಆಗಿತ್ತು. ನಿಮ್ಮ ನಾಯಕರು ಮೂರು ಜನಕ್ಕೆ ಎಂದು ಆಜ್ಞೆ

ಮಾಡಿಬಿಟ್ಟಿದ್ದಾರೆ. ನೀವು ಅದರಲ್ಲಿ ಸೇರಿಲ್ಲ. ಆದ್ದರಿಂದ ನೀವು ಕುಳಿತುಕೊಳ್ಳಿ, ನೀವು ಏಕೆ ಹೀಗೆ ಮಾಡುತ್ತೀರಿ ನನಗೆ ಅರ್ಥವಾಗುವುದಿಲ್ಲ. ಇಲ್ಲ ಸೋಮಣ್ಣ ಒಬ್ಬರಿಗೆ ಅವಕಾಶ ಕೊಡುವುದು. ನೀವು ಎಷ್ಟು ಸಾರಿ ಮಾತನಾಡಿದ್ದೀರಿ, ಈಗ ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರುಗಳು ಕಳುಹಿಸಿರತಕ್ಕಂಥ ವಿಚಾರದ ಬಗ್ಗೆ ತಾವು ನಿಯಮ 69 ರಡಿ ಈ ಗಹನವಾದ ವಿಚಾರದ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ತುಂಬಾ ಚಿರಋಣಿಯಾಗಿದ್ದೇನೆ. ತಾವು ಕೊಟ್ಟಿರುವ ಸಮಯದಲ್ಲಿ ನಾನು ಹೇಳಬೇಕಾಗಿರುವ ಅಭಿಪ್ರಾಯಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ಈ Special Economic Zone ಎನ್ನುವುದರ ಬಗ್ಗೆ ಹೇಳುವುದಾದರೆ ಈ Special Economic Zone ಪ್ರಾರಂಭವಾದುದು N.D.A ಸರ್ಕಾರ ಇದ್ದಂಥ ಸಂದರ್ಭದಲ್ಲಿ N.D.A ಸರ್ಕಾರ ಇದ್ದಾಗ, F.D.I., Foreign Direct Investmentಗಳನ್ನು ಹೆಚ್ಚಿಗೆ attract ಮಾಡಬೇಕೆಂಬ ಉದ್ದೇಶದಿಂದಾಗಿ ಈ Special Economic Zone concept ಅನ್ನು ಪ್ರಾರಂಭ ಮಾಡಿದರು. ಆ ಸಂದರ್ಭದಲ್ಲಿ ಲೋಕಸಭೆಯಲ್ಲಿ ದುರ್ದೈವದಿಂದ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಲಿಲ್ಲ. ಮತ್ತೆ N.D.C. meetings ನಲ್ಲಿಯೂ ಸಹಿತ Special Economic Zone concept ಗಳ ಬಗ್ಗೆ, ಇದರಿಂದ ಕಾರ್ಮಿಕರಿಗೆ ಆಗತಕ್ಕಂಥ ಅನಾನುಕೂಲತೆ ಬಗ್ಗೆ, ಇದರಿಂದ ಜಮೀನುಗಳನ್ನು ಕಳೆದುಕೊಳ್ಳುವಂಥ ಜನರಿಗೆ ಆಗುವ ಅನಾನುಕೂಲತೆ ಬಗ್ಗೆ ಮತ್ತು ರಾಜ್ಯ ಮತ್ತು ರಾಷ್ಟ್ರ ಸರ್ಕಾರದ ಬೊಕ್ಕಸಗಳಿಗೆ ಆಗತಕ್ಕಂಥ ನಷ್ಟದ ಬಗ್ಗೆ ಸಹಿತ ದುರ್ದೈವದಿಂದ ಇದರ ಬಗ್ಗೆ ಚರ್ಚೆಯಾಗಲಿಲ್ಲ. ಇದಾದ ನಂತರ ಬಂದಂಥ ಎಲ್ಲಾ ಸರ್ಕಾರಗಳು ಸಹಿತ ಒಂದು ರೀತಿಯಲ್ಲಿ ನಾವು ಈ ಖಾಸಗೀಕರಣ ಮತ್ತು globalization ಆಗಿರುವ ಹಿನ್ನೆಲೆಯಲ್ಲಿ ನಾವೆಲ್ಲರೂ ಸಹಿತ ಈ Special Economic Zone ಗಳಿಗೆ encourage ಮಾಡಿಕೊಂಡು ಬಂದಿದ್ದೇವೆ ಹಾಗು ಅದಕ್ಕೆ ಅಪ್ರೂವಲ್ ಸಹಿತ ನಾವು ಕೊಟ್ಟಿದ್ದೇವೆ. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ದೇಶಪಾಂಡೆಯವರು ಈ ಒಂದು ಕೈಗಾರಿಕಾ ಮಂತ್ರಿಗಳಾಗಿದ್ದರು, ಆಗಲೂ ಸಹಿತ Special Economic Zone ಬಗ್ಗೆ ಈ ಸದನದಲ್ಲಿ ಚರ್ಚೆಯಾಗಲಿಲ್ಲ. ಅದಾದ ನಂತರ ಮಾನ್ಯ ಧರಂಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಾನು ಕೈಗಾರಿಕಾ ಇಲಾಖೆ

ಮಂತ್ರಿಯಾಗಿದ್ದೆನು. ಆ ಸಂದರ್ಭದಲ್ಲಿ ತಮಗೆ ಮತ್ತು ಈ ಸದನದ ಗೌರವಾನ್ವಿತ ಸದಸ್ಯರುಗಳಿಗೆ ಆಶ್ಚರ್ಯವಾಗಬಹುದು. ರಾಜ್ಯ ಸರ್ಕಾರದ ಪರವಾನಿಗೆಯನ್ನು ಪಡೆಯದೆ Special Economic Zone ಗಳಿಗೆ ಮಂಜೂರಾತಿಯನ್ನು ಕೇಂದ್ರ ಸರ್ಕಾರ ಮಾಡುವುದಕ್ಕೆ ನಾವು ಅನಿವಾರ್ಯವಾಗಿ ಸಹಿ ಹಾಕುವಂಥ ಸನ್ನಿವೇಶ ನನಗೆ ಮತ್ತು ಮಾನ್ಯ ಧರಂಸಿಂಗ್‌ರವರಿಗೆ ಬಂದಿತ್ತು. ಕೇಂದ್ರಸರ್ಕಾರದವರು ನಮ್ಮ ಮೇಲೆ ಒತ್ತಾಯವನ್ನು ಹಾಕಿ Special Economic Zone ಗಳನ್ನು ಮಾಡಲಿಕ್ಕೆ ನಾವು ಒಪ್ಪಿಗೆಯನ್ನು in principles ರೀತಿಯಲ್ಲಿ ಕೊಟ್ಟಿದ್ದೇವೆ. ಕರ್ನಾಟಕದಲ್ಲಿ ಅನೇಕ Special Economic Zone ಗಳಿಗೆ ಒಪ್ಪಿಗೆ ಕೊಡಿ ಎಂಬ ವಿಚಾರವನ್ನು ತಂದರು. ನಾನು ಅನಿವಾರ್ಯವಾಗಿ ಅದರ ಮಹತ್ವದ ಆಳವನ್ನು ತಿಳಿದುಕೊಳ್ಳದೆ ಎರಡು ಮೂರು Special Economic Zone ಗಳಿಗೆ ಮಂಜೂರಾತಿ ಕೊಟ್ಟಿರುವುದು ನಿಜ. ಅದು ಅಷ್ಟೇ ಅಲ್ಲ, ಕೈಗಾರಿಕಾ ಇಲಾಖೆಗಳ ಸಚಿವರ ಸಭೆಯಲ್ಲಿ Special Economic Zone ಗಳನ್ನು ಇಂತಿಂಥ ರಾಜ್ಯಗಳಲ್ಲಿ ಇಷ್ಟಿಷ್ಟು ಕೊಡಬೇಕೆಂದು ಹೇಳಿಬಿಟ್ಟು competition ನಡೆಸಿದ್ದು ಸಹ ನಿಜ. ಆದರೆ ಅದಾದ ನಂತರ Special Economic Zone Act ಅನ್ನು ನಾವು ಓದಿ ನೋಡಿದರೆ ಇದರಿಂದ F.D.I ಗಳು ಬರುವುದಿರಲಿ, ರಾಜ್ಯಸರ್ಕಾರಗಳಿಗೆ ಯಾವುದೇ ರೀತಿಯ ಉಪಯೋಗ ಆಗುವುದಿಲ್ಲವೆನ್ನುವುದನ್ನು ನಾವು ಮನಗಂಡಿದ್ದೇವೆ. ಇದರಿಂದ contract labour forming ಎಂದೇನು ನಾವು ಹೇಳುತ್ತಿದ್ದೇವೆ. ಅದೇ ತರಹ ನಮ್ಮ ಕಾರ್ಮಿಕರಿಗೆ ಮಾಡತಕ್ಕಂಥ ಮೊದಲನೇ ದ್ರೋಹ ಈ Special Economic Zone . ಕಾರಣವೇನೆಂದರೆ, Special Economic Zone ನಲ್ಲಿ ಬರತಕ್ಕಂಥ industries ನಲ್ಲಿ hire and fire, ಯಾರನ್ನು ಬೇಕಾದರೂ ಕೆಲಸಕ್ಕೆ ತೆಗೆದುಕೊಳ್ಳಬಹುದು ಇಲ್ಲವಾದರೆ ಕೆಲಸದಿಂದ ತೆಗೆಯಬಹುದು. ಅಂಥ ಒಂದು anti-labour policy ಅಂದರೆ ಈ Special Economic Zone policy. ಇದು ಒಂದು ಕಡೆಯಾದರೆ ಕೇಂದ್ರಸರ್ಕಾರ, ರಾಜ್ಯಸರ್ಕಾರಕ್ಕಾಗಲಿ ಯಾವುದೇ ರೀತಿಯ ತೆರಿಗೆಯನ್ನು ಸಹ ಕೊಡತಕ್ಕಂಥ ಅವಶ್ಯಕತೆ ಇರುವುದಿಲ್ಲ. ಇವತ್ತು ಪಕ್ಷಾತೀತವಾಗಿ ಈ ವಿಚಾರವನ್ನು ಮಾತನಾಡುತ್ತಿದ್ದೇನೆ. ಹೊಸಕೋಟೆಯಲ್ಲಿರುವಂಥ, ರಾಮನಗರ, ಕನಕಪುರದಲ್ಲಿ ಮಾಡುತ್ತಿರುವಂಥ Special Economic Zone ಗೆ ಸಂಬಂಧಪಟ್ಟಂತೆ acquisition ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಏಕೆಂದರೆ ನಾವು ಅದರ ಬಗ್ಗೆ ವಿಷಯವನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನವನ್ನೂ ಮಾಡಿಲ್ಲ. ಆದರೂ ಇವತ್ತು ಬಹಳ ಮುಖ್ಯವಾಗಿ ರಾಜ್ಯಸರ್ಕಾರದ ಬೊಕ್ಕಸಕ್ಕೆ ಒಂದು ರೂಪಾಯಿ

ಹಣ ಬರುವುದಿಲ್ಲ. ಅಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ, ಯಾವ ರೀತಿ ಅಂಗನವಾಡಿಗಳಲ್ಲಿ ಗೌರವಾನ್ವಿತ ಸಂಭಾವನೆಯನ್ನು ತೆಗೆದುಕೊಂಡು ಜೀವನ ಮಾಡುತ್ತಿದ್ದಾರೆ. ಆ ರೀತಿ ಜೀವನ ಮಾಡತಕ್ಕಂಥ ಪರಿಸ್ಥಿತಿ ಅಲ್ಲಿ ಕೆಲಸ ಮಾಡತಕ್ಕಂಥ ಜನಗಳಿಗೆ ಬರುತ್ತದೆ. ಮತ್ತೆ Special Economic Zone ಎಂದರೆ ಅವರಿಗೆ ಎಲ್ಲಾ ರೀತಿಯ facilities ಸಹಿತ ನಾವು ಕೊಡಬೇಕಾಗುತ್ತದೆ. current, ನೀರು ಇತರೆ ಎಲ್ಲಾ ಸೌಲಭ್ಯಗಳನ್ನು ಸಹಿತ ಕೊಡಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಇದು ಕೇಂದ್ರ ಸರ್ಕಾರದ NDC ಸಭೆಯಲ್ಲಿ ನಮ್ಮ ಸರ್ಕಾರದ ಪ್ರತಿನಿಧಿಗಳು ಇದನ್ನು ಕೇಳಬೇಕಾಗುತ್ತದೆ. ಇವತ್ತು ನಾವು ನಮ್ಮ ಪಕ್ಷದ ವತಿಯಿಂದಾಗಿ ರಾಷ್ಟ್ರಾದ್ಯಂತ ಕಳೆದ ತಿಂಗಳು Special Economic Zone ಮಾಡಿರುವುದು ಸರಿಯಲ್ಲ. ಕೇಂದ್ರಸರ್ಕಾರದ Act ಅನ್ನು ಇವತ್ತು ಸಂಪೂರ್ಣವಾಗಿ ತಕ್ಷಣ ತಡೆಗಟ್ಟಬೇಕೆಂದು ನಾವು ಒತ್ತಾಯಿಸಿದ್ದೇವೆ. ಪಾರ್ಲಿಮೆಂಟ್‌ನಲ್ಲಿ ನಮ್ಮ ಸದಸ್ಯರುಗಳು ಸಹಿತ ಇದೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಸಹಿತ ಈ ಸದನದ ಮೂಲಕ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ, NDC ನಲ್ಲಿ ಈ Special Economic Zone ಬಗ್ಗೆ ಅಧಿಕಾರಿಗಳ ಜೊತೆ ನೀವು ಚರ್ಚೆಯನ್ನು ಮಾಡಿ, ಯಾರಿಗೋಸ್ಕರ ಇದನ್ನೆಲ್ಲಾ ಮಾಡಬೇಕು? 5,000–10,000 ಎಕರೆ ಪ್ರದೇಶವನ್ನು ಕಳೆದುಕೊಳ್ಳುವುದು ಒಂದು ಭಾಗ, acquire ಮಾಡುವುದು ಅಥವಾ ಮಾಡದೇ ಇರುವುದು ಅವೆಲ್ಲಾ secondary for me. ಸರ್ಕಾರಿ ಜಮೀನಿನಲ್ಲಿ ಮಾಡಲಿಕ್ಕೆ alternative ಆಗಿ ಅಲ್ಲಿ ಮಾಡತಕ್ಕಂಥದ್ದು ಬೇರೆ. ಆದರೆ infrastructure ಯಾರಿಗೋಸ್ಕರ develop ಮಾಡುತ್ತಿದ್ದಾರೆ. ಇದರಿಂದ ಯಾರಿಗೂ ಸಹಿತ ಉಪಯೋಗವಾಗುವುದಿಲ್ಲ. ಇದರಿಂದೇನಾದರೂ employment generation ಆಗುತ್ತದೆಯೇ? ಯಾವ ರೀತಿ employment generation ಆಗುತ್ತದೆ? ಕೂಲಿ ಕೆಲಸ ಸಿಗುತ್ತದೆ. ಇದರಿಂದ ಒಂದು ರೀತಿಯಲ್ಲಿ ಕೇವಲ ನಮ್ಮ ರೈತರು ಕೃಷಿ ಜಮೀನು ಕಳೆದುಕೊಳ್ಳುವುದಷ್ಟೇ ಅಲ್ಲ. ನಮ್ಮ ಕಾರ್ಮಿಕರು ಸಹಿತ ಜೀತದಾಳುಗಳಾಗಿ ದುಡಿಯುವಂತಹ ಸಂದರ್ಭ ಬರುತ್ತದೆ. ಆದ್ದರಿಂದ ಈ ದಿವಸ ಬಹಳ ಮುಖ್ಯವಾಗಿ ನಮ್ಮ ಗೌರವಾನ್ವಿತ ಸದಸ್ಯರುಗಳು ಈ Special Economic Zone ಅನ್ನು..

ಅಧ್ಯಕ್ಷರು: ಸಿಂಧ್ಯಾರವರೇ, ಶಾಸಕರು ಜೀತದಾಳುಗಳಾಗಿ ಕೆಲಸ ಮಾಡಬೇಕಾಗುತ್ತದೆ ಎಂದು ಹೇಳಿದಿರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಶಾಸಕರು ಅಲ್ಲ, ಕಾರ್ಮಿಕರು ಜೀತದಾಳುಗಳಾಗಿ ಕೆಲಸ ಮಾಡಬೇಕಾಗುತ್ತದೆಂದು ಹೇಳಿದ್ದೇನೆ.

ಶ್ರೀ ಡಿ. ಆರ್.ಪಾಟೀಲ್: ಸಾರ್, ಇವರು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರಕ್ಕೆ ಏನೂ ತೆರಿಗೆ ಕೊಡಬೇಕಾಗಿಲ್ಲ ಎಂದಿರಿ, ಅದು ಖಾಯಂ ಅಥವಾ ಇಷ್ಟು ವರ್ಷ ಎಂದು ಇದೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇಲ್ಲ, ಇಲ್ಲ, ಅದು ಖಾಯಂ. ಅದು tax exemptions ಇದೆ. ಅದಕ್ಕೆ ನಾನು ಹೇಳಿದ್ದು. ಒಂದು ಲಕ್ಷ ಎಪ್ಪತ್ತಾರು ಕೋಟಿ tax revenue loss ಆಗುತ್ತದೆ ಎಂದು ಹೇಳಿದೆನಲ್ಲಾ, complete tax exemptions ಅವರಿಗೆ ಕೊಟ್ಟಿದ್ದಾರೆ.

ಶ್ರೀ ಡಿ. ಆರ್.ಪಾಟೀಲ್: ಖಾಯಂ ಆದರೆ ಏಕೆ SEZ ನಮಗೆ ಬೇಕು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೌದು, ಅದು ಖಾಯಂ, ಟೆಂಪರೊರಿ ಅಲ್ಲ. It is permanent.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಅಧ್ಯಕ್ಷರೆ, ಆದ್ದರಿಂದ ಈ Special Economic Zone ಹೆಸರಿನಲ್ಲಿ ಇವತ್ತು ಕೇಂದ್ರ ಸರ್ಕಾರ ಒಂದು ರೀತಿಯ ಶೋಷಣೆ ಮಾಡಲಿಕ್ಕೆ ಜಾಗಗಳನ್ನು ನಿರ್ಮಾಣ ಮಾಡಲಿಕ್ಕೆ ಹೊರಟಿದೆ. ನೋಡಿ Centre ಮತ್ತು State relationship ನಲ್ಲಿ ಸ್ಟೇಟ್‌ಗೆ ಎಫೆಕ್ಟ್ ಆಗತಕ್ಕಂಥ ವಿಚಾರಗಳಲ್ಲಿ ಸೆಂಟ್ರಲ್ ಗವರ್ನಮೆಂಟ್ ಸ್ಟೇಟ್ ಗವರ್ನಮೆಂಟ್‌ಗೆ confidence ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಮತ್ತೊಂದು ಉದಾಹರಣೆ. ಇವತ್ತು ಅಲ್ಲಿ ಮಾಡುತ್ತಾರೆ. ಕಲ್ಕತ್ತಾದಲ್ಲಿ ಮಾನ್ಯ ಅಧ್ಯಕ್ಷರೆ, ಒಂದು Diamond Industry ಗೆ ಎಂದು ಹೇಳಿ ಬಿಟ್ಟು ಒಂದು Special Economic Zone ಅನ್ನು announce ಮಾಡಿದ್ದಾರೆ. ಅಲ್ಲಿ ಏನು ಅಂದರೆ ಒಂದು ಬಿಲ್ಡಿಂಗ್ ಇದೆ ಅಷ್ಟೇ. Diamond ನಲ್ಲಿ ಪ್ರಾಫಿಟ್‌ಗಿಂತ ಹೆಚ್ಚಾಗಿ volume ಬಹಳ ಮುಖ್ಯವಾಗಿರತಕ್ಕಂಥಹದು. ಅಲ್ಲಿ ಕಾರ್ಮಿಕರನ್ನೆಲ್ಲಾ 24 ಅವರ್ಸ್‌ಗೆ ಗುತ್ತಿಗೆಯನ್ನು ತೆಗೆದುಕೊಳ್ಳುತ್ತಾರಂತೆ. 24 ಗಂಟೆಗೆ ತೆಗೆದುಕೊಳ್ಳುತ್ತಾರೆ. ಅವರನ್ನೆಲ್ಲಾ ಮನೆಗೆ ಕಳುಹಿಸಿ ಬಿಡುತ್ತಾರೆ ಅದೊಂದು Special Economic Zone ಎಂದು ಹೇಳಿಕೊಂಡು, ನನಗೆ ಏಕೆ CPM Government West Bengal ನಲ್ಲಿ ಇದರ ಬಗ್ಗೆ ಸುಮ್ಮನೇ ಇದ್ದಾರೆಂದು ಅರ್ಥ ಆಗುತ್ತಾ ಇಲ್ಲ. ಏಕೆಂದರೆ ಸಿಪಿಎಂನವರು basically ಈ ವರ್ಗದ ಜನರ ಪರವಾಗಿ ದುಡಿಯತಕ್ಕಂಥ ಜನ. ನಾನು ಈ ವಿಚಾರವನ್ನು ಮಾನ್ಯ ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡುತ್ತಾರೆಂದು ಅಂದುಕೊಂಡಿದ್ದೆ. ಏಕೆಂದರೆ ಸಿಪಿಎಂ ಪಾರ್ಟಿ ಇವತ್ತು ಶೋಷಿತ ವರ್ಗ ಮತ್ತು ಕಾರ್ಮಿಕ ವರ್ಗದ ಪರವಾಗಿಯೇ ಹೋರಾಟ ಮಾಡುತ್ತಿರತಕ್ಕಂಥ ಜನ. ಇದರಿಂದ ಬಹಳ

ಮುಖ್ಯವಾಗಿ ಆಗಬೇಕಾಗಿರುವುದು, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು. ಈಗೇನು ರಾಜ್ಯದಲ್ಲಿ Special Economic Zone ಮಾಡಲಿಕ್ಕೆ ನಾವೆಲ್ಲಾ ಪಾರ್ಟಿದಾರರು ಇದ್ದೇವೆ. ನಾನು ಸಹ ಪಾರ್ಟಿದಾರ ಇದ್ದೇನೆ. ನಾನು ಆ ಹೊಣೆಯಿಂದ ತಪ್ಪಿಸಿಕೊಳ್ಳಲು ತಯಾರಿಲ್ಲ. ನಮ್ಮ ಅಧಿಕಾರಿಗಳಲ್ಲಿ ಒಂದು ಕಾಂಪಿಟಿಷನ್ ಏನು ಇದೆ ಅಂದರೆ ಏನಾದರೂ ಮಾಡಿ Foreign Direct Investment ಬೇಗ ತೆಗದುಕೊಂಡು ಬರಬೇಕು. Investment ಗಳನ್ನು ಬೇಗ ತರಬೇಕು. ಅದನ್ನು ತೋರಿಸಬೇಕು. ನನ್ನ ಕಾಲದಲ್ಲಿ ಇಷ್ಟು ಆಯಿತು, ನನ್ನ ಕಾಲದಲ್ಲಿ ಇಷ್ಟು ಆಯಿತು ಎನ್ನತಕ್ಕದ್ದನ್ನು ತೋರಿಸಿಕೊಳ್ಳುವುದಕ್ಕೆ ನೋಡುತ್ತಿದ್ದೇವೆಯೇ ಹೊರತು ಇದರಿಂದ ಶಾಶ್ವತವಾಗಿ ದೇಶದ ಮೇಲೆ ಆಗತಕ್ಕಂತಹ ಪರಿಣಾಮದ ಬಗ್ಗೆ ಯೋಚನೆ ಮಾಡಲಿಕ್ಕೆ ನಮಗೆ ಆಗುತ್ತಿಲ್ಲ. ಅದರಿಂದ ನಾನು ಸರ್ಕಾರದವರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳತಕ್ಕಂಥಹದು, ಇವತ್ತು ಈ Special Economic Zone ಗೋಸ್ಕರ ಎಂದು ಹೇಳಿಬಿಟ್ಟು ಜಮೀನುಗಳನ್ನು ಏನು acquire ಮಾಡಲಿಕ್ಕೆ ಹೊರಟಿದ್ದೀರಿ? ಆ ಕೆಲಸವನ್ನು ತಾತ್ಕಾಲಿಕವಾಗಿ ನಿಲ್ಲಿಸಿ. ಇಡೀ ರಾಜ್ಯದಲ್ಲಿ Special Economic Zone ಈಗೇನು ಮಂಗಳೂರಿನಲ್ಲಿ ಆಗಿದೆ, ಸರ್ಕಾರದ ಒಂದು ಜಮೀನು ಕೊಟ್ಟು, private ನವರು ಅಲ್ಲಿರತಕ್ಕಂಥ Commerce Association ನವರು ಸೇರಿ ಮಾಡತಕ್ಕದ್ದಕ್ಕೆ ಮಾನ್ಯ ದೇಶಪಾಂಡೆಯವರ ಕಾಲದಲ್ಲಿ ಪ್ರಾರಂಭ ಮಾಡಿದ್ದೇವೋ, ಅದು ಪ್ರಾರಂಭ ಆಗಿದೆ. ಅದು ಆಗಲಿ. ಎಲ್ಲಿ acquisition ಮಾಡಬೇಕೆಂದು ಹೊರಟಿದ್ದೀರಿ? ಅದನ್ನು ದಯವಿಟ್ಟು ತಾತ್ಕಾಲಿಕವಾಗಿ ಸ್ಥಗಿತ ಮಾಡಿ. ಸ್ಥಗಿತ ಮಾಡಿ ದೀರ್ಘಾವಧಿಯಲ್ಲಿ ಕೇಂದ್ರಸರ್ಕಾರದ ಜೊತೆಯಲ್ಲಿ ತಾವು ಚರ್ಚೆ ಮಾಡಿ ಕೃಷಿಯೇತರ ಭೂಮಿಯನ್ನು ಈ ಒಂದು ಕೈಗಾರಿಕೆಗಳಿಗೆ ಕೊಡಲಿಕ್ಕೆ ಮಾಡತಕ್ಕಂತಹ ಒಂದು ನಿರ್ಣಯವನ್ನು ತೆಗೆದುಕೊಂಡರೆ ಕೇಂದ್ರ ಸರ್ಕಾರಕ್ಕೂ ಅನುಕೂಲ ಆಗುತ್ತದೆ, ರಾಜ್ಯ ಸರ್ಕಾರಗಳಿಗೂ ಅನುಕೂಲ ಆಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನಗೆ ಕೊಟ್ಟಿರತಕ್ಕಂತಹ ಹತ್ತು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ತಮಗೆ ಧನ್ಯವಾದಗಳು.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ): ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಆಭಾರಿ ಆಗಿರುತ್ತೇನೆ. ಈಗೇನು ಈ SEZ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಈ ಬೆಳಕನ್ನು ಚೆಲ್ಲುವ ಸಂದರ್ಭದಲ್ಲಿ ಸನ್ಮಾನ್ಯ ಮಾನ್ಯ ಮುಖ್ಯಮಂತ್ರಿಗಳು ನಾನು ಕಡೆಯಲ್ಲಿ ಮಾತನಾಡುವಾಗ ಬಂದಿರುವುದರಿಂದ ಒಂದೆರಡು ಮೂರು ವಿಚಾರವನ್ನು

ಅವರ ಗಮನಕ್ಕೆ ತರುತ್ತಿದ್ದೇನೆ. ಈಗೇನು SEZ ಎಂದು ಮಾಡಿ ಒಂದು ಕಡೆ ಜಾಗ ಕೊಡತಕ್ಕಂತಹದು ಮತ್ತೊಂದು ಕಡೆ ಬೆಂಗಳೂರು ಸುತ್ತಮುತ್ತ ಉಪನಗರಗಳನ್ನು ಮಾಡತಕ್ಕಂಥ ಒಂದು concept ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಯಾರು ಕೊಟ್ಟರೋ ಗೊತ್ತಿಲ್ಲ. ಅವರು ಬಡವರ ಪರವಾಗಿ ಕೆಲಸ ಕಾರ್ಯಗಳನ್ನು ಮಾಡಿರತಕ್ಕಂತಹವರು. ನಾವು ಕೂಡ ಅವರ ಜೊತೆಯಲ್ಲಿ 20 ವರ್ಷ ದುಡಿದಿರುವುದರಿಂದ ನಾನು ಕೆಲವು ವಿಚಾರಗಳನ್ನು ಇವತ್ತು ಈ ಸದನದ ಮೂಲಕ, ಈ ಸಭೆಯ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡು ಅವರು, ನಾವೆಲ್ಲರೂ ಕೂಡ ಬೆಂಗಳೂರಿನ ಹಿತವನ್ನು ಕಾಪಾಡತಕ್ಕಂಥ ಶಾಸಕರಾಗಿ ಇಲ್ಲಿಗೆ ಬಂದಿದ್ದೇವೆ. 240 ಚದರ ಕಿ.ಮೀ. ಇದ್ದಂತಹ ಬೆಂಗಳೂರನ್ನು ಬೃಹತ್ ಬೆಂಗಳೂರಾಗಿ ಮಾಡಿ ಇವತ್ತು 800 ಚದರ ಕಿ.ಮೀ. ವಿಸ್ತಾರ ಮಾಡಿ, ಪ್ರಾಯಶಃ ಇದೆ ಸಾಧಕ ಬಾಧಕಗಳನ್ನೆಲ್ಲಾ ಚರ್ಚೆ ಮಾಡಿ, ನಾವು ಬೆಂಗಳೂರಿನಲ್ಲಿರತಕ್ಕಂತಹ ಜನ ಸಂದಣಿಯನ್ನು ಎಲ್ಲೋ ಒಂದು ಕಡೆ ಬೇರೆ ಬೇರೆ ರೂಪದಲ್ಲಿ ಅದನ್ನು ವಿಸ್ತಾರ ಮಾಡತಕ್ಕಂತಹ ಒಂದು ಸಂದರ್ಭವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಿರತಕ್ಕ ಕೆಲಸದ ಜೊತೆಯಲ್ಲಿ, ಏನು ಸನ್ಮಾನ್ಯ ಅಶೋಕ್ ಅವರು ಆಗಿರಬಹುದು, ನಾವಾಗಿರಬಹುದು, ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು ಅವರು ಆಗಿರಬಹುದು, ನಮ್ಮ ಬೆಂಗಳೂರಿನ ಅನೇಕ ಶಾಸಕರು ಯಾರು ಇದ್ದೇವೆ? ಮಾನ್ಯ ದಿನೇಶ್ ಅವರ ಆದಿಯಾಗಿ ನಮ್ಮೆಲ್ಲರ ಮನವಿ ಇಷ್ಟೇನೆ. ಈ SEZ ಅನ್ನು, ಈ ಉಪನಗರಗಳನ್ನು, ಬೆಂಗಳೂರು ನಗರದ ವ್ಯಾಪ್ತಿಯಲ್ಲಿಯೇ ಮಾಡತಕ್ಕಂತಹದು ಅವಶ್ಯಕತೆ ಇದೆಯೇ ಎಂಬುದನ್ನು ತಾವು ಚಿಂತನೆ ಮಾಡಬೇಕಾಗಿದೆ. ಬೆಂಗಳೂರು ನಗರದ ಕೆಂಗೇರಿ ಉಪನಗರ ಇರಬಹುದು, ಯಲಹಂಕ ಉಪನಗರ ಇರಬಹುದು. ಪ್ರಾಯಶಃ ಇವೆರಡನ್ನೂ ಮಾಡಿ 25–30 ವರ್ಷ ಆಯಿತು. 25–30 ವರ್ಷಗಳ ನಂತರ ಇವರಿಗೆ ನಾವು ನೀರು ಕೊಟ್ಟಿದ್ದು ಮೊನ್ನೆ. ಸುಮಾರು ಎರಡು ಮೂರು ವರ್ಷದ ಹಿಂದೆ ನಾವು ಅವರಿಗೆ ನೀರು ಕೊಟ್ಟೆವು. ಇನ್ನೂ ಕೂಡ ಸರಿಯಾದಂತಹ ಸವಲತ್ತುಗಳನ್ನು ಕೊಟ್ಟಿಲ್ಲ. ಇಂತಹ ಸಂದರ್ಭದಲ್ಲಿ ಬೆಂಗಳೂರು ನಗರದ ಆಜು ಬಾಜಿನಲ್ಲಿ ಲಕ್ಷಾಂತರ ಜಮೀನುಗಳನ್ನು ವಶಪಡಿಸಿಕೊಂಡು ಯಾವ ಪುರುಷಾರ್ಥಕ್ಕೋಸ್ಕರವಾಗಿ ಈ ಒಂದು ವ್ಯವಸ್ಥೆ ಇವತ್ತು ಕಾರ್ಯರೂಪಕ್ಕೆ ತರುತ್ತಿದ್ದಾರೋ ನಮಗೆ ಮನವರಿಕೆ ಆಗುತ್ತಿಲ್ಲ. ಸಾಕಷ್ಟು ಜನ ಏನೇನು ಮಾತನಾಡಬೇಕು? ಇಲ್ಲಿರತಕ್ಕಂಥ ತೊಂದರೆಗಳೇನು? ನ್ಯೂನ್ಯತೆಗಳೇನು ಎಂದು ಸವಿಸ್ತಾರವಾಗಿ ತಿಳಿಸಿದ್ದಾರೆ. ನಾನು

ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂಥದ್ದು ಏನು ಇವತ್ತು SEZ ನಲ್ಲಿ ತಾವು ಯಾರಿಗೆ ಜಮೀನು ಕೊಡಬೇಕು ಎಂದು ಇದ್ದೀರಿ? Gokuldas Exports ನವರು. ಇವರಿಗೆ 400 ಎಕರೆ ಎಂದು ಹೇಳುತ್ತೀರಿ. Gandhi city ಮತ್ತು Advanced Reaserch ಗೆ ಒಂದು ಸಾವಿರ ಎಕರೆ ಎಂದು ಹೇಳುತ್ತೀರಿ. ಮತ್ತು ಇನ್ನಿತರರು Aero Space ಗೆ 1069 ಎಕರೆ. Adarsha Private project ನವರಿಗೆ 1382 ಎಕರೆ. TCSನವರಿಗೆ 100 ಎಕರೆ. ಹೀಗೆ ಸುಮಾರು ಎಕರೆಗಳನ್ನು ಕೊಡುತ್ತಿರತಕ್ಕ ಜನರು ಯಾರು ಇದ್ದಾರೆ? ಈ ಗೋಕುಲ್ ದಾಸ್‌ನವರು ಬಟ್ಟೆಗಳನ್ನು, ಉಡುಪನ್ನು ತಯಾರು ಮಾಡತಕ್ಕಂಥ ಒಂದು ಸಂಸ್ಥೆ. ಈಗಾಗಲೇ ಬೆಂಗಳೂರು ನಗರದಲ್ಲಿ ಅವರಿಗೆ ಸಾಕಷ್ಟು ಭೂಮಿ ಇದೆ. ಇದನ್ನು ಇವರೇನು ತೆಗೆದುಕೊಳ್ಳುತ್ತಿದ್ದಾರೆ ನಮ್ಮಪ್ಪನ್ನಾಣೆ ಆ ಜಾಗಕ್ಕೆ 50 ವರ್ಷವಾದರೂ ಇವರು ಹೋಗುವವರಲ್ಲ. ಇವರು ಈ ಜಾಗವನ್ನು ಪಡೆಯತಕ್ಕಂತಹದ್ದು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ತಮಗೂ ಗೊತ್ತಿದೆ, ಗೋಕುಲ್‌ದಾಸ್ ಯಾರು ಏನು ಎಂದು ಗೊತ್ತಿದೆ. ಅವರು ಒಂದು export ಮಾಡತಕ್ಕವರು. ಬೆಂಗಳೂರು ನಗರದಲ್ಲಿ 25, 30 ಕಡೆ ಅವರಿಗೆ ಜಾಗ ಇದೆ. ಈ ಜಾಗವನ್ನು ಇವರು ಪಡೆಯತಕ್ಕದ್ದು ಹಣವನ್ನು ಇಲ್ಲಿ ವಿನಿಯೋಗ ಮಾಡಿ ಇನ್ನು 10,15,20 ವರ್ಷಕ್ಕೆ ಹತ್ತಾರು ಕೋಟಿ, ನೂರಾರು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಮಾಡತಕ್ಕದ್ದಕ್ಕೆ, ಭೂಮಿಯ ಬೆಲೆ ಏನು ಇದೆ? ಅದನ್ನು ಮಾರತಕ್ಕದ್ದಕ್ಕೆ ಇದು ಆಗಿದೆ. ಇನ್ನು ಆದರ್ಶ ಬಿಲ್ಡರ್ಸ್. ಇವರು ಈಗಾಗಲೇ ಸುಮಾರು ವಿಲ್ಲಾಗಳನ್ನು ಮಾಡಿದ್ದಾರೆ. ಬೆಂಗಳೂರು ಸುತ್ತಮುತ್ತ ಹತ್ತಾರು ವಿಲ್ಲಾಗಳನ್ನು ಮಾಡಿದ್ದಾರೆ. ಹತ್ತಾರು apartment ಗಳನ್ನು ಕಟ್ಟಿದ್ದಾರೆ. ಇವರು ಯಾವ ಫ್ಯಾಕ್ಟರಿಗಳನ್ನು ತೆರೆಯುತ್ತಾರೋ ನನಗೆ ಗೊತ್ತಿಲ್ಲ. ನನಗೂ ಅವರು ಸ್ನೇಹಿತರೇ, ನಮ್ಮ ಊರಿನ ಪಕ್ಕದವರೇ. ನಾನು ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ, ಅವರಿಗೆ ಯಾರು ಈ ರೀತಿ ಹೇಳಿ ಕೊಟ್ಟರೋ ನನಗೆ ಗೊತ್ತಿಲ್ಲ. ಸ್ವಾಮಿ ತಾವು ಬೃಹತ್ ಬೆಂಗಳೂರು ಮಾಡಿದ್ದೀರಿ. ನಾವು ನಮಗೆ ಆಭಾರಿ ಆಗಿದ್ದೇವೆ. ಬೃಹತ್ ಬೆಂಗಳೂರಿಗೆ ತಾವು ನೀರು ಕೊಡಬೇಕಾದರೆ ಇನ್ನೂ 10 ವರ್ಷ ಆ ಛೇರ್‌ನಲ್ಲಿ ಕುಳಿತುಕೊಂಡರೆ ಕಷ್ಟ ಆಗುತ್ತದೆ. ಅಂತಹದರಲ್ಲಿ ಇನ್ನು ಕೆಲವೇ ತಿಂಗಳು ಇಟ್ಟುಕೊಂಡು ತಾವ್ಯಾಕೆ ಈ ಶಾಪದ ವ್ಯವಸ್ಥೆಗೆ ಗುರಿ ಆಗುತ್ತೀರಿ? ಈಗ ಮಾನ್ಯ ಸಿಂಧ್ಯಾ ಸಾಹೇಬರು ಮಾತನಾಡಿದರು. ತಪ್ಪು ಮಾಡಿ ಬಿಟ್ಟು ಎಲ್ಲಾ ಆದ ಮೇಲೆ ನನಗೆ ಅರಿವು ಆಗಿದೆ ಎಂದರು. ತಾವು ಅದಕ್ಕೆ ಆಗುವುದು ಬೇಡ. ನೀವಿನ್ನೂ 30–40 ವರ್ಷ ರಾಜಕೀಯದಲ್ಲಿ ತಮ್ಮದೇ ಆದಂತಹ ಪ್ರಭಾವವನ್ನು ಬೀರತಕ್ಕ ವ್ಯವಸ್ಥೆಯನ್ನು

ಮಾಡಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಕೆಲವು ತಾಂತ್ರಿಕ ದೋಷಗಳ ವ್ಯವಸ್ಥೆಯಿಂದ ಕೂಡಿರತಕ್ಕಂತಹ ಈ ಒಂದು ಕೆಲಸ ಏನು ಇದೆ? ಇದಕ್ಕೆ ತಾವು ದಯಮಾಡಿ ಕೈ ಹಾಕಬೇಡಿ. ಇದಕ್ಕೆ ಕೈ ಹಾಕುವುದರಿಂದ ದಯವಿಟ್ಟು ಖಂಡಿತ ಹೇಳುತ್ತೇನೆ. ಇವತ್ತು ನಮ್ಮ ಸುತ್ತಮುತ್ತ ಯಾರು ಇದ್ದಾರೆ? ಇದನ್ನು ಮಾಡಿ ಎಂದು ಹೇಳತಕ್ಕ ಜನರು ಯಾರು ಇದ್ದಾರೆ? ಇವರು ಯಾರು ತಮ್ಮ ಜೊತೆ ಇರುವುದಿಲ್ಲ. ತಮ್ಮ ಜೊತೆಯಲ್ಲಿರುವವರು ಯಾರು ಬಡವರು ಇದ್ದಾರೆ? ಸಾಮಾನ್ಯ ಜನರು ಇದ್ದಾರೆ. ಕೃಷಿ ಕಾರ್ಮಿಕರು ಇದ್ದಾರೆ, ತಮ್ಮ ಒಡನಾಟ ಏನಿದೆ? ಅವರ ಜೊತೆ ಇಲ್ಲಿಯವರೆಗೆ ಏನು ಸಾಗಿದೆ? ಇದಕ್ಕೆ ಎಲ್ಲೋ ಒಂದು ಕಡೆ ತಮ್ಮ ದಾರಿಯನ್ನು ತಪ್ಪಿಸತಕ್ಕದ್ದಕ್ಕೆ ಈ ಒಂದು ವ್ಯವಸ್ಥೆ ಏನು ಇದೆ? ಈ ವ್ಯವಸ್ಥೆಗೆ ತಾವು ದಯಮಾಡಿ ಅಡಿಪಾಯವನ್ನು ಹಾಕತಕ್ಕದ್ದು ಸಮಂಜಸವಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಸನ್ಮಾನ್ಯ ಶ್ರೀರಾಮ ರೆಡ್ಡಿಯವರು ಒಂದು ಮಾತನ್ನು ಹೇಳಿದರು. ಕೇಂದ್ರ ಸರ್ಕಾರದ Act ನಲ್ಲಿ ರಾಜ್ಯ ಸರ್ಕಾರದ ಪಾಲುಗಾರಿಕೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮಾಡಿರತಕ್ಕ ಆಕ್ಟ್ ಏನು ಇದೆ? ಇವೆಲ್ಲವೂ ಕೂಡ ಸಾಮಾನ್ಯರಿಗೆ ಉಪಯೋಗ ಆಗಬೇಕಾಗುತ್ತದೆ. ಕೇವಲ ಬೆಂಗಳೂರು ಒಂದರಿಂದ ಉಪಯೋಗ ಆಗುವುದಿಲ್ಲ. ಚಿತ್ರದುರ್ಗದಲ್ಲಿ ವಾಣಿ ವಿಲಾಸ ಎಂದು ಹೇಳಿ ಒಂದು ದೊಡ್ಡ ಡ್ಯಾಮ್ ಇದೆ. ಚಿತ್ರದುರ್ಗದ ವಿಚಾರ ತಮಗೆ ಗೊತ್ತಿದೆ. ಯಾವ ಮಟ್ಟದಲ್ಲಿ ಆ ಒಂದು ಜಿಲ್ಲೆಯ ಜನ ಜೀವನ ಮಾಡುತ್ತಿದ್ದಾರೆಂದು ತಿಳಿದುಕೊಂಡು ತಾವು ಅಲ್ಲಿಗೆ ತೆಗೆದುಕೊಂಡು ಹಾಕಿದರೆ ಸನ್ಮಾನ್ಯ ಕುಮಾರಸ್ವಾಮಿ ಅವರ ಕಾಲದಲ್ಲಿ ಆ ಇಡೀ ಜನ ಒಪ್ಪಿಕೊಳ್ಳುತ್ತಾರೆ. ತಮ್ಮನ್ನು ಅಭಿನಂದಿಸುತ್ತಾರೆ. ಅದನ್ನು ಬಿಟ್ಟರೆ ತಾವು ತುಮಕೂರಿಗೆ ಮಾಡಿ. ಈಗಾಗಲೇ ತಮಗೆ ಗೊತ್ತಿದೆ. ಇಲ್ಲಿಯವರೆಗೆ ಪಡೆದಿರತಕ್ಕಂಥ 20 ಸಾವಿರ ಜನರು ಯಾರು ಇದ್ದಾರೆ? ಕಾರ್ಖಾನೆಗಳಿಗೆ ಎಂದು ಜಾಗವನ್ನು ಪಡೆದಿರತಕ್ಕವರು ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡು ಅವರೇ ತಾವು ಒಂದು ಕೆಲಸ ಮಾಡಿ. ಇಲ್ಲಿಯವರೆಗೂ ಯಾರ್‍ಯಾರು ಜಾಗಗಳನ್ನು ಪಡೆದಿದ್ದಾರೆ? ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು review ಮಾಡಲಿ. ಆ ರಿವ್ಯೂ ಮಾಡುವಾಗ ಯಾರ್‍ಯಾರು ನೂರಾರು ಎಕರೆ, ಸಾವಿರಾರು ಎಕರೆ ಪಡೆದಿದ್ದಾರೆ? ಅದರ ಉಪಯೋಗ ಆಗಿದೆಯೇ? ಇವತ್ತು ತಮಗೇ ಗೊತ್ತಿದೆ. ಇವತ್ತು ಬಿಡದಿಯಲ್ಲಿರತಕ್ಕ Industial estate ನಲ್ಲಿ, KIADB ನವರು 15-20 ವರ್ಷ ಆಯಿತು. ಕೇವಲ ಕೆಲವು ಕಾರ್ಖಾನೆಗಳನ್ನು ಬಿಟ್ಟರೆ, ಬಾಕಿ ಎಲ್ಲಾ ಖಾಲಿ ಜಾಗವನ್ನು ಇಟ್ಟುಕೊಂಡಿದ್ದಾರೆ. ತಾವು ದಾಬಸ್‌ಪೇಟೆಗೆ ಹೋದರೆ

ಅಲ್ಲಿ 15-16 ಕಾರ್ಖಾನೆಗಳಿವೆ. ಸಾವಿರಾರು ಎಕರೆಗಳು ಖಾಲಿ ಇವೆ. ಅದೇ ರೀತಿ ತಾವು ಬೇರೆ ಬೇರೆ ವಿಭಾಗಗಳಿಗೆ ಹೋದರೆ, Electronic Cityಗೆ ಹೋದರೆ, ಎಲ್ಲೆಲ್ಲಿ industries ಮಾಡಿದ್ದಾರೋ, ಬೆಂಗಳೂರು ಸುತ್ತಮುತ್ತಲೂ ಸ್ಥಾಪಿಸಿರುವ industriesಗೆ ಒಬ್ಬನೇ ಯಜಮಾನ ಇರುತ್ತಾನೆ. ಆದರೆ, ಬೋರ್ಡ್‌ಗಳು ಬೇರೆ ಬೇರೆ ಇರುತ್ತವೆ. ಇಲ್ಲೂ ಕೂಡ ಅದೇ ರೀತಿ ಆಗಿದೆ. ಕಟ್ಟಾ ಸುಬ್ರಮಣ್ಯನಾಯ್ಡುರವರೆ, ಯಜಮಾನ ಒಬ್ಬನೇ ಇರುತ್ತಾನೆ. ಮ್ಯಾನೇಜ್‌ಮೆಂಟ್ ಸಹ ಒಂದೇ ಇರುತ್ತದೆ. ಆದರೆ, ಬೇರೆ ಬೇರೆ ಹೆಸರುಗಳಲ್ಲಿ , ಬೇರೆ ಬೇರೆ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಸಾವಿರಾರು ಎಕರೆಗಳನ್ನು ಪಡೆಯುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರಿಗೆ ರಾಜ್ಯದ ಬಡವರ ಬಗ್ಗೆ ಅಪಾರ ಗೌರವವಿದೆ ಎನ್ನುವ ಭಾವನೆ ನನಗಿದೆ. ತಾವು ಏಕೆ ಇದನ್ನು ಮಾಡುತ್ತಿದ್ದೀರಿ? ಇದೊಂದು ಕೂಪ ಮಂಡೂಕದ ವ್ಯವಸ್ಥೆ. ಈ ಕೂಪ ಮಂಡೂಕದ ವ್ಯವಸ್ಥೆಯಲ್ಲಿ ತಾವು SEZ ಮಾಡುವ ಮುನ್ನ ಇಲ್ಲಿಯವರೆಗೂ ಬೆಂಗಳೂರಿನ ಸುತ್ತಮುತ್ತಲೂ ಇರತಕ್ಕಂಥ KIADBಗೆ ಕೊಟ್ಟಿರುವ ಜಾಗಗಳು, ಪಡೆದಿರುವವರು ಯಾರ್‍ಯಾರು, ಆ ಜಾಗಗಳು ಉಪಯೋಗವಾಗಿವೆಯೇ? ಎಷ್ಟು ಸಾವಿರ ಎಕರೆಗಳು ಉಪಯೋಗವಾಗಿವೆ? ಇನ್ನೆಷ್ಟು ಸಾವಿರ ಎಕರೆಗಳು ಖಾಲಿ ಇವೆ? ಮತ್ತು ಅವರು ಯಾವ ರೀತಿಯಲ್ಲಿ ಅರ್ಜಿಗಳನ್ನು ಹಾಕಿಕೊಂಡು ಈ ಜಾಗಗಳನ್ನು ಪಡೆಯುತ್ತಿದ್ದಾರೆ? ಇದರ ಬಗ್ಗೆ ತಾವು ಮನಸ್ಸಿಗೆ ತಂದುಕೊಂಡು, ಅಧಿಕಾರಿಗಳನ್ನು ಕರೆಸಿ, ಸತ್ಯವನ್ನು ಹೊರತರುವುದಕ್ಕೆ ತಾವು ಚಿಂತನೆ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ತಮಗೆ ಗೊತ್ತಿದೆ. ಸನ್ಮಾನ್ಯ ಅಧ್ಯಕ್ಷರೆ, KIADB ಯವರು acquire ಮಾಡುವ ಮುನ್ನವೇ ರೈತರುಗಳ ಹತ್ತಿರ ಬ್ರೋಕರ್‌ಗಳು ಜಮೀನನ್ನು GPA ಮಾಡಿಕೊಂಡಿದ್ದಾರೆ. ಅವರು ಏನು ಮಾಡುತ್ತಾರೆಂದರೆ, ಆ ರೈತರುಗಳ ಮೇಲೆ ಪ್ರಭಾವ ಬೀರಿ 10 ಸಾವಿರ, 15 ಸಾವಿರ, 20 ಸಾವಿರ ರೂಪಾಯಿಗಳಿಗೆ ಜಮೀನು ತೆಗೆದುಕೊಂಡು, ತದನಂತರ, ಈ ಜಮೀನನ್ನು KIADB ಗೆ ಕೊಡುವಾಗ ಇನ್ನೊಬ್ಬರ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸುತ್ತಾರೆ. ಇದೊಂದು ದೊಡ್ಡ ದಂಧೆಯಾಗಿ ಪರಿಣಮಿಸಿದೆ. ಬಿಡದಿಯಲ್ಲಿ ನಡೆದದ್ದೂ ಇದೇ, Electronic City ಯಲ್ಲಿ ನಡೆದದ್ದೂ ಇದೇ, ಬೇರೆ ಬೇರೆ ರೂಪಗಳಲ್ಲಿ ನಡೆದಿರುವುದೂ ಇದೇ ಆಗಿದೆ. ಕಟ್ಟಾ ಸುಬ್ರಮಣ್ಯ ನಾಯ್ಡುರವರೆ, ತಮಗೆ ಗೊತ್ತಿದೆ. ಇದನ್ನು ಯಾವ ರೀತಿ ಬಗೆಹರಿಸುತ್ತೀರಿ ಎಂಬುದರ ಬಗ್ಗೆ ತಾವು ಚಿಂತನೆ ಮಾಡಬೇಕಾಗುತ್ತದೆ. ಈಗಾಗಲೇ ಬೆಂಗಳೂರು ನಗರಕ್ಕೆ CDP ಕೊಟ್ಟಿದ್ದೀರಿ. 2005ರಲ್ಲಿ ಕೊಡಬೇಕಾಗಿದ್ದ CDP ಯನ್ನು ತಾವು

ತಮ್ಮ ಅವಧಿಯಲ್ಲಿ ಕೊಟ್ಟು, ಬೆಂಗಳೂರು ನಗರವನ್ನು ಯಾವ ರೀತಿ ಇಡಬೇಕೆಂಬ ಬಗ್ಗೆ ತಾವು ಯೋಚಿಸಿದ್ದೀರಿ? ಬೆಂಗಳೂರು ನಗರದಲ್ಲಿ ಕುಡಿಯುವ ನೀರು ಇನ್ನಿತರ ಮೂಲಭೂತ ಸೌಕರ್ಯಗಳಿಗೆ ಒತ್ತು ನೀಡುತ್ತೀರಾ? ನಂದಗುಡಿಗೆ ನೀರು ಕೊಡುತ್ತೀರಾ? ಇಲ್ಲವೇ, ಉಪನಗರಗಳಿಗೆ ನೀರು ಕೊಡುತ್ತೀರಾ? ಬೇರೆ ಬೇರೆ ರೂಪಗಳಲ್ಲಿ ಕೊಡುತ್ತೀರಾ? ಇದಕ್ಕೆ ತಮ್ಮ ಕಾಲದ ಪರಿಮಿತಿ ಏನು? ಇದೆಲ್ಲದರ ಚಿಂತನೆ ಮಾಡುವುದನ್ನು ಬಿಟ್ಟು, ತಾವು ಏತಕ್ಕೋಸ್ಕರ ಇದನ್ನು ತೆಗೆದುಕೊಂಡಿದ್ದೀರೋ, ಗೊತ್ತಿಲ್ಲ. ಒಂದು ಸತ್ಯದ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಹೋಸಕೋಟೆ ತಾಲ್ಲೂಕಿನ ನಂದಗುಡಿ ಪಕ್ಕದ ಒಂದು ಗ್ರಾಮಕ್ಕೆ ನಾನು ಹೋಗಿದ್ದೆ. ಅಲ್ಲಿ 20 ಗುಂಟೆಗಳಷ್ಟು ಜಮೀನು ಇರುವ ಒಂದು ಕುಟುಂಬ ಇದೆ. ಅದು ತಿಗಳ ಸಮಾಜಕ್ಕೆ ಸೇರಿರುವ ಸಾಮಾನ್ಯ ಕುಟುಂಬವಾಗಿದೆ. ನಾನು ಆ ಕುಟುಂಬದ ಹೆಣ್ಣುಮಗಳನ್ನು ಉದ್ದೇಶಿಸಿ, ಇಲ್ಲಿ ಏನು ಮಾಡುತ್ತಿರೆಂದು ಕೇಳಿದಾಗ, ಅಣ್ಣಾ, ನಾವು ಇಲ್ಲಿ ಕೋಸು ಬೆಳೆಯುತ್ತೇವೆ, ಮೆಣಸಿನಕಾಯಿ ಬೆಳೆಯುತ್ತೇವೆ, ತರಕಾರಿಗಳನ್ನು ಬೆಳೆಯುತ್ತೇವೆ, ಹೂಗಳನ್ನು ಬೆಳೆಯುತ್ತೇವೆ. ನಮ್ಮ ಮನೆಯಲ್ಲಿ 23 ಜನರಿದ್ದಾರೆ. ಈ 23 ಜನರೂ 20 ಗುಂಟೆಗಳಷ್ಟೂ ಜಾಗದಿಂದ ಉತ್ಪನ್ನದಿಂದ ಜೀವನ ಮಾಡುತ್ತಿದ್ದೇವೆ, ನಾವು ನೆಮ್ಮದಿಯಿಂದಿದ್ದೇವೆ. ಇಲ್ಲಿಂದ ನಮ್ಮನ್ನೂ ಏನಾದರೂ ತೆಗೆದು ಹಾಕಿದಲ್ಲಿ, ನಮ್ಮ ಗತಿಯೇನು? ಎಂದರು. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹೇಳಿದಂತೆ, SEZ ಅನ್ನು ಕೋಲಾರಕ್ಕೆ ತೆಗೆದುಕೊಂಡು ಹೋಗಿ ಹಾಕಿ, ಮತ್ತೊಂದು ಕಡೆ ಹಾಕಿ. ಈ SEZ ಏನಿದೆ, ಮತ್ತೊಂದು ಏನಿದೆ, ದೊಡ್ಡ ದೊಡ್ಡ ಶ್ರೀಮಂತರು ಯಾರಿದ್ದಾರೆ, ಇವರ್ಯಾರು ನಿಮ್ಮ ಜೊತೆಯಲ್ಲಿ ಇರುವವರಲ್ಲ. ನಿಮ್ಮ ಜೊತೆಯಲ್ಲಾಗಲಿ, ನಿಮ್ಮ ಇತಿಹಾಸವಾಗಲಿ, ಇಂತಹವರ ಜೊತೆಯಲ್ಲಿ ಒಡನಾಟವಿರುವುದಿಲ್ಲ. ಈ ಒಡನಾಟಕ್ಕೆ ತಾವು ಏಕೆ ಕೈ ಹಾಕಿದಿರಿ? ಇದರ ಅವಶ್ಯಕತೆ ಏನದೆ? ಇದರ ಸಾಧಕ–ಬಾಧಕ ಏನು ಎಂಬುದನ್ನು ಚಿಂತನೆ ಮಾಡಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಮುಖ್ಯಮಂತ್ರಿಗಳಾಗಿರುವ ಕುಮಾರಸ್ವಾಮಿಯವರು, ನಾವೆಲ್ಲರೂ ಆತ್ಮೀಯರಾಗಿ ಇವತ್ತಿಗೂ ಕೂಡ ಇರತಕ್ಕಂತಹವರು. ಆದರೆ, ಇವತ್ತು ಏನಾಗಿದೆ? ಇನ್ನು ಕೇವಲ 60–65 ದಿವಸಗಳಲ್ಲಿ ಅವರು ಅಧಿಕಾರ ಹಸ್ತಾಂತರ ಮಾಡುತ್ತಾರೆನ್ನುವುದು ಇಡೀ ದೇಶಕ್ಕೆಲ್ಲಾ ಗೊತ್ತಿದೆ. ಅದು ಬಿಟ್ಟು ಕೊನೇ ಗಳಿಗೆಯಲ್ಲಿ ತಾವೇಕೆ ಇಂತಹ ತಪ್ಪುಗಳನ್ನು ಮಾಡಬೇಕು?

ಯಾರಿಗೋಸ್ಕರ? ನಿಮಗೆ ಅದರ ಅವಶ್ಯಕತೆಯಿಲ್ಲ. ನಿಮ್ಮ ಕುಟುಂಬಕ್ಕೂ ಇಂತಹ ಅವಶ್ಯಕತೆಯಿಲ್ಲ. ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ಒಬ್ಬ ಸ್ನೇಹಿತನಾಗಿಯಲ್ಲ, ನಾನೂ ಕೂಡ ನಿಮ್ಮ ಒಬ್ಬ ಅಭಿಮಾನಿಯಾಗಿ ಕೇಳುತ್ತೇನೆ. ಇದಕ್ಕೆ ತಾವು ಕೈಹಾಕುವಂಥಾದ್ದು ಸಮಂಜಸವಾದುದಲ್ಲ. ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಈಗಾಗಲೇ ಸುಮಾರು ವರ್ಷಗಳಿಂದ ಕೊಟ್ಟಿರತಕ್ಕಂಥ....

ಶ್ರೀ ಬಿ.ಎಸ್. ಹೊರಟ್ಟಿ: ಅಭಿಮಾನಿಗಳು ಎಂದರೆ, ಇವತ್ತಿನ ಅಭಿಮಾನಿಗಳೋ? ಹಿಂದಿನ ಅಭಿಮಾನಿಗಳೋ?

ಶ್ರೀ ವಿ. ಸೋಮಣ್ಣ: ಸ್ವಾಮಿ, ಅಧಿಕಾರ ಹೋದ ಮೇಲೆ ನೀವೆಲ್ಲರೂ ಅವರ ಹತ್ತಿರವೂ ಸುಳಿಯುವುದಿಲ್ಲ. ಅದು ಒತ್ತಟ್ಟಿಗಿರಲಿ. ಅದರ ಬಗ್ಗೆ ಚರ್ಚೆ ಮಾಡೋಣ. ಅದಕ್ಕೋಸ್ಕರ, ಅದು ಬೇಡ. ಸ್ನೇಹವೇ ಬೇರೆ, ರಾಜಕೀಯವೇ ಬೇರೆ. ಅದು ಇರಲಿ, ತಪ್ಪೇನಲ್ಲ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಈಗಾಗಲೇ ಸುಮಾರು ವರ್ಷಗಳಿಂದ ಕೊಟ್ಟಿರುವ ಜಾಗಗಳೇನಿವೆ, ಇದನ್ನು ಸರ್ವೆ ಮಾಡಿಸಿ, action ತೆಗೆದುಕೊಂಡರೆ, ಈ SEZ ಬೇಕಾಗಿಲ್ಲ. ಈಗ ಯಾರ್‍ಯಾರು ನಿಮಗೆ ಅರ್ಜಿಗಳನ್ನು ಹಾಕಿದ್ದಾರೋ, ಯಾರ್‍ಯಾರು ಇಪ್ಪತ್ತು ವರ್ಷಗಳಿಂದ ಜಾಗಗಳನ್ನು ಪಡೆದುಕೊಂಡು ಹಾಗೇ ಸುಮ್ಮನೆ ಇಟ್ಟುಕೊಂಡಿದ್ದಾರೆ, ಅಂತಹವುಗಳನ್ನು ಕಿತ್ತು ಹಾಕಿ, ಅವರಿಗೆ ಕೊಡಿ, ಮಾಡಲಿ. ನಾವು ಬೇಡವೆಂದು ಹೇಳುವುದಿಲ್ಲ. ಅದರ ಜೊತೆಗೆ, ಇವತ್ತು ಒಕ್ಕಲೆಬ್ಬಿಸುವ ಕೆಲಸವೇನದೆ, ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಇಡೀ ಊರುಗಳನ್ನೇ ಬೇರೆಡೆ ಸ್ಥಳಾಂತರಿಸುವಾಗ ಅವರ ದನಕರುಗಳು, ಕುರಿ, ಮೇಕೆಗಳು, ಶಾಲಾ-ಕಾಲೇಜುಗಳು, ಆಸ್ಪತ್ರೆಗೆ 6 ಚದರದಲ್ಲಿ ಮನೆ ಕಟ್ಟಿಕೊಟ್ಟರೆ, ಒಬ್ಬ ರೈತ ಎಲ್ಲಿ ವಾಸ ಮಾಡುತ್ತಾನೆ? ಏತಕ್ಕೋಸ್ಕರ, ತಮಗೆ ಈ ಕುರಿತಾದ ಚಿಂತನೆ ಬರುತ್ತಿದೆಯೋ, ಗೊತ್ತಿಲ್ಲ. ನಾನು ನೋಡಿದ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಬೇರೆ, ಈ ತೀರ್ಮಾನ ಕೈಗೊಳ್ಳುವ ಕುಮಾರಸ್ವಾಮಿಯೇ ಬೇರೆ ಆಗುವುದು ಬೇಡ ಸ್ವಾಮಿ. ಆದುದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ತಾವು ಮಾಡಬೇಕಾಗಿರುವ ಪ್ರಮುಖವಾದ ಕೆಲಸ ತಾವು ಏನೇನು ಮಾಡುತ್ತೀರೋ, ಗೊತ್ತಿಲ್ಲ. Electronic City ಯಲ್ಲಿ ಎಷ್ಟಿದೆ? White Field ಜಾಗದಲ್ಲಿ ಯಾರ್‍ಯಾರು ಪಡೆದುಕೊಂಡಿದ್ದಾರೆ, ಇವರ್‍ಯಾರೂ ಕರ್ನಾಟಕದವರಲ್ಲ. ಇವರೆಲ್ಲರೂ ಬೇರೆ ಬೇರೆ ರಾಜ್ಯದವರು. ಇವರು ಇಲ್ಲೂ ಇದ್ದಾರೆ, ಮುಂಬೈನಲ್ಲಿರುತ್ತಾರೆ, ಇನ್ನೊಂದು ಕಡೆಗಳಲ್ಲೂ

ಇರುತ್ತಾರೆ, ಇಡೀ ವಿಶ್ವದಲ್ಲಿದ್ದಾರೆ. ಯಾರೋ ಹಣ ಮಾಡುವ ಜನರಿಗೆ, ನಾವು ನಮ್ಮ ಜನರ, ಬಡವರ, ಸಾಮಾನ್ಯ ಜನರ, ಕೃಷಿ ಕಾರ್ಮಿಕರ ವ್ಯವಸ್ಥೆಗೆ ಧಕ್ಕೆ ತರುವ ಕೆಲಸ ಮಾಡಿ, ಅವರಿಗೆ ಅನಾನುಕೂಲ ಮಾಡುವುದು ಸಮಂಜಸವಾದುದಲ್ಲ. ಇವತ್ತು civic amenities ಕೊಡುವ ದೃಷ್ಟಿಯಲ್ಲಿ ಬೆಂಗಳೂರು ನಗರಕ್ಕೆ, ಬೆಂಗಳೂರು ನಗರದ ಸರಹದ್ದಿಗೆ ಏನು ಇವತ್ತು ಮೆಟ್ರೋ, ಮಾನೋ ತರುತ್ತಿದ್ದೇವೆ, ಕಾವೇರಿ ನಾಲ್ಕನೇ ಹಂತ...ಇದನ್ನು ಬಿಟ್ಟರೆ ಬೇರೆಲ್ಲೂ ಏನೇನೂ amenities ಇಲ್ಲ. ಇವತ್ತಿನ Tribunal ತೀರ್ಮಾನದಂತೆ ಬೆಂಗಳೂರು ನಗರಕ್ಕೆ ನೀವು ಕಾವೇರಿ ನೀರನ್ನು ಕೊಡುತ್ತೀರಾ? ಉಪ ನಗರಗಳಿಗೆ ಕೊಡುತ್ತೀರಾ? ಕಾರ್ಖಾನೆಗಳಿಗೆ ಕೊಡುತ್ತೀರಾ? ಏನು ಮಾಡಬೇಕೆಂದಿದ್ದೀರಿ? ಇವೆಲ್ಲದರ ಸಾಧ್ಯಾಸಾಧ್ಯತೆಗಳನ್ನು ನೀವು ಚಿಂತನೆ ಮಾಡಿ, ಇದನ್ನು ತೆಗೆದುಕೊಳ್ಳುವ ಮುಂಚೆ ಬಡವರ ಬಗ್ಗೆ ಅಪಾರ ಗೌರವವೇನಾದರೂ ತಮಗಿದ್ದಲ್ಲಿ, ತಾವು ದಯವಿಟ್ಟು ಸಾಮಾನ್ಯ ಜನರ ಅನುಕೂಲತೆಗಳಿಗೆ ಧಕ್ಕೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ನೆ.ಲ.ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ರೈತರನ್ನು ಸಮಾಧಿ ಮಾಡುವುದಕ್ಕೆ ಹೊರಟಿರುವ ಈ ಯೋಜನೆ ಬಗ್ಗೆ ಮಾತನಾಡುವುದಕ್ಕೆ ದಯಮಾಡಿ ಅವಕಾಶ ಕಲ್ಪಿಸಿಕೊಡಬೇಕು.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಸಹಕರಿಸಿ. ಪ್ರತಿ ದಿವಸ ಏಕೆ ಈ ತರಹ ಮಾಡುತ್ತೀರಿ? ಬಹಳ ದಿವಸಗಳಾಯಿತು. ಇನ್ನು ಬೇರೆ ಬೇರೆ subjects ಇವೆ. ಈಗ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.... ಈಗ ಸಮಯವಿಲ್ಲ. ಬೆಳಗ್ಗೆ ಮತ್ತೆ ಕರ್ನಾಟಕ-ಹೈದ್ರಾಬಾದ್ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಚರ್ಚೆ ಇದೆ. ಶ್ರೀನಿವಾಸಗೌಡರೆ, ತಾವು ಎಲ್ಲ ವಿಚಾರಗಳಲ್ಲೂ...

ಶ್ರೀ ಕೆ. ಶ್ರೀನಿವಾಸಗೌಡ: ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ. ನಾನು ಹತ್ತು ನಿಮಿಷಗಳ ಮೇಲೆ ಮಾತನಾಡುವುದಿಲ್ಲ.

ಅಧ್ಯಕ್ಷರು: ಈ ತರಹ ಎಳೆದುಕೊಂಡು ಹೋದರೆ, ಇದು ಯಾರಿಗೂ ಗೌರವ ತರುವುದಿಲ್ಲ. ತಾವು ಐದು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಕೆ. ಶ್ರೀನವಾಸಗೌಡ: ನಿಯಮ 69ರ ಅಡಿಯಲ್ಲಿ SEZ ವಿಷಯದಲ್ಲಿ ಏನು ಪ್ರಸ್ತಾವ ತಂದಿದ್ದೀರಿ. ಇವತ್ತು ಬೆಂಗಳೂರು ಸುತ್ತಮುತ್ತಲೂ ತರುವಂತಹ SEZ ಅನ್ನು...

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ನಮಗೂ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು: ನೋಡಿ, ಈ ರೀತಿಯ ವ್ಯವಹಾರ ಚೆನ್ನಾಗಿರುವುದಿಲ್ಲ. ತಾವು ಕುಳಿತುಕೊಳ್ಳಿ. ಅವರಿಗೆ ನಾನು ಮಾತನಾಡಲು ಅವಕಾಶ ಕೊಟ್ಟಿದ್ದೇನೆ, ತಾವು ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ: ನೀವು ಬೆಂಗಳೂರು ಸುತ್ತಮುತ್ತಲೂ ತಂದ SEZ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ. ಅದನ್ನು AEZ ಮಾಡಿ. ಅಂದರೆ Agriculture Economic Zone ಎಂದು ಮಾಡಿ. ನೀವು Special Economic Zone ಮಾಡಿದರೆ ಕೇವಲ Industries, real estates ಬೆಳೆಯುತ್ತವೆಯೇ ವಿನಾ ಇದರಿಂದ ವ್ಯವಸಾಯಕ್ಕೆ ತೊಂದರೆಯಾಗುತ್ತದೆ. ಈಗಾಗಲೇ ಈ ರಾಜ್ಯದಲ್ಲಿ ಕೃಷಿಯಿಂದ ಶೇಕಡ 66.6 ರಷ್ಟು employment ಸಿಗುತ್ತಿದೆ. ಇವತ್ತು ನೀವು ಲಕ್ಷಾಂತರ ಎಕರೆಗಳಷ್ಟು ಕೃಷಿ ಭೂಮಿಯನ್ನು, ಅದರಲ್ಲೂ ಬೆಂಗಳೂರು ಸುತ್ತಮುತ್ತಲಿರುವ ಫಲವತ್ತಾದ ಭೂಮಿ ಏನಿದೆ, ಈ ಫಲವತ್ತಾದ ಭೂಮಿಯನ್ನು ನೀವೇನಾದರೂ SEZ ಗಾಗಿ ಕೊಟ್ಟಲ್ಲಿ, ಕೃಷಿಯಿಂದ ಏನು ಉತ್ಪತ್ತಿಯಾಗುತ್ತಿತ್ತು, ಅದು ಕಡಿಮೆಯಾಗುತ್ತದೆ. ಅದಕ್ಕೋಸ್ಕರ, ತಮ್ಮ ಮೂಲಕ ನಾನು ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ. Agriculture Economic Zone ಎಂದು ಮಾಡಿ. ಇವತ್ತು ನೀವು ಹೋಸಕೋಟೆಯ ನಂದಗುಡಿಯಲ್ಲಿ ಏನು SEZ ಮಾಡಬೇಕೆಂದಿದ್ದೀರಿ, ಅಲ್ಲಿ Agriculture Economic Zone ಮಾಡಿದರೆ, ಇಡೀ ಆ ಭಾಗದ 2–3 ಜಿಲ್ಲೆಗಳಿಗೆ ಉಪಯೋಗವಾಗುತ್ತದೆ. ಅದು ಬೆಂಗಳೂರು ಗ್ರಾಮಂತರ ಇರಬಹುದು, ಕೋಲಾರ ಇರಬಹುದು, ರಾಮನಗರ ಹೊಸಜಿಲ್ಲೆ ಆಗಬಹುದು, ಚಿಕ್ಕಬಳ್ಳಾಪುರ ಕೂಡ ಜಿಲ್ಲೆಯಾಗುತ್ತಿದೆ. Agriculture Economic Zone ಗೆ ಅದ್ಯತೆಗಳನ್ನು ಕೊಟ್ಟರೆ ರೈತನ ಜೀವನ ಕೂಡ ಹಸನಾಗಿ ಸರಿಹೋಗುತ್ತದೆ. ಅವನು ಕೂಡ ಬದುಕುತ್ತಾನೆ. ನಾನು 1990ರಲ್ಲಿ ಮೊದಲನೇ ಸಾರಿ ಚೈನಾ ದೇಶಕ್ಕೆ ಹೋಗಿದ್ದೆನು. ಅಲ್ಲಿ Zimon ಎನ್ನುವ ಒಂದು Stateಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ Special Economic Zone ಎಂದು ಒಂದೊಂದು State ನಲ್ಲಿ ಮಾಡಿದ್ದಾರೆ. ನಿಮಗೆ, ನಮ್ಮ ರಾಜ್ಯದಲ್ಲಿ S.E.Z ಬೆಳೆಯಬೇಕು ಎಂದರೆ ಎಲ್ಲಿ ಕೊಡಬೇಕು? ಡಾ: ನಂಜುಂಡಪ್ಪ ವರದಿ ಪ್ರಕಾರ 39 ಅತೀ ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕು ಮತ್ತು ಮೂರನೇ category ತಾಲ್ಲೂಕುಗಳಲ್ಲಿ ಮಾಡಿ. ಯಾರು ಅದನ್ನು ಬೇಡ ಎನ್ನುವುದಿಲ್ಲ. ಅಲ್ಲಿ ಭೂಮಿ ಸರಿಯಾಗಿದ್ದರೆ ಅದು ಹಿಂದುಳಿಯುವುದಕ್ಕೆ ಸಾಧ್ಯವಿರಲಿಲ್ಲ. ನಮ್ಮ

ಕೋಲಾರ ಜಿಲ್ಲೆಯ ಬಾಗೇಪಲ್ಲಿ ಅತೀ ಹಿಂದುಳಿದ ತಾಲ್ಲೂಕು, ಅಲ್ಲಿ ಮಾಡಿ. ನಮ್ಮ ಮಾನ್ಯ ಧರ್ಮಸಿಂಗ್ ಅವರ ಕ್ಷೇತ್ರ ಕೂಡ ಹಿಂದುಳಿದಂತಹ ತಾಲ್ಲೂಕು ಆಗಿದೆ, ಅಲ್ಲಿ ಮಾಡಿ. ಅಲ್ಲಿರುವಂತಹ ಭೂಮಿ ಕೃಷಿಗೆ ಅಷ್ಟು ಒಳ್ಳೆಯ ಜಮೀನು ಅಲ್ಲದೇ ಇರುವುದರಿಂದ ಅಲ್ಲಿ ನೀವು S.E.Z ಮಾಡಿದರೆ ತಪ್ಪಾಗುವುದಿಲ್ಲ. ಆದರೆ ನೀವು ಭೂಮಿ ಚೆನ್ನಾಗಿದೆ ಅಲ್ಲಿ Agriculture Economic Zone ಮಾಡಿ. ಅಲ್ಲಿ processing units ಹಾಕಿ ಅಲ್ಲಿ after harvesting ಏನೇನು ಸಲಕರಣೆಗಳು ಬೇಕು ಅವುಗಳನ್ನು ಹಾಕುತ್ತಿದ್ದೀರಿ. ಅಲ್ಲಿ ರೈತರಿಗೆ extra ಆದಾಯ ಬರುವಂತಹ ಕೆಲಸಗಳನ್ನು ಬಿಟ್ಟು ನೀವು ಬೆಂಗಳೂರು ಸುತ್ತ ಮುತ್ತ real estateನವರಿಗೆ ಅವಕಾಶ ಮಾಡಿಕೊಡುತ್ತೀರಿ ಎನ್ನುವುದನ್ನು ಬಿಟ್ಟರೆ ಇನ್ನೇನು ಇಲ್ಲ. ನಾನು ಒಂದು ಪತ್ರಿಕೆಯಲ್ಲಿ ನೋಡಿದೆ, ಮಂಗಳೂರಿನಲ್ಲಿ ಖೋಟಾ ನೋಟುಗಳನ್ನು print ಮಾಡುತ್ತಿದ್ದು, ಅವು ನಮ್ಮ ರಾಜ್ಯದಲ್ಲಿ ನುಸುಳಿತ್ತಿದೆ. ಅದು ಯಾವುದಕ್ಕೆ ಎಂದರೆ real estate ವಾಪಾರಕ್ಕೆ. ಇದರ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ನಾನು ಒಂದು ವಾರದ ಹಿಂದೆ ಓದಿದ ಜ್ಞಾಪಕ ಇದೆ. ಈ ರೀತಿ real estate ದಂಧೆ ಇವತ್ತು ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಬೆಂಗಳೂರು ಸುತ್ತಮುತ್ತಲೂ ಒಂದೊಂದು ಎಕರೆಯನ್ನು ಐದು ಕೋಟಿ ರೂಪಾಯಿಯವರೆಗೆ ಮಾರಿ, ನಮ್ಮ ಕೋಲಾರ ಜಿಲ್ಲೆಗೆ ಬಂದು 40 ರಿಂದ 50 ಲಕ್ಷ ರೂಪಾಯಿಗಳಿಗೆ ಕೊಂಡುಕೊಳ್ಳುತ್ತಿದ್ದಾರೆ. ರೈತರಿಗೆ ಯಾರಿಗೂ ಇಲ್ಲಿ ಜಮೀನು ತೆಗದುಕೊಳ್ಳುವುದಕ್ಕೆ ಶಕ್ತಿ ಇಲ್ಲ. ಯಾವ real estate ನವರು ದಂಧೆ ಮಾಡುತ್ತಿದ್ದಾರೆ, ಅವರಿಗೆ ಶಕ್ತಿ ಬಂದಿದೆ ವಿನ: ಇನ್ನು ಮುಂದಿನ ಪೀಳಿಗೆಯಲ್ಲಿ ರೈತರು ಜಮೀನು ಇಟ್ಟುಕೊಳ್ಳುವಂತಹ ಶಕ್ತಿ ದಿನೇ ದಿನೇ ಕುಂದುತ್ತಿದೆ. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು ಎನ್ನುವುದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಇಂತಹ ಪರಿಸ್ಥಿತಿಯಲ್ಲಿ ನೀವು 66.6% employment ಕೊಡಬೇಕಾಗಿರುವಂತಾದ್ದರಲ್ಲಿ ನೀವು ಕೇವಲ ಕೆಲವೇ ಸಾವಿರ ಸಂಖ್ಯೆಯಲ್ಲಿ employment ಕೊಡುವುದಕ್ಕೆ ಸೀಮಿತವಾಗುತ್ತೀರಿ. ಇದರ ಬಗ್ಗೆ ದೃಷ್ಟಿಕೋನ ನೇರವಾಗಿ ಇರಬೇಕು. ನೀವು ಬೆಂಗಳೂರು ಸುತ್ತಮುತ್ತ ಏನು ಮಾಡಬೇಡಿ ಎಂದು ನಾನು ಹೇಳುವವನಲ್ಲ. ಅಲ್ಲಿ Agriculture Economic Zone ಮಾಡಿ. ಅದರಿಂದ ಇಡೀ ರೈತ ಸಮುದಾಯಕ್ಕೆ ಸಹಾಯವಾಗುತ್ತದೆ. ರೈತ ಬೆಳೆಯುತ್ತಾನೆ ಹಾಗೂ ಉದ್ಧಾರವಾಗುತ್ತಾನೆ. ನಮ್ಮ Education Minister ಇಲ್ಲೇ ಇದ್ದಾರೆ. ಉದಾಹರಣೆಗೆ ಶಿವಮೊಗ್ಗದಲ್ಲಿ ರೈತ ಮೆಕ್ಕೆಜೋಳ ಬೆಳೆಯುತ್ತಾನೆ. ಇವತ್ತು ಇಡೀ ದೇಶದಲ್ಲಿ ಮೆಕ್ಕೆಜೋಳ ಬೆಳೆಯುವುದರಲ್ಲಿ ನಮ್ಮ ರಾಜ್ಯ ಮೊದಲನೇ ರಾಜ್ಯ.

ಇದಕ್ಕೆ ನಿಮ್ಮ ಸರ್ಕಾರ ಏನು ಮಾಡಿದ್ದೀರಿ? ರೈತನಗೆ ನಿಮ್ಮ support price ಬಿಟ್ಟರೆ, ಅದನ್ನು ಕೇಂದ್ರ ಸರ್ಕಾರ ಕೂಡ ಕೊಡುತ್ತದೆ. ನಿಮ್ಮ contribution ಏನು? ನಾವು ಯಾವ employment ಅನ್ನು ಜಾಸ್ತಿ ಮಾಡಬೇಕಾಗಿತ್ತು, ಅದರ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಅದಕ್ಕೆ ಕಾರಣವೇನೆಂದರೆ ಅಲ್ಲಿ ರೈತರು ಬೆಳೆ ಬೆಳೆದಾಗ 520 ಅಥವಾ 525 ರೂಪಾಯಿಗೆ ಮಾರುತ್ತಾನೆ, ಕೈ ತೊಳೆದುಕೊಳ್ಳುತ್ತಾನೆ. ಅಲ್ಲಿಗೆ ನಮ್ಮ ಕೆಲಸ ಮುಗಿದುಹೋಯಿತು. ಚುನಾಯಿತ ಪ್ರತಿನಿಧಿಗಳು ಕೂಡ ಇದರಲ್ಲಿ ಪಾಲುದಾರರು ಎನ್ನುವುದನ್ನು ಮರೆಯಬಾರದು. ಬೆಂಗಳೂರು ಸುತ್ತ ಮುತ್ತ ಯಾರದೋ industries ಬಂದುಬಿಟ್ಟರೆ ರೈತನಗೆ ಏನೂ ಆಗುವುದಿಲ್ಲ. ಮಾನ್ಯ ಉಪಮುಖ್ಯಮಂತ್ರಿಗಳಾದ ನಿಮ್ಮ ಜಿಲ್ಲೆಯಿಂದ ಮೂರು ಜನ ಮುಖ್ಯಮಂತ್ರಿಗಳಾದಿರಿ ಎಂದು ಕಾಣುತ್ತದೆ. ಮಾನ್ಯ ಕಡಿದಾಳ ಮಂಜಪ್ಪನವರು, ಮಾನ್ಯ ಜೆ.ಎಚ್. ಪಟೇಲ್‌ರವರು ಮತ್ತು ಮಾನ್ಯ ಬಂಗಾರಪ್ಪನವರು. ಏನು ಮಾಡಿದಿರಿ ಸ್ವಾಮಿ? ರೈತ ಕುಟುಂಬದ ಹಿನ್ನಲೆಯಿಂದ ಬಂದಂತಹ ಶಾಸಕರು ಆ ಜಿಲ್ಲೆಯಲ್ಲಿ ಮೂರು ಜನ ಮುಖ್ಯಮಂತ್ರಿಗಳು ಆದರು. ಆ ಜಿಲ್ಲೆಯಲ್ಲಿ ಮೆಕ್ಕೆಜೋಳ ಬೆಳೆಯುವವರಿಗೆ ಒಳ್ಳೆಯ ರೇಟ್ ಸಿಗುವಂತಹ ಪರಿಸ್ಥಿತಿಯನ್ನು ನೀವು ಕಲ್ಪಿಸಲಿಲ್ಲವೆಂದರೆ, ಇನ್ನು ಮುಂದೆ ಆ ಭಾಗದವರು ಮುಖ್ಯಮಂತ್ರಿಯಾಗುವಂತಹ ಮಾನ್ಯ ಯಡಿಯೂರಪ್ಪನವರಿಗೂ ಹೇಳುತ್ತಿದ್ದೇನೆ, ಇದು ರೈತರಿಗೆ ನಾವು ತೋರಿಸುವಂತಹ ತಾತ್ಸಾರ. ಬೆಂಗಳೂರು ಸುತ್ತಮುತ್ತ real estate ಮಾಡುವುದಕ್ಕೆ ರೈತನ ಜಮೀನನ್ನು ಹೊಡೆಯುವುದಕ್ಕೆ ನಮಗೆ ಇರುವಂತಹ ಆಸೆ ಆಕಾಂಕ್ಷೆಗಳು ಅಲ್ಲಿರುವಂತಹ ರೈತರ ಮೇಲೆ ಇಲ್ಲ ಎಂದು ನಾವು ಹೇಳುವುದಕ್ಕೆ ಇಚ್ಛೆಪಡುತ್ತೇನೆ. 1991ರಲ್ಲಿ ಮಾನ್ಯ ನರಸಿಂಹರಾವ್‌ರವರು ಪ್ರಧಾನ ಮಂತ್ರಿಗಳಾದ ಮೇಲೆ ಈ ದೇಶದಲ್ಲಿ liberalization ಬಂತು. liberalization ಆದ ಮೇಲೆ ಅನೇಕ development ಗಳು ಆಗಿವೆ. ಆದರೆ ಕೃಷಿಕರ ಮೇಲೆ ಮಾತ್ರ ದಬ್ಬಾಳಿಕೆಯಾಗಿದೆ. ಮಾನ್ಯ ಯಡಿಯೂರಪ್ಪನವರು ಕೇಳಿಸಿಕೊಂಡರೋ ಇಲ್ಲವೋ ಗೊತ್ತಿಲ್ಲ. ನಿಮ್ಮ ಜಿಲ್ಲೆಯಲ್ಲಿ ಮೂರು ಜನ ಮುಖ್ಯಮಂತ್ರಿಗಳಾಗಿದ್ದರು. ನೀವು ನಾಲ್ಕನೇ ಮುಖ್ಯಮಂತ್ರಿಯಾಗುತ್ತಿದ್ದೀರಿ. ಇಡೀ ದೇಶದಲ್ಲೇ ನಮ್ಮ ರಾಜ್ಯ ಮೆಕ್ಕೆಜೋಳವನ್ನು ಜಾಸ್ತಿ ಬೆಳೆಯುತ್ತಿದೆ. ಅದರಲ್ಲೂ ಕೂಡ ಇಡೀ ರಾಜ್ಯದಲ್ಲಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಮೆಕ್ಕೆಜೋಳವನ್ನು ಜಾಸ್ತಿ ಬೆಳೆಯುತ್ತಿದ್ದೀರಿ. ನಿಮ್ಮ ಕ್ಷೇತ್ರದಲ್ಲಿ ಬೆಳೆಯುತ್ತೀರಿ, ನೀವು ಆ ರೈತರಿಗೆ ಏನು ಮಾಡಿದ್ದೀರಿ? ಅಲ್ಲಿ ಏನಾದರೂ maize processing plant ಮಾಡಿದ್ದೀರಾ? ನೀವು SEZ ಗೆ ಏನು

ಇಷ್ಟೊಂದು ಜಮೀನನ್ನು ಕೊಡುತ್ತಿದ್ದೀರಿ, ಅದಕ್ಕೆ ಸಂಬಂಧಪಟ್ಟ ಹಾಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನಿನ್ನೆ ಒಂದು ಪ್ರಶ್ನೆಯನ್ನು ಮಾಡಿದ್ದೆನು. ಯಾವ್ಯಾವ ಹಳ್ಳಿಗಳ ಜಾಗವನ್ನು ಎಷ್ಟು ಪ್ರಮಾಣದಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಕೇಳಿದಂತಹ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಗೃಹಮಂತ್ರಿಗಳು ಉತ್ತರ ಕೊಟ್ಟರು. ರಾಮನಗರದಲ್ಲಿ 9,178 ಎಕರೆ, ಕನಕಪುರ, ಸಾತನೂರಿನಲ್ಲಿ 16,232 ಎಕರೆ, ರಾಮನಗರ ಉಪನಗರದಲ್ಲಿ 4,013 ಎಕರೆ, ಸೋಲೂರು ಉಪನಗರ ಮಾಗಡಿಯಲ್ಲಿ 12,525 ಎಕರೆ, ನಂದಗುಡಿ ಉಪನಗರ ಹೋಸಕೋಟೆಯಲ್ಲಿ 18,507 ಎಕರೆ, ಈ ರೀತಿ ಬೆಂಗಳೂರು ಸುತ್ತಮುತ್ತ ಅಭಿವೃದ್ಧಿಗೆ ಆದ್ಯತೆ ಇರುವಂತಹ ನಿಮ್ಮ ರಾಜಕೀಯ ಇಚ್ಛಾಶಕ್ತಿ, ನಿಮ್ಮ ಜಿಲ್ಲೆಗಳಲ್ಲಿ ಮಾಡಬೇಕೆಂದು ಆಸಕ್ತಿ ಏಕಿಲ್ಲ. ನೀವು ಗುಲ್ಬರ್ಗಾದಲ್ಲಿ ಮಾಡಿ ಸ್ವಾಮಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ ಗೌಡರೆ, ತಾವು ಶಿವಮೊಗ್ಗದ ವಿಚಾರವನ್ನು ಪ್ರಸ್ತಾಪ ಮಾಡಿದಿರಿ, ಇದುವರೆಗೂ ಅದು ಶಾಪಗ್ರಸ್ತವಾಗಿರುವುದು ಹೌದು, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅಲ್ಲಿ ಮೂರು ಜನ ಮುಖ್ಯಮಂತ್ರಿಗಳನ್ನು ಕೊಟ್ಟಿದ್ದು, ಅಲ್ಲಿ ಯಾವುದೇ ಮೂಲಭೂತ ಸೌಕರ್ಯಗಳು ಇರಲಿಲ್ಲ. ಮಾನ್ಯ ಯಡಿಯೂರಪ್ಪನವರು ಬಂದನಂತರ ಶಾಪವಿಮೋಚನೆಯಾಗುತ್ತಿದೆ. ಅದನ್ನು ಅವರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿಕೊಳ್ಳುತ್ತೇನೆ. ಇವತ್ತು ಅಲ್ಲಿ ವಿಮಾನ ನಿಲ್ದಾಣವಾಗುತ್ತಿದೆ. ರಸ್ತೆಗಳು ಬಹಳ ಚೆನ್ನಾಗಿ ಆಗುತ್ತಿದೆ. ಮುಂದೆ ನೀವು ಹೇಳಿದಂತೆ ಮೆಕ್ಕೆಜೋಳವನ್ನು ಅಲ್ಲಿ value added processing plantಗಳು ಬರುವುದಕ್ಕೆ ಹಾದಿ ಸುಗಮವಾಗುತ್ತಿದೆ. ಅದು SEZ ವ್ಯಾಪ್ತಿಗೆ ಬರುತ್ತಿದೆ, ತಾವು ಹೇಳಿದ್ದು ಸರಿಯಿದೆ.

ಶ್ರೀ ಕೆ. ಶ್ರೀನಿವಾಸ ಗೌಡ: ವಿಮಾನ ನಿಲ್ದಾಣ ಮಾಡಿದರೆ ಅಲ್ಲಿ ನೀವು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಶಂಕರಮೂರ್ತಿಯವರು ಓಡಾಡಬಹುದು ಸ್ವಾಮಿ. ಅಲ್ಲಿ ಯಾವ ರೈತನಗೆ ವಿಮಾನದಲ್ಲಿ ಬೆಂಗಳೂರಿಗೆ ಬರುವುದಕ್ಕೆ ಶಕ್ತಿ ಇದೆ. ಅಲ್ಲಿ ಮಾಡುವಂತಹ industries ಗೆ ಶಕ್ತಿ ಬರುತ್ತದೆ. ಯಾವ ರೈತನಗೆ ಶಕ್ತಿ ಇದೆ ಸ್ವಾಮಿ? ಒಬ್ಬ ರೈತನ ಮಗನಾಗಿ ಎಂತಹ ಅಭಿವೃದ್ದಿ ಹೇಳುತ್ತೀರಿ? ಅದೇ ನಮ್ಮ ರೈತನ ಮೇಲೆ ಇರುವಂತಹ ಅಸಡ್ಡೆ.

ಅಧ್ಯಕ್ಷರು: ಶ್ರೀನಿವಾಸಗೌಡರೆ, ನಿಮ್ಮ ಕಾಲ ಮುಗಿದು ಹೋಯಿತು. ನೀವು ಏನಾದರೂ ಮಾತನಾಡುವುದಿದ್ದರೆ SEZ ಬಗ್ಗೆ ಹೇಳಿ.

ಶ್ರೀ ಕೆ. ಶ್ರೀನಿವಾಸ ಗೌಡ: ಅಡಿಕೆಗೆ ಆ ಪರಿಸ್ಥಿತಿ ಬಂತು, ತಾವು ಏನು ಮಾಡಿದಿರಿ? ಇಲ್ಲಿಯ ಅಡಿಕೆಯನ್ನು ತೆಗೆದುಕೊಂಡು ಹೋಗಿ ಗೋವಾ ಕಡೆ ಗುಟ್ಕಾ ಮಾಡುತ್ತಾರೆ. ಆದರೆ ನಮ್ಮ ಸರ್ಕಾರಕ್ಕೆ ಮಾಡುವುದಕ್ಕೆ ಆಗಲಿಲ್ಲ. ನಾನು ತಪ್ಪು ಮಾಡಿದರೆ, ನನ್ನನ್ನು ಇಲ್ಲಿ hang ಮಾಡಿ. ಆದರೆ ನೀವು ಒಳ್ಳೆಯದು ಮಾಡಿ ಎಂದು ಅದನ್ನೇ ಹೇಳುತ್ತಿರುವುದು. ನೀವು ಒಳ್ಳೆಯದನ್ನು ಮಾಡಿ ಎಂದು ಹೇಳುವುದೇ ನಮ್ಮ ಕರ್ತವ್ಯ. ಇವತ್ತು KGFನಲ್ಲಿ 12,000ದಿಂದ 13,000 ಎಕರೆಗೆ ಎಲ್ಲಾ ಬೇಕಾದಂತಹ infrastructure ಇದೆ. ಅಲ್ಲಿ current ಇದೆ, ಮನೆಗಳು ಇದೆ, ಜಮೀನು ಇದೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಈ ಕಡೆ ಗಮನ ಹರಿಸಬೇಕು. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿ KGF ಗೆ ಬಂದಾಗ ಅಲ್ಲಿ industries growth taluk ಎಂದು declare ಮಾಡುತ್ತೇವೆಂದು ಹೇಳಿದರು. ಆಗ ನಾನು ಕೂಡ ಶಾಸಕನಾಗಿದ್ದೆನು, ಅದನ್ನು ನಾನು ಜ್ಞಾಪಿಸಿಕೊಳ್ಳುತ್ತೇನೆ. ಅವರು ಆ ದಿನ ಹೇಳಿದ್ದರು. ಸುಮಾರು 13,000 ಎಕರೆ ಇದ್ದು, ಅಲ್ಲಿ SEZ ಮಾಡಿ. ಮೂಲಭೂತ ಸೌಕರ್ಯಗಳು ಇದೆ, ಕರೆಂಟ್ ಇದೆ, ಅಲ್ಲಿ ಮಾಡಿ. ಅಲ್ಲಿ ಯಾವುದಕ್ಕೂ ಕೂಡ ಕೊರತೆ ಇಲ್ಲ. industrialist Helicopter ನಲ್ಲಿ ಬಂದರೆ 10 ರಿಂದ 15 ನಿಮಿಷದಲ್ಲಿ International Airportಗೆ ಬರಬಹುದು. ನೀವು ಅಂತಹ ಜಾಗದಲ್ಲಿ ಮಾಡುವುದನ್ನು ಬಿಟ್ಟು ಈ ಕಡೆ ಮಾಡಿ ರೈತರ ಹೊಟ್ಟೆ ಮೇಲೆ ಹೊಡೆಯುತ್ತಿದ್ದೀರಿ. ರೈತರ ಹೊಟ್ಟೆ ಮೇಲೆ ಹೊಡೆದರೆ ಅದರ ಶಾಪಗ್ರಸ್ತರು ನಾವು ಆಗುತ್ತೇವೆ ಎನ್ನುವುದನ್ನು ನೀವ್ಯಾರು ಮರೆಯಬಾರದು ಎನ್ನುವುದನ್ನು ಹೇಳುತ್ತಾ, ನೀವು ಇತ್ತೀಚೆಗೆ ಹಳ್ಳಿ ವಾಸ್ತವ್ಯ ಮಾಡುತ್ತಿರುವುದು ಬಹಳ ಸಂತೋಷ. ಏಕೆಂದರೆ ಹಳ್ಳಿಯಲ್ಲಿ ಗೊಬ್ಬರ ಎತ್ತಿ, ಸುರಿಗೆ ಎತ್ತಿ, ಉಳುಮೆ ಮಾಡಿ ಬಿತ್ತನೆ ಮಾಡಿದಂತಹವರಲ್ಲಿ ಕೂಡ ನಾನೂ ಒಬ್ಬ ರೈತನ ಮಗ. ನಮ್ಮ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಂಡಾಗ, ಬೆಂಗಳೂರು ಸುತ್ತಮುತ್ತ ರೈತನ ಜಮೀನು ಏನು ಹೋಗುತ್ತದೆ, ಅದರ ಬಗ್ಗೆ ಮತ್ತೊಮ್ಮೆ ನಾವು ಪ್ರಾರ್ಥನೆ ಮಾಡುತ್ತೇನೆ, ಇಲ್ಲಿ Agriculture Economic Zone ಮಾಡಿ. ಅದಕ್ಕೆ ನಿಮ್ಮ SEZ ನಷ್ಟೇ ಪ್ರಾಮುಖ್ಯತೆಯನ್ನು ಕೊಡಿ. ಇದರಿಂದ ಆ ಜಾಗದ 3–4 ಜಿಲ್ಲೆಗಳ ರೈತರು ಅಭಿವೃದ್ಧಿಯಾಗುತ್ತಾರೆ. ಅದರಲ್ಲಿ ಎರಡನೇ ಮಾತೇ ಇಲ್ಲ. ಬೆಂಗಳೂರು ಸುತ್ತಮುತ್ತ AEZ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಐದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ದಯಮಾಡಿ ಬೇಡಿ. ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಸಿದ್ದರಾಮಯ್ಯ: ಮಾನ್ಯ ದಿನೇಶ್ ಗುಂಡೂರಾವ್‌ರವರಿಗೆ ಐದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೆ, Don't test my patience. ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರ ಕೊಡಿ.

ಶ್ರೀ ದಿನೇಶ್ ಗುಂಡೂರಾವ್: ನನಗೆ ದಯವಿಟ್ಟು ಐದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: No,No.

[ಗೊಂದಲ]

ಶ್ರೀ ಸಿದ್ದರಾಮಯ್ಯ: ಬೆಂಗಳೂರಿನವರಾದ ಅವರು ಮಾತನಾಡಲು ಅವಕಾಶ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ನಂತರ ಉತ್ತರ ನೀಡಲಿ.

[ಗೊಂದಲ]

ಅಧ್ಯಕ್ಷರು: Clarification ಏನಾದರೂ ಕೇಳುವುದಿದ್ದರೆ ಬೇಕಾದರೆ ಅವಕಾಶ ಮಾಡಿಕೊಡೋಣ. ಬೆಂಗಳೂರಿನವರು ಎಲ್ಲದರ ಬಗ್ಗೆ ಮಾತನಾಡಬೇಕೆಂದರೆ ಹೇಗೆ? ರಾಜ್ಯಕ್ಕೆ ಸಂಬಂಧಪಟ್ಟಂತೆ ಇತರ ವಿಚಾರಗಳ ಬಗ್ಗೆ ಅವರು ಮಾತನಾಡುವುದಿಲ್ಲವೇ?

[ಗೊಂದಲ]

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ದಯಮಾಡಿ ಕೋಪಿಸಿಕೊಳ್ಳಬೇಡಿ. ಐದು ನಿಮಿಷ ಅವಕಾಶ ಕೊಡುವುದನ್ನು ನೀವು consider ಮಾಡುವುದಕ್ಕಾಗುವುದಿಲ್ಲವೇ?

ಅಧ್ಯಕ್ಷರು: ಬೇಡ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಿ. ಈ ಕಡೆಯವರೂ ಬಹಳ ಜನ ಕೇಳುತ್ತಿದ್ದಾರೆ.

[ಗೊಂದಲ]

ಮಾನ್ಯ ಸಿದ್ದರಾಮಯ್ಯನವರೇ, ದಯಮಾಡಿ ಸಹಕರಿಸಿ. ಇನ್ನೂ ಚರ್ಚಿಸಬೇಕಾದ ಅನೇಕ subjectಗಳಿವೆ.

[ಗೊಂದಲ]

ಶ್ರೀ ಸಿದ್ದರಾಮಯ್ಯ: ನೀವು Yes ಎಂದಿದ್ದರೆ, ಎರಡು ನಿಮಿಷದೊಳಗೆ ಅವರು ಮಾತನಾಡುವುದು ಮುಗಿದೇ ಹೋಗುತ್ತಿತ್ತು.

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೇ, ನಿಮ್ಮ ಅಧ್ಯಕ್ಷರು ಇನ್ನಿಬ್ಬರಿಗೆ ಅವಕಾಶ ಕೊಡಿ ಎನ್ನುತ್ತಾರೆ. ನೀವು ಇನ್ನಿಬ್ಬರಿಗೆ ಅವಕಾಶ ಕೊಡಿ ಎನ್ನುತ್ತೀರಿ. ಹೀಗೆ ಪ್ರತಿಯೊಬ್ಬರಿಗೂ ಇನ್ನಿಬ್ಬರಿಗೆ ಮಾತನಾಡಲು ಅವಕಾಶ ಕೊಡಿ ಎಂದು ಹೇಳುತ್ತಾ ಹೋದರೆ ಹೇಗೆ?

[ಗೊಂದಲ]

ಶ್ರೀ ಸಿದ್ದರಾಮಯ್ಯ: ಸ್ವಲ್ಪ magnanimity ಇಟ್ಟುಕೊಳ್ಳಿ.

ಅಧ್ಯಕ್ಷರು: ಏಕೆ magnanimity ಇಟ್ಟುಕೊಳ್ಳಬೇಕು? ಒಂದು ನಿಗದಿತ ಸಮಯದೊಳಗೆ ಎಲ್ಲವನ್ನೂ ಮುಗಿಸಬೇಕು. Senior leader ಗಳಾದ ನೀವೆಲ್ಲರೂ ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಇನ್ನೂ ರೈತರಿಗೆ ಸಂಬಂಧಪಟ್ಟಿದ್ದು ಚರ್ಚಿಸುವುದು ಬೇಕಾದಷ್ಟಿದೆ. ಮಾನ್ಯ ಮುಖ್ಯಮಂತ್ರಿಗಳೇ, ಉತ್ತರ ಕೊಡಿ.

[ಗೊಂದಲ]

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ,....

[ಗೊಂದಲ]

ಶ್ರೀ ನೆ.ಲ.ನರೇಂದ್ರ ಬಾಬು: ಮಾನ್ಯ ಅಧ್ಯಕ್ಷರೆ,....

[ಗೊಂದಲ]

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೆ, ನಿಮ್ಮ ಪಕ್ಷದ ಮತ್ತೊಬ್ಬರು ನಿಂತುಕೊಂಡು ಮಾತನಾಡಲು ಅವಕಾಶ ಕೊಡಬೇಕೆಂದು ಕೇಳುತ್ತಿದ್ದಾರೆ. ನಿಮ್ಮ ಸದಸ್ಯರಲ್ಲೇ ಮಾತನಾಡಲು ಪೈಪೋಟಿ ಆಗುತ್ತಿದೆ.

[ಗೊಂದಲ]

ಶ್ರೀ ನೆ.ಲ.ನರೇಂದ್ರಬಾಬು: .... ರೈತರು ಬೀದಿ ಪಾಲಾಗುವುದು ಬೇಡ. 5–10 ನಿಮಿಷ ನನಗೂ ಮಾತನಾಡಲು ಅವಕಾಶ ಕೊಡಿ.

[ಗೊಂದಲ]

ಅಧ್ಯಕ್ಷರು: This is too much. ಎಲ್ಲವನ್ನೂ ನಿಗದಿತ ಅವಧಿಯಲ್ಲೇ ಮುಗಿಸಬೇಕು. ನಿಯಮ 69ರ ಮೇರೆಗೆ ಚರ್ಚೆ ಎಂದಾಕ್ಷಣ ಎಲ್ಲರಿಗೂ ಅವಕಾಶ ಕೊಡಲು ಆಗುವುದಿಲ್ಲ.

[ಗೊಂದಲ]

ಶ್ರೀ ನೆ.ಲ.ನರೇಂದ್ರಬಾಬು:– ಇದು ರೈತರಿಗೆ ಮರಣ ಶಾಸನವಾಗಬಾರದು...

[ಗೊಂದಲ]

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

[ಗೊಂದಲ]

ಚರ್ಚೆಗೆ ಈಗಾಗಲೇ ಸಾಕಷ್ಟು ಸಮಯ ಕೊಡಲಾಗಿದೆ. ಈ ಕಡೆಯ ಸದಸ್ಯರು ಬಹಳಷ್ಟು ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಆ ಕಡೆಯವರೂ ಕೇಳುತ್ತಿದ್ದಾರೆ, ಆದರೆ ಕೊಡಲಿಕ್ಕಾಗುತ್ತಿಲ್ಲ. ನಿಯಮದ ವ್ಯಾಪ್ತಿಯಲ್ಲಿ ನಿಗದಿತ ಅವಧಿಯಲ್ಲಿ ನಾವು ಚರ್ಚೆ ಮಾಡಬೇಕಾಗುತ್ತದೆ. ಏಕೆ ಈ ತರಹ ಮಾಡುತ್ತೀರಿ ಎಂದು ನನಗೆ ಅರ್ಥವಾಗುತ್ತಿಲ್ಲ.

[ಗೊಂದಲ]

ಶ್ರೀ ನೆ.ಲ. ನರೇಂದ್ರಬಾಬು: ನಾವು ಗಂಟೆಗಟ್ಟಲೆ ಮಾತನಾಡುವುದಿಲ್ಲ.

[ಗೊಂದಲ]

ಅಧ್ಯಕ್ಷರು: ಸುಮ್ಮನೆ ಕುಳಿತುಕೊಳ್ಳಿ. ಏಕೆ ನೀವು ತಲೆ ತಿನ್ನುತ್ತೀರಿ? ನಿಗದಿತ ಕಾಲಾವಧಿಯಲ್ಲಿ ಎಲ್ಲವನ್ನು ಮುಗಿಸಬೇಕು. ಇನ್ನೂ ಚರ್ಚಿಸಬೇಕಾದ ಬೇರೆ ಬೇರೆ ವಿಷಯಗಳಿವೆ. ಎಲ್ಲರೂ ಮಾತನಾಡುತ್ತೇವೆಂದರೆ ಹೇಗೆ?

[ಗೊಂದಲ]

ಎಲ್ಲಿ ನಿಮ್ಮ Leader of opposition? ಸಚೇತಕರೇ, control your members.

[ಗೊಂದಲ]

ಶ್ರೀ ಸಿದ್ದರಾಮಯ್ಯ: ದಯವಿಟ್ಟು ಐದು ನಿಮಿಷ ಅವಕಾಶ ಕೊಡಿ.

[ಗೊಂದಲ]

ಅಧ್ಯಕ್ಷರು: ಮಾನ್ಯ ದಿನೇಶ್ ಗುಂಡೂರಾವ್‌ರವರು ಮಾತನಾಡಲು ಐದು ನಿಮಿಷಗಳ ಕಾಲಾವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಅವರ ಜೊತೆಗೆ ಮಾನ್ಯ ನರೇಂದ್ರ ಬಾಬುರವರೂ ಮಾತನಾಡಲು ಅವಕಾಶ ಕೇಳುತ್ತಿದ್ದಾರಲ್ಲಾ?

ಶ್ರೀ ಸಿದ್ದರಾಮಯ್ಯ: ಅವರಿಗೆ ಐದು ನಿಮಿಷ ಕೊಡಿ, ಇವರಿಗೆ ಐದು ನಿಮಿಷ ಕೊಡಿ.

ಅಧ್ಯಕ್ಷರು: ಆಗುವುದಿಲ್ಲ. ಅವರಿಬ್ಬರ ನಂತರ ಇನ್ನಿಬ್ಬರು ಮಾತನಾಡಲು ಅವಕಾಶ ಕೊಡಿ ಎಂದು ನಿಂತುಕೊಳ್ಳುತ್ತಾರೆ. No,No. This is not correct.

ಶ್ರೀ ಸಿದ್ದರಾಮಯ್ಯ: Lunch ಆದ ಮೇಲೆ ಉತ್ತರ ಕೊಡಿಸುವಿರಂತೆ.

[ಗೊಂದಲ]

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರು ನನ್ನನ್ನು ಕರೆದಿದ್ದಾರೆ. ದಯಮಾಡಿ ನನಗೆ ಉತ್ತರ ಕೊಡಲಿಕ್ಕೆ ಅವಕಾಶ ಕೊಡಿ.

[ಗೊಂದಲ]

ಅಧ್ಯಕ್ಷರು: ಈ ತರಹ ಆದರೆ ಸದನ ನಡೆಸುವುದು ಕಷ್ಟವಾಗುತ್ತದೆ. Oppositionಗೆ ನಾವು ಸಾಕಷ್ಟು ಸಮಯ ಕೊಟ್ಟಿದ್ದರೂ ಸಹ, ಅವರು ಸಹಕರಿಸುವುದಿಲ್ಲ ಎಂದರೆ ಹೇಗೆ?

[ಗೊಂದಲ]

ಶ್ರೀ ನೆ.ಲ. ನರೇಂದ್ರಬಾಬು: ... ನಾವೇನೂ ಗಂಟೆಗಟ್ಟಲೆ ಮಾತನಾಡುವಂತಹ ಜನರಲ್ಲ...

[ಗೊಂದಲ]

ಡಾ: ಕೆ. ಅನ್ನದಾನಿ: ನೀವು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ನೆ.ಲ. ನರೇಂದ್ರಬಾಬು: ... ಇದು ಬೆಂಗಳೂರು ನಗರದ ಭವಿಷ್ಯದ ಪ್ರಶ್ನೆಯಾಗಿದೆ. ಬೆಂಗಳೂರು ನಗರದ ಸುತ್ತಮುತ್ತಲಿನ ರೈತರ ಪ್ರಶ್ನೆಯಾಗಿದೆ. ದಯಮಾಡಿ ಐದು ನಿಮಿಷ ಮಾತನಾಡಲು ಅವಕಾಶ ಕೊಡಿ...

[ಗೊಂದಲ]

ಅಧ್ಯಕ್ಷರು: ದಯಮಾಡಿ ನಾನು ಹೇಳುವುದನ್ನು ಕೇಳಿ. ನೀವು ಈ ರೀತಿ ಹಠ ಮಾಡುವುದು ಸರಿಯಲ್ಲ.

ಶ್ರೀ ನೆ.ಲ. ನರೇಂದ್ರಬಾಬು: ... ಖಂಡಿತ ಇದು ಹಠವಲ್ಲ.

ಅಧ್ಯಕ್ಷರು: ಮಾನ್ಯ ನರೇಂದ್ರಬಾಬುರವರೇ, ದಯವಿಟ್ಟು ನಾನು ಹೇಳುವುದನ್ನು ಕೇಳಿ. ನೀವು ಹಠ ಮಾಡುವುದು ಸರಿಯಲ್ಲ. ನಾವು ಇನ್ನೂ ಬೇರೆ ಬೇರೆ subject ಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ. Please, be seated. ಬಿಲ್‌ಗಳನ್ನು ಪಾಸ್ ಮಾಡಿ ಕೊಡಬೇಕಾಗಿದೆ ಎಂಬ ಕಾರಣದಿಂದ 3ನೇ ತಾರಿಖಿನವರೆಗೆ ಅಧಿವೇಶನವನ್ನು extend ಮಾಡಲು BAC ಯಲ್ಲಿ ನಿರ್ಧಾರವಾಗಿತ್ತು. ಈ ತರಹ ಆದರೆ ಹೇಗೆ? ನಾಯಕರುಗಳಿಗೆ ಮಾನ್ಯ ಸದಸ್ಯರುಗಳಿಗೆ ಹೇಳತಕ್ಕ ಶಕ್ತಿಯಿಲ್ಲ. ಮಾನ್ಯ ಸದಸ್ಯರುಗಳೆಲ್ಲಾ ನಂತುಕೊಂಡು ಗಲಾಟೆ ಮಾಡುತ್ತಿದ್ದೀರಿ. ಏನಿದು? ಒಂದು responsible opposition party ಆಗಿ, ಈ ತರಹ ಆಡಿದರೆ ಹೇಗೆ? ಅವರೂ ನಿಮಗೆ ಹೇಳತಕ್ಕಂಥ ಸ್ತಿತಿಯಲ್ಲಿ ಇಲ್ಲ, ನೀವೂ ನನ್ನ ಮಾತು ಕೇಳುತ್ತಿಲ್ಲ. ಹೀಗಾದರೆ ನಾನು ಹೌಸ್ ಅನ್ನು ಹೇಗೆ ನಡೆಸಬೇಕು? ಇದು ಸರಿಯಲ್ಲ.

[ಗೊಂದಲ]

ನಿಮ್ಮ ಲೀಡರ್‌ಗಳೆಲ್ಲಾ ಮಾತನಾಡಿಲ್ಲವೇ? ಹೇಳಿದ್ದನ್ನೇ ಹೇಳುತ್ತಿರುತ್ತೀರಿ. ಹೊಸ ವಿಷಯ ಇನ್ನೇನು ಹೇಳುತ್ತೀರಿ?

[ಗೊಂದಲ]

ಇಬ್ಬರಲ್ಲಿ ಯಾರಿಗಾದರೂ ಒಬ್ಬರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಯಾರಿಗೆ ಕೊಡಬೇಕೆಂಬುದನ್ನು ನೀವೇ ತೀರ್ಮಾನ ಮಾಡಿ.

[ಗೊಂದಲ]

ಶ್ರೀ ಸಿದ್ದರಾಮಯ್ಯ: ಮಾನ್ಯ ದಿನೇಶ್ ಗುಂಡೂರಾವ್‌ರವರಿಗೆ ಅವಕಾಶ ಕೊಡಿ.

[ಗೊಂದಲ]

ಶ್ರೀ ನೆ.ಲ. ನರೇಂದ್ರಬಾಬು: ... ಸಾವಿರಾರು ಎಕರೆ ಜಮೀನನ್ನು ಕಳೆದುಕೊಳ್ಳುತ್ತಿರುವವರು ನಾವು...

[ಗೊಂದಲ]

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ನೀವು ಯಾವ ಪಾರ್ಟಿ ಮೆಂಬರ್? ನಿಮ್ಮ ನಾಯಕರು ಹೇಳಿದಂತೆ ಕೇಳಿ. ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರು ಮೂರು ಜನ ಮಾತನಾಡುತ್ತೇವೆ ಎಂದರು, ನಾನು ಅದನ್ನು ಒಪ್ಪಿಕೊಂಡೆ. ಆಮೇಲೆ ಇನ್ನೊಬ್ಬರು ಮಾತನಾಡುತ್ತಾರೆ ಎಂದರು, ನಾನು ಆ ಇನ್ನೊಬ್ಬರಿಗೂ ಮಾತನಾಡಲು ಅವಕಾಶ ಕೊಟ್ಟೆ. ಎಲ್ಲರಿಗೂ ನಿಂತುಕೊಂಡು ಮಾತನಾಡಲಿಕ್ಕೆ ಶಕ್ತಿ ಇದೆ. ಈ ಕಡೆಯೂ ಎಲ್ಲರಿಗೂ ಶಕ್ತಿ ಇದೆ, ಅವರಿಗೂ ಮಾತನಾಡಲಿಕ್ಕೆ ಬರುತ್ತದೆ. ಎಲ್ಲದಕ್ಕೂ ಮಿತಿ ಇದೆ.

[ಗೊಂದಲ]

ಶ್ರೀ ದಿನೇಶ್ ಗುಂಡೂರಾವ್ [ಗಾಂಧಿನಗರ]: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ನಾನು ಯಾವುದನ್ನೂ repeat ಮಾಡುವುದಕ್ಕೆ ಹೋಗುವುದಿಲ್ಲ. ಬೆಂಗಳೂರು ಅಭಿವೃದ್ಧಿ ವಿಚಾರದಲ್ಲಿ ಮತ್ತು ಈ acquisition ಒಂದು ವಿಚಾರದಲ್ಲಿ ಎಲ್ಲರೂ ಚರ್ಚೆ ಮಾಡಿದ್ದಾರೆ. ನಾನು ಹೇಳತಕ್ಕಂಥಾದ್ದು ಏನೆಂದರೆ, BDAಯಲ್ಲಿ ಈಗ CDPಯನ್ನು ಮಾಡಿದ್ದಾರೆ. BMRDAನವರೂ ಕೂಡ ಸಣ್ಣ ಸಣ್ಣ ಟೌನ್‌ಗಳಿಗೂ Town Planning Authority ಮಾಡಿದ್ದಾರೆ. ಆನೇಕಲ್, ನೆಲಮಂಗಲ, ಮಾಗಡಿ ಮುಂತಾಗಿ ಎಲ್ಲದ್ದಕ್ಕೂ ಕೂಡ Town Planning Authorityಯನ್ನು ಮಾಡಿದ್ದಾರೆ. ಬೆಂಗಳೂರಿನಲ್ಲಿ ಒತ್ತಡ ಜಾಸ್ತಿಯಾಗುತ್ತಿದೆ. ಬೆಂಗಳೂರಿನಲ್ಲಿ ಜನ ಸಾಂದ್ರತೆ ಜಾಸ್ತಿಯಾಗುತ್ತಿದೆ, ಇಲ್ಲಿ ವಾಹನ ಓಡಾಡುವುದು ಕಷ್ಟವಾಗುತ್ತಿದೆ, ಇದನ್ನು decongest ಮಾಡುವ ಸಲುವಾಗಿ ಉಪ ನಗರಗಳನ್ನು ಸ್ಥಾಪಿಸಬೇಕೆಂದು ನೀವು ಯೋಚಿಸಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಉಪ ನಗರ ಮಾಡುವುದರ ಮೂಲಕ ಬೆಂಗಳೂರನ್ನು decongest ಮಾಡಬೇಕೆಂಬ ಉದ್ದೇಶ ನಿಮಗೆ ಇದ್ದಿದ್ದರೆ, ನೀವು ಏನು ಮಾಡಬೇಕಾಗಿತ್ತು? Master Plan ನಲ್ಲಿ ನೀವು ಇವತ್ತು 400 Sq.Km. ಹಸಿರು ವಲಯವನ್ನು ತೆಗೆದಿದ್ದೀರಿ. ಅದನ್ನು ಏಕೆ ತೆಗೆದಿರಿ? ಹಸಿರು ವಲಯವನ್ನು ಉಳಿಸಬೇಕಾಗಿತ್ತು. ಬೆಂಗಳೂರು ಸುತ್ತಮುತ್ತ

ಹಸಿರು ವಲಯ ಇರಬೇಕಾಗಿತ್ತು. BMRDA ಯಿಂದ ಹೆಚ್ಚು ಕಡಿಮೆ 30 ಸಾವಿರ ಎಕರೆ ಪ್ರದೇಶದ ಕೃಷಿ ಭೂಮಿ ಅಭಿವೃದ್ಧಿಗೆ ನೀವು permission ಕೊಡುತ್ತಿದ್ದೀರಿ. 1 ಲಕ್ಷದ 50 ಸಾವಿರ ಎಕರೆಗಳನ್ನೇನು ನೀವು ಕೈಗಾರಿಕೆಗಳಿಗೆ, ಉಪ ನಗರಗಳಿಗಾಗಿ ಸ್ವಾಧೀನ ಪಡಿಸಿಕೊಂಡಿದ್ದೀರೋ, ಅದನ್ನೆಲ್ಲಾ ಬಿಟ್ಟು ಇನ್ನೂ 30 ಸಾವಿರ ಎಕರೆಗಳಷ್ಟನ್ನು BMRDA limits ನಲ್ಲಿ ಕೂಡ ಕೊಡುತ್ತಿದ್ದೀರಿ. ಅಂದರೆ ಹೆಚ್ಚು ಕಡಿಮೆ 50–60 ಸಾವಿರ ಎಕರೆಗಳಷ್ಟನ್ನು ಅಭಿವೃದ್ಧಿಗೆ, ನಗರ ಬೆಳೆಯುವುದಕ್ಕೋಸ್ಕರ ಕೊಡುತ್ತಿದ್ದೀರಿ. ಅದನ್ನು ಎಲ್ಲಿ ಕೊಡುತ್ತಿದ್ದೀರಿ? ಬೆಂಗಳೂರು ಸುತ್ತಮುತ್ತ, ಬೆಂಗಳೂರು ಪಕ್ಕವೇ ಅದನ್ನು ಕೊಡುತ್ತಿದ್ದೀರಿ. ಬಿಡದಿ, ಸಾತನೂರು, ಸೋಲೂರು ಸ್ವಲ್ಪ ದೂರವಾದರೂ ಇದೆ. ಆದರೆ ಇಲ್ಲಿ ಬೆಂಗಳೂರು ಸುತ್ತಮುತ್ತವೇ ನೀವು ಕೊಡುತ್ತಿದ್ದೀರಿ. ಈ ರೀತಿ ಕೊಟ್ಟಮೇಲೆ ಇಲ್ಲೆಲ್ಲಾ ಅಭಿವೃದ್ಧಿಯಾಗುತ್ತದೆ, Population ಜಾಸ್ತಿಯಾಗುತ್ತದೆ. ನೀರಿನ ಕೊರತೆ ಬಗ್ಗೆ ಈಗಾಗಲೇ ಎಲ್ಲರೂ ಹೇಳಿದ್ದಾರೆ. ಅವರಿಗೆ ನೀರನ್ನು ನೀವು ಎಲ್ಲಿಂದ ಕೊಡುತ್ತೀರಿ? BBMP ವ್ಯಾಪ್ತಿಯ ಹಳೆಯ 9 CMC ಗಳಿಗೆ ನೀರನ್ನು ಕೊಡಲಿಕ್ಕೆ ಇವತ್ತು ನಮ್ಮಿಂದಾಗುತ್ತಿಲ್ಲ. ಇದರ ಜೊತೆಗೆ ಹೊಸದಾಗಿ ಅಭಿವೃದ್ಧಿಗಾಗಿ Master plan ಅನ್ನು ಮಾಡಿದ್ದೇವೆ. ಅವೆರಡರ ಜೊತೆಗೆ ತಾವು ಇದನ್ನೂ ಮಾಡುತ್ತಿದ್ದೀರಿ. ಉಪನಗರ ಮಾಡಿ, ಆದರೆ ಇದೆಲ್ಲವನ್ನೂ ಕೂಡ ನಿಲ್ಲಿಸಿ. ಬೆಂಗಳೂರು ಸುತ್ತಮುತ್ತ ಅಭಿವೃದ್ಧಿಯನ್ನು ನೀವು stop ಮಾಡಿ. ಹಸಿರು ವಲಯ ಇರಲಿ, ಹಸಿರು ಪ್ರದೇಶ ಇರಲಿ. ನೀವು ಸ್ವಲ್ಪ ದೂರ ಮಾಡಿ. ಆಗ ಈ ನಗರದ ಬೆಳವಣಿಗೆ control ಆಗುತ್ತದೆ. ಉಪನಗರ ಮಾಡುವುದರ ನಮ್ಮ ಉದ್ದೇಶ ಅದೇ ಅಲ್ಲವೇ? ಆ ಉದ್ದೇಶವನ್ನು ಬಿಟ್ಟು ನೀವು ಇವತ್ತು ಹೊರಟಿದ್ದೀರಿ. ಅಲ್ಲೂ ಕೂಡ acquisition ಮಾಡುತ್ತಿದ್ದೀರಿ. ಅಲ್ಲಿ ಕೃಷಿ ಭೂಮಿಯನ್ನೇ acquire ಮಾಡುತ್ತಿದ್ದಾರೆ, ಅಲ್ಲಿ ಯಾವ zoning ಕೂಡ ಆಗಿಲ್ಲ, zoning regulations ಕೂಡ ಮಾಡಿಲ್ಲ. ಅದರ ಜೊತೆಗೆ ಇಲ್ಲಿ BDA ಮತ್ತು BMRDA limits ನಲ್ಲಿ ನೀವು ಇವತ್ತು ಸಾವಿರಾರು ಎಕರೆ, ಬಹುಶಃ, 600–700 Sq.Km. ನಷ್ಟು ಅಭಿವೃದ್ಧಿ ಈ ಭಾಗದಲ್ಲಿ ಮಾಡುತ್ತಿದ್ದೀರಿ. ಇಷ್ಟೊಂದು ಅಭಿವೃದ್ಧಿಯನ್ನು ನೀವು ಇಲ್ಲಿ ಮಾಡಿಸಿ, ಅದನ್ನೂ ಅಲ್ಲಿ ಅಭಿವೃದ್ಧಿ ಮಾಡಿಸಿ ಬಿಟ್ಟರೆ, ನಾಳೆ ಪರಿಸ್ಥಿತಿ ಏನಾಗಬಹುದು? ಈ ನಗರದ ಒತ್ತಡ ಎಷ್ಟರ ಮಟ್ಟಿಗೆ ಹೋಗುತ್ತದೆಂದರೆ, ಬಹುಶಃ ಇಲ್ಲಿನ ಜನರ ಸಾಮಾಜಿಕ ಸಮಸ್ಯೆಗಳು ಬಹಳ ದೊಡ್ಡ ಮಟ್ಟಕ್ಕೆ ಹೊರಟು ಹೋಗುತ್ತವೆ. ಆಮೇಲೆ ಯಾರೂ ಕೂಡ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಎಲ್ಲಾ ಕಡೆ ಬರೇ ಜಗಳ,

ಗಲಾಟೆ ಪ್ರಾರಂಭವಾಗಿ ಬಿಡುತ್ತದೆ. ಮುಖ್ಯವಾಗಿ ಕುಡಿಯುವ ನೀರಿನ ವಿಚಾರದಲ್ಲಿ ತೊಂದರೆಯಾಗುತ್ತದೆ. ಬೇರೆ ಎಲ್ಲದನ್ನೂ ನೀವು ಕೊಡಬಹುದು. ವಿದ್ಯುತ್‌ಚ್ಛಕ್ತಿ ಬೇಕಾದರೆ ನೀವು ಕೊಡಬಹುದು, ಕಸ ವಿಲೇವಾರಿ ಮಾಡಿಸಬಹುದು, sanitation ಮಾಡಿಸಬಹುದು, ಎಲ್ಲಾ ಮಾಡಿಸಬಹುದು. ನೀರನ್ನು ಎಲ್ಲಿಂದ ಕೊಡುತ್ತೀರಿ? ಇದು ಬಹಳ ಮೂಲಭೂತವಾದ ವಿಚಾರ. ಇದರ ಬಗ್ಗೆ ಒಂದು ವೈಜ್ಞಾನಿಕವಾದ ಚಿಂತನೆಯೆ ಇಲ್ಲ, ನಮ್ಮ ಕೈಗಾರಿಕಾ ಸಚಿವರು ಬೆಂಗಳೂರಿನ ಸುತ್ತಮುತ್ತ ಕೈಗಾರಿಕ ಅಭಿವೃದ್ಧಿ ಮಾಡುವುದಕ್ಕೆ ಹೊರಟಿದ್ದಾರೆ, ಕೈಗಾರಿಕಾ ಸಚಿವರಿಗೆ ತಮ್ಮ ಸಾಮರ್ಥ್ಯವನ್ನು ನಿಜವಾಗಿಯೂ ತೋರಿಸಬೇಕೆಂದಿದ್ದರೆ ಬೇರೆ ಕಡೆ ಮಾಡಿಸಲಿ, ಇವತ್ತು ಬೆಂಗಳೂರಿನ ಸುತ್ತಮುತ್ತ ಅಭಿವೃದ್ಧಿ ಮಾಡಿಸುವುದು ಕಷ್ಟದ ಕೆಲಸವಲ್ಲವೇ ಅಲ್ಲ. ಭೂಮಿ ಕೊಟ್ಟರೆ ವಿದೇಶದಿಂದ ಯಾರೂ ಬೇಕಾದರು ಬರುತ್ತಾರೆ, ಬೆಂಗಳೂರಿನ ಸುತ್ತಮುತ್ತ ಇವತ್ತು ಭೂಮಿಯನ್ನು ಕೊಡುತ್ತೇವೆಂದರೆ ಓಡಿ ಬರುತ್ತಾರೆ. ಕೈಗಾರಿಕೆ ಸ್ಥಾಪನೆ ಮಾಡುತ್ತಾರೆ, ಆ ಕೆಲಸಕ್ಕೆ ಈ ಸರ್ಕಾರಕ್ಕೆ ಹೆಚ್ಚಿನ ಕಿಮ್ಮತ್ತು, ಜವಾಬ್ದಾರಿ ಬೇಕಾಗಿಲ್ಲ, ಅದನ್ನು ಯಾರು ಬೇಕಾದರೂ ಮಾಡಬಹುದು. ಇವರು, ಸಾಮರ್ಥ್ಯ ತೋರಿಸಬೇಕೆಂದಿದ್ದರೆ, ಬೇರೆ ಕಡೆ ಮಾಡಬೇಕಾಗಿತ್ತು. ಅದನ್ನು ಅವರು ಮಾಡಲಿಲ್ಲ. ಅದನ್ನು ಬಿಟ್ಟು ಈ ರೀತಿ ಮಾಡುತ್ತಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ, ಅಥವಾ ನೀವು ಈ ಉಪನಗರದನ್ನೆಲ್ಲಾ ಕೈಬಿಡಿ, ಈ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಕೈಗಾರಿಕೆಗೆ ಒಂದು ರೀತಿ ಮಾಡಿಕೊಳ್ಳಿ. ಎಲ್ಲೆಲ್ಲಿ ಏನು ಮಾಡಬೇಕೆಂಬುದನ್ನು ಸ್ವಲ್ಪ ಯೋಚನೆ ಮಾಡಿ, ಚರ್ಚೆ ಮಾಡಿ. ಯಾವ ಚರ್ಚೆಯೂ ಇಲ್ಲ, ವೈಜ್ಞಾನಿಕವಾದ ತೀರ್ಮಾನಗಳೆ ಇಲ್ಲ, ಇಷ್ಟಬಂದಂತೆ ಇವರ ಕಾಲದಲ್ಲಿ ತರಾತುರಿಯಲ್ಲಿ ಮಾಡಿದರೆ ನಾಳೆ ಇದರ ಪರಿಣಾಮ ಯಾರ ಮೇಲೆ ಬೀಳುತ್ತದೆ, ಇದನ್ನು ಎದುರಿಸತಕ್ಕಂಥವರು ಯಾರು? ಆ ಬಗ್ಗೆ ತಾವು ಸ್ವಲ್ಪವಾದರೂ ಆಲೋಚನೆ ಮಾಡಬೇಕು, ಅದನ್ನು ನೀವು ಮಾಡಿದರೆ ಖಂಡಿತವಾಗಿಯೂ ಈ ಎಲ್ಲಾ ಆಕ್ವಿಸಿಷನ್ ಮಾಡುವುದನ್ನು ನಿಲ್ಲಿಸುತ್ತಾರೆ, ಇದನ್ನು ಮಾಡುವುದಕ್ಕೆ ಬಿಡುವುದಿಲ್ಲ. ಅದು SEZ ಆಗಿರಬಹುದು, ಉಪನಗರವಾಗಿರಬಹುದು, ಎಲ್ಲವನ್ನು ಕೂಡಲೇ ನಿಲ್ಲಿಸಬೇಕು ಅಥವಾ ಬೆಂಗಳೂರಿನ ಹಸಿರು ವಲಯವನ್ನು ಕಾಪಾಡಿ ಸುತ್ತಮುತ್ತ ಯಾವ ಅಭಿವೃದ್ಧಿಗೆ ಬಿಡಬೇಡಿ. BDA, BMRDA ಗೆ, ಹೊಸದಾಗಿ ಅಭಿವೃದ್ಧಿಗೆ ನೀವೇನು ಕೊಡುತ್ತಿದ್ದೀರಿ ಅದನ್ನು ರದ್ದು ಮಾಡಿ, ಬೆಂಗಳೂರಿನಿಂದ 40 ಕಿ.ಮೀ. ಆಚೆ ನಗರವನ್ನು ಬೆಳೆಸಿ ಆಗ ಸಮತೋಲನವಾಗುತ್ತದೆ, ನಗರದ ಭವಿಷ್ಯಕ್ಕೆ

ಒಳ್ಳೆಯದಾಗುತ್ತದೆಂದು ಹೇಳಿ ನೀವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಎಲ್. ನರೇಂದ್ರ ಬಾಬು (ರಾಜಾಜಿನಗರ): ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು, ನಿಮ್ಮ ಮನಸ್ಸನ್ನು ನೋಯಿಸುವುದು ನನ್ನ ಉದ್ದೇಶವಲ್ಲ. ಆದರೆ ಈ ರಾಜ್ಯದ ಬೆಂಗಳೂರಿನ ಸುತ್ತಮುತ್ತಲಿನ ಜಮೀನಿನ ಧ್ವನಿಯಾಗಬೇಕೆಂದು ನಾನು ಎದ್ದು ನಿಂತಿದ್ದೇನೆ, ಏಕೆಂದರೆ ಬೆಂಗಳೂರಿನ ಪ್ರದೇಶದಲ್ಲಿ ಹುಟ್ಟಿರುವವನು ನಾನು. ನನ್ನದು ನೆಲಮಂಗಲ ಜನ್ಮಸ್ಥಳವಾದರೂ ಸುತ್ತಮುತ್ತಲಿನ ಹೊಸಕೋಟೆಯಾಗಲೀ, ದೊಡ್ಡಬಳ್ಳಾಪುರವಾಗಲೀ, ಸುತ್ತಮುತ್ತಲಿರುವ ನಮ್ಮ ಬಂಧುಗಳಾಗಲೀ, ರೈತ ಕುಟುಂಬಗಳಿಂದ ಬಂದು ತೋಟಗಾರಿಕೆ ಕುಲ ಕಸುಬುವುಳ್ಳ ಹಿನ್ನೆಲೆಯುಳ್ಳವ ನಾನು. ತೆನೆ ಹೊತ್ತ ರೈತ ಮಹಿಳೆ ಚಿನ್ಹೆ ಹೊತ್ತಿರುವ ಜನತಾದಳದ ಸರ್ಕಾರವಿರುವ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ಮತ್ತು ರೈತರ ಪರವಾಗಿ ಧ್ವನಿಯನ್ನು ಎತ್ತಿರುವ ಉಪ ಮುಖ್ಯಮಂತ್ರಿಗಳಾದ ಯಡಿಯೂರಪ್ಪವನವರಲ್ಲಿ ವಿನಂತಿ ಮಾಡುತ್ತೇನೆ. ಹೊಸಕೋಟೆಯಲ್ಲಿ ಬಹಳಷ್ಟು ಕುಟುಂಬಗಳಿಗೆ ಬೇರೆ ಕೆಲಸವಿಲ್ಲ, ಹೊಸಕೋಟೆಯಲ್ಲಿರುವ ದೊಡ್ಡ ಕೆರೆಯನ್ನು ನಂಬಿಕೊಂಡು ಕೃಷಿಯನ್ನು ಮಾಡುತ್ತಿದ್ದಾರೆ. ತರಕಾರಿ, ಸೊಪ್ಪನ್ನು ಬೆಳೆದು ಬೆಂಗಳೂರಿಗೆ ತಂದು ಹಾಕುತ್ತಿದ್ದೆವು. ಇವತ್ತು ಬಹುಶಃ ಬೆಂಗಳೂರಿನಲ್ಲಿ ಸೊಪ್ಪು, ತರಕಾರಿಗಳ ಬೆಲೆ ಜಾಸ್ತಿ ಏತಕ್ಕೆ ಆಗಿದೆ? ಅವು ಇವತ್ತು ಸಿಗುತ್ತಿಲ್ಲವೆಂದರೆ, ಬೆಂಗಳೂರಿನ ಸುತ್ತಮುತ್ತ ಐಟಿ ಬಿಟಿ ಬಂದ ಮೇಲೆ ಯಾರು ಕೂಡ ತೋಟಗಾರಿಕೆಯನ್ನು ಮಾಡುತ್ತಿಲ್ಲ. ಏಕೆಂದರೆ, ಯಾವಾಗ ಸರ್ಕಾರ ಬಂದು ಜಮೀನನ್ನು ವಶಪಡಿಸಿಕೊಳ್ಳುತ್ತದೆಯೋ, ಮೊದಲು ಮಾರಾಟ ಮಾಡಿ ಹೋಗೋಣ ಎನ್ನುವ ಆತಂಕದ ವಾತಾವರಣ ಸೃಷ್ಠಿ ಮಾಡಿದ್ದಾರೆ. ಇವತ್ತು ಗೋವಾ ನಗರದಲ್ಲಿ ಹೇಗೆ ಕರ್ನಾಟಕದ ಬೆಳಗಾಂ ಸುತ್ತಮುತ್ತಲಿಂದ ತರಕಾರಿ ಹೋಗುತ್ತದೆಯೋ ಅದೇ ರೀತಿ ಸ್ಥಿತಿ ಈ ರಾಜ್ಯ ಬೆಂಗಳೂರಿಗೆ ಬರುವ ಕಾಲ ದೂರವಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. 5000 ಎಕರೆ ಮಾತ್ರ ವಶಪಡಿಸಿಕೊಳ್ಳಬೇಕೆಂದು ಅಪ್ಪರ್ ಲಿಮಿಟ್ ಏನದೆ ಮತ್ತು ರೈತರ ಅನುಮತಿಯನ್ನು ಪಡೆಯಬೇಕೆಂದಿದೆ, ಇದನ್ನೆಲ್ಲಾ ವಿಸರ್ಜಿಸಿ ತೆಗೆದುಕೊಳ್ಳುವ ನಿರ್ಧಾರ ಸರಿಯೇ ಎಂದು ನಾನು ಈ ಸಂದರ್ಬದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ಹಿಂದೆ ರಾಮಕೃಷ್ಣ ಹೆಗ್ಡೆ ಅವರಿದ್ದಾಗ Export Oriented Unit ಎಂಬುದನ್ನು ಓದಿದ್ದು ನನಗೆ ಚೆನ್ನಾಗಿ ನೆನಪಿದೆ. ಇವತ್ತು

ನಿಮಗೆ ಗೊತ್ತಿರುವಂತೆ ರೈತರು, 79, 79 (ಎ) ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಚಾಲ್ತಿಯಲ್ಲಿದೆಯೆ ಎಂದು ನಾವು ಸಂಶಯಪಡುವ ರೀತಿಯಲ್ಲಿ ಬಂದಿದ್ದೇವೆ. ಬೆಂಗಳೂರು ನಗರದಲ್ಲಿ ಇವತ್ತಲ್ಲ ನಾಳೆ ಈ ಪರಿಸ್ಥಿತಿ ಮುಂದುವರೆಯುವುದಾದರೆ, ಬೆಂಗಳೂರಿನ ಸುತ್ತಮುತ್ತ ಇದ್ದಂಥ 270 ಜೀವಂತ ಕೆರೆಗಳು ಏನಾಯಿತು? ಇವತ್ತು ಲಕ್ಷ್ಮಣರಾವ್ ವರದಿ ಬಂತು, ನಗರದ ಸುತ್ತಮುತ್ತಲಿರುವ ಕೆರೆಗಳು ಏಕೆ ಡ್ರೈ ಆಗುತ್ತಿವೆ? ಇವತ್ತು ತಿಪ್ಪಗೊಂಡನಹಳ್ಳಿ ಏಕೆ ಬತ್ತಿ ಹೋಗಿದೆ. ಎಷ್ಟೊಂದು ಮಳೆ ಬಂದರೂ ಏಕೆ ಕೆರೆ ತುಂಬುತ್ತಿಲ್ಲವೆನ್ನುವುದನ್ನು ಅಧ್ಯಯನ ಮಾಡುವುದಕ್ಕೆ ಒಂದು ತಂಡ ಬಂದಿದೆ ಎಂದು ಉದಯವಾಣಿ ಪೇಪರ್‌ನಲ್ಲಿ ಓದಿದೆ. ಬಹುಶಃ ಬೆಂಗಳೂರಿನ ಕ್ಯಾಚ್‌ಮೆಂಟ್ ಎರಿಯಾ ಏನಿದೆ, ತಿಪ್ಪಗೊಂಡನಹಳ್ಳಿ ಕೆರೆ ಇರಬಹುದು, ಹೆಸರಘಟ್ಟದ ಕೆರೆ ಇರಬಹುದು, ಅಥವಾ ಕೆಂಪೇಗೌಡ ಬೆಂಗಳೂರನ್ನು ಕೆರೆಗಳ ಆಧಾರದ ಮೇಲೆ ಕಟ್ಟಿದರೆ ಹೊರತು ಯಾವುದೇ ನದಿಗಳ ಆಧಾರದ ಮೇಲೆ ಕಟ್ಟಲಿಲ್ಲ. ಇಂಥ ಒಂದು ನಗರವನ್ನು ಉಳಿಸಬೇಕಾ ಅಥವಾ ನಾಶ ಮಾಡಬೇಕಾ ಎಂಬುದನ್ನು ನೀವು ತೀರ್ಮಾನ ಮಾಡಬೇಕು. ನಿಮಗೆ ಗೊತ್ತಿರಬೇಕು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಲ್ಯಾಂಡ್ ಅಡಿಟ್ ಬ್ಯೂರೊ ಎಂದು ಒಂದು ಡಿಪಾರ್ಟ್‌ಮೆಂಟ್ ಇದೆ. ಅದು ಇನ್ನು ಜೀವಂತವಾಗಿದೆಯಾ ಅಥವಾ ಸತ್ತು ಹೋಗಿದೆಯಾ ಎಂದು ನಾನು ಕೈಗಾರಿಕಾ ಮಂತ್ರಿಗಳಲ್ಲಿ ಕೇಳುತ್ತೇನೆ. ಯಾವ್ಯಾವುದಕ್ಕೆ ಎಷ್ಟೆಷ್ಟು ಜಮೀನು ಕೊಡಬೇಕೆಂಬುದರ ಬಗ್ಗೆ ಏನಾದರು ಮಾನದಂಡವಿದೆಯಾ? ಎಂದು ದಯಾಮಾಡಿ ಹೇಳುತ್ತೇನೆ, ಡಾ:ನಂಜುಂಡಪ್ಪ ವರದಿಯ ಪ್ರಕಾರ ಈ ಕಾರ್ಖಾನೆಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ, ಏಕೆ ಈ ಫಲವತ್ತಾದ ಭೂಮಿಯ ಮೇಲೆ ಕಣ್ಣು, ಬೆಂಗಳೂರಿನ ಮೇಲೆ ಕಣ್ಣು. ಆಗಲೇ ದಿನೇಶ್ ಗುಂಡೂರಾವ್ ಅವರು ಹೇಳಿದಂತೆ ಕುಡಿಯುವುದಕ್ಕೆ ನೀರಿಲ್ಲ. ಇವತ್ತು ಲಕ್ಷ್ಮೀನಾರಾಯಣಪುರವಾಗಲಿ, ಗಾಯಿತ್ರಿನಗರವಾಗಲಿ, ನಾನು ಮುಖ್ಯಮಂತ್ರಿಗಳಿಗೆ ಫೋನ್ ಮಾಡಿ ಸ್ವಾಮಿ ದಯಮಾಡಿ ನೀರು ಕೊಡಿಸಿ, ಜಲಮಂಡಲಿಯವರಿಗೆ ಆಧಿಕಾರಿಗಳಿಗೆ ಹೇಳುವುದಕ್ಕಾಗುತ್ತಿಲ್ಲವೆಂದು ಹೇಳುತ್ತೇನೆ. ಇಂಥ ಸ್ಥಿತಿಯಲ್ಲಿ ಕಾರ್ಖಾನೆಗಳಿಗೆ, ಐಟಿಗಳಿಗೆ ನೀರನ್ನು ಎಲ್ಲಿಂದ ಕೊಡುತ್ತಿರಿ? ಇವತ್ತು ಮಂಗಳೂರಿನಲ್ಲಿ ಏರ್‌ಪೋರ್ಟ್ ಅಪ್‌ಗ್ರೇಡ್ ಮಾಡುವ ಕೆಲಸವಾಗುತ್ತಿದೆ..

ಶ್ರೀ ಡಿಟಿ..ಜಯಕುಮಾರ್(ವಸತಿ ಸಚಿವರು); ಕೆರೆಯನ್ನೆಲ್ಲಾ ಮುಚ್ಚಿಕೊಂಡವರ್‍ಯಾರು, ಆಗ ನಿಮ್ಮ ಸರ್ಕಾರ ಇದ್ದುದ್ದು ಅಲ್ಲವೆ? ಈಗ ನೀತಿಯನ್ನು ಹೇಳುತ್ತೀರಿ.

ಶ್ರೀ ಎನ್.ಎಲ್.ನರೇಂದ್ರ ಬಾಬು; ಆಗ ನಾನೇನು ಶಾಸಕನಾಗಿರಲಿಲ್ಲ ಕುಳಿತುಕೊಳ್ಳಿ. ಹುಬ್ಬಳ್ಳಿ, ಹಾಸನ, ಬೆಳಗಾಂ ಏರ್ಪೋರ್ಟ್‌ಗಳನ್ನು ಅಪ್‌ಗ್ರೇಡ್ ಮಾಡಿ, ಅಲ್ಲಿಗೆ ತೆಗೆದುಕೊಂಡು ಹೋಗುವ ಸ್ಥಿತಿ ಮಾಡಿ, ಅಲ್ಲಿಗೆ ಏಕಾನಾಮಿಕ್ ಜೋನ್ ಅನ್ನು ತೆಗೆದುಕೊಂಡು ಹೋಗಿ. ನಿಮಗೆ ಬಾಂಬೆ ಮಾಡಲ್ ನಿಮಗೆ ಗೊತ್ತಿದೆ, ಸ್ಯಾಚುರೇಷನ್ ಪಾಯಿಂಟ್ ರಿಚ್ ಆಗಿದೆ, ಇವತ್ತು ನಗರವನ್ನು ವಿಸ್ತಾರ ಮಾಡಬೇಕೆಂದು ಬಾಂಬೆನಲ್ಲಿ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ, ಬೆಂಗಳೂರಿನಲ್ಲಿ ಆ ನರ್ಧಾರವನ್ನು ತೆಗೆದುಕೊಳ್ಳಿ. ನಿಮಗೆ ಇನ್ನು ಮುಂದೆ ಇನ್ನು ಕಂಜೆಷನ್ ಆಗಿರುತ್ತದೆ. ಬಹುಶಃ ಪಶ್ಚಿಮ ಭಾಗದಿಂದ ಬೆಂಗಳೂರಿಗೆ ಬರಬೇಕಾದರೆ ಎಷ್ಟು ಕಷ್ಟವಾಗಿದೆ ಎಂಬುದು ಬಹುಶಃ ನಿಮಗೆ ಗೊತ್ತಿರಬಹುದು. ಈ ಸಂದರ್ಭದಲ್ಲಿ ಮತ್ತೊಂದು ಕೇಳುತ್ತೇನೆ, ಈ ಕೃಷಿ ಆಧಾರಿಸಿದ ರಾಜ್ಯದಲ್ಲಿ 70% ಜನಸಂಖ್ಯೆ ಕೃಷಿ ಮತ್ತು ಕೃಷಿ ಅವಲಂಬಿತ ಕೆಲಸಗಳನ್ನು ಅವಲಂಬಿಸಿರುತ್ತಾರೆ. ಈ ರಾಜ್ಯದಲ್ಲಿ ಇಂಥ Special Economic Zone, ಬಹುಶಃ ರೈತನ ಸಮಾಧಿಯ ಮೇಲೆ ಯಾರೋ ಮೃಷ್ಟಾನ್ನ ಉಣ್ಣಲಿಕ್ಕೆ ನಾವು ಅವಕಾಶ ಕೊಡುವುದು ಬೇಡ. ದಯಮಾಡಿ ಈ SEZಗಳನ್ನು ಕೇಂದ್ರ ಸರ್ಕಾರ, ಕೃಷಿ ಮತ್ತು ಉದ್ಯೋಗ ಸೃಷ್ಟಿ ಮಾಡುವುದಕ್ಕೆ, ರಫ್ತು ಮಾಡುವುದಕ್ಕೆ, ವಿದೇಶಿ ವಿನಮಯವನ್ನು ಹೆಚ್ಚು ಮಾಡುವುದಕ್ಕೆ ಮಾಡುತ್ತಿರುವುದು ಉದ್ದೇಶ. ಅದನ್ನು ಇಲ್ಲೇ ಮಾಡಿ ಎಂದಲ್ಲ, ತೆಗೆದುಕೊಂಡು ಹೋಗಿ ಬೇರೆ ಕಡೆ ಮಾಡಿ, ದಯಮಾಡಿ SEZ ಹೆಸರಿನಲ್ಲಿ ಬೆಂಗಳೂರನ್ನು ನಾಶ ಮಾಡಬೇಡಿ ಎಂದು ಮನವಿ ಮಾಡಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ನಾವು ಇಷ್ಟು ಸಹಕಾರವನ್ನು ಮಾಡಿದ್ದೇವೆ, 2 ಗಂಟೆಗೆ ಉತ್ತರ, 3 ಗಂಟೆಗೆ ಕ್ಲಾರಿಫಿಕೇಷನ್ ಹೇಗೆ? It will go up to 4 o' clock. ಊಟ ಮಾಡಿ ಮತ್ತೆ ಮೂರು ಗಂಟೆಗೆ ಸೇರೋಣ.

ಅಧ್ಯಕ್ಷರು: ಯಾವಾಗಲೂ ನಿಯಮ 69ಕ್ಕೆ ಒಂದು ಗಂಟೆ ಫಿಕ್ಸ್ ಮಾಡಬೇಕೆಂದು ಇದೆ, ಈಗ ಎಷ್ಟು ಗಂಟೆಯಾಯಿತು ನೋಡಿ.

ಶ್ರೀ ಎನ್.ಧರ್ಮಸಿಂಗ್: ನಾವೇನು ಮಾಡೋಣ, ನೀವು ಧಾರಳವಾಗಿ ಸಮಯವನ್ನು ಕೊಟ್ಟಿದ್ದಿರಿ, ನೀವು ಕನ್ವರ್ಟ ಮಾಡಿದಿರಿ, ಇಲ್ಲದಿದ್ದರೆ ಚರ್ಚೆನೇ ಆಗುತ್ತಿರಲಿಲ್ಲ.

ಅಧ್ಯಕ್ಷರು: ನೋಡಿ, ನೀವು ಕೊಟ್ಟಿದ್ದರಿಂದ ಎಂದು ಹೇಳಿದಿರಿ, ಇದೇನಾ ನೀವು ತೀರ್ಪು ಕೊಡುವುದು? ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರಂತೆ, ಅವರು ಕೊಡುವುದಕ್ಕೆ ರೆಡಿ ಇದ್ದಾರೆ.

ಶ್ರೀ ಸಿದ್ಧರಾಮಯ್ಯ: ಯಡಿಯೂರಪ್ಪನವರೆ, ಊಟ ಮಾಡಿಕೊಂಡು 3 ಗಂಟೆಗೆ ಉತ್ತರ ಕೊಟ್ಟರೆ ಏನಾಗುತ್ತದೆ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಈ ಬಗ್ಗೆ ಅಧ್ಯಕ್ಷರ ತೀರ್ಮಾನದಂತಾಗಲಿ.

ಅಧ್ಯಕ್ಷರು: ಅದೆಲ್ಲಾ ನಮ್ಮ ತಪ್ಪಿನಿಂದ ಆಗಿರುವುದು. ನಾನು ಒಂದು ಗಂಟೆಗೆ ನಿಲ್ಲಿಸಬೇಕೆಂದು ಇದ್ದೆ. ನೀವು ಎಲ್ಲಾ ತಲೆ ಮೇಲೆ ಕುಳಿತು ಜುಟ್ಟು ಹಿಡಿದು ಅಲ್ಲಾಡಿಸಿ, ಒಂದು ಗಂಟೆ extend ಮಾಡಿಸಿದಿರಿ.

ಶ್ರೀ ಸಿದ್ದರಾಮಯ್ಯ: ನಮಗೆ ಧನ್ಯವಾದಗಳು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಣ್ಣನವರು 3.00 ಗಂಟೆಗೆ ಉತ್ತರ ಕೊಡಿ ಎಂದು ಹೇಳುತ್ತಿದ್ದಾರೆ. ಹಾಗೆಯೇ ಆಗಲಿ.

ಅಧ್ಯಕ್ಷರು: ಈಗ ಸದನವನ್ನು ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಎರಡು ಗಂಟೆ ಒಂದು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಅಪರಾಹ್ನ 3.00 ಗಂಟೆಗೆ ಸೇರುವಂತೆ ನಿರ್ಧರಿಸಲಾಯಿತು)

(ಸಭೆಯು ಭೋಜನ ವಿರಾಮದ ನಂತರ ಮಧ್ಯಾಹ್ನ 3.28 ಗಂಟೆಗೆ ಸಮಾವೇಶಗೊಂಡಿತು, ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

5. ಚುನಾವಣಾ ಪ್ರಸ್ತಾವ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಡಳಿತ ಮಂಡಳಿಗೆ ಒಬ್ಬ ವಿಧಾನಸಭಾ ಸದಸ್ಯರನ್ನು ಚುನಾಯಿಸುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿ): ಎಂ.ಪಿ.ಪ್ರಕಾಶ್ (ಗೃಹ, ಕಾನೂನು,ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ) ಪರವಾಗಿ, ಮಾನ್ಯ ಅಧ್ಯಕ್ಷರೆ, 1991ರ ಹಂಪಿ ಕನ್ನಡ ವಿಶ್ವವಿದಾಲಯದ ಅಧಿನಯಮದ ಅಧ್ಯಾಯ-3(19(1)(ಎನ್)ರ ರೀತ್ಯಾ ಸದರಿ